ಶಿರೂರು ಫಣಿಯಪ್ಪಯ್ಯ ವಿರಚಿತ

ಯಕ್ಷಗಾನ ಪ್ರಸಂಗಸಂಪುಟ

(ಭಾಗ ಒಂದು)



ಸಂಪಾದಕರು:
ಡಾ. ಕಬ್ಬಿನಾಲೆ ವಸಂತ ಭಾರದ್ವಾಜ
ಪ್ರಕಾಶಕರು:
ಫಣಿಗಿರಿ ಪ್ರತಿಷ್ಠಾನ ಶಿರೂರು

ಶಿರೂರು ಫಣಿಯಪ್ಪಯ್ಯ ವಿರಚಿತ

ಯಕ್ಷಗಾನ ಪ್ರಸಂಗಸಂಪುಟ

[ಭಾಗ-ಒಂದು]

ಸಂಪಾದಕರು
ಡಾ. ಕಬ್ಬಿನಾಲೆ ವಸಂತ ಭಾರದ್ವಾಜ

ಫಣಿಗಿರಿ ಪ್ರತಿಷ್ಠಾನ
ಶಿರೂರು, ಬೈಂದೂರು ತಾಲೂಕು
ಉಡುಪಿ ಜಿಲ್ಲೆ - ೫೭೬೨೨೮

Shiroor Phaniyappayya virachita Yakshagana Prasanga Samputa [Part-I] Edited by Dr. Kabbinale Vasantha Bharadwaj (Mob: 99450 55534) and published by Umesh Shirur (94483 53910) for Phani Giri Pratishthana, Shiroor, Byndoor Taluk, Udupi District, Karnataka 576228.

Year of Publication : 2022

No.of Pages : 290

Price : Rs. 300/-

Paper Used : 70 gsm Maplitho

Size : 1/8 demi

Printed at : Techfiz. Inc., 60/46/2, 10th B Main, 1st Block, Jayanagar, Bengaluru - 560011

ಅರ್ಪಣೆ

ನನ್ನ ಅಣ್ಣಂದಿರಾದ

ದಿ|| ಶಿರೂರು ದೇವಪ್ಪಯ್ಯ

ದಿ|| ಶಿರೂರು ಪರಮೇಶ್ವರಯ್ಯ

ಮತ್ತು

ದಿ|| ಪ್ರಭಾಕರಯ್ಯ ಇವರಿಗೆ

ಉಮೇಶ ಶಿರೂರು

ಪ್ರಸಂಗಪ್ರಸ್ತಾವನೆ

ಶ್ರೀ ಶಿರೂರು ಫಣಿಯಪ್ಪಯ್ಯನವರ ಐದು ಯಕ್ಷಗಾನ ಪ್ರಸಂಗಗಳು ಇಲ್ಲಿ ಸಂಕಲನಗೊಂಡಿವೆ. ಅವುಗಳಲ್ಲಿ 'ಮದಾಲಸಾಪರಿಣಯ'ವು ಭಾಗವತಪುರಾಣದ ಕಥೆಯಾದರೆ 'ನಹುಷೋದ್ಭವ'ವು ಪದ್ಮಪುರಾಣದ ವಸ್ತು. 'ಭೂಮಿಕಾಪರಿಣಯ' ಮತ್ತು 'ಶ್ವೇತಚಂದ್ರಿಕೆ'ಗಳು ಕಾಲ್ಪನಿಕ ಆಖ್ಯಾನಗಳಾದರೆ ಕೊನೆಯ 'ಶ್ರೀ ಅಬ್ಯಾಡಿ ಕ್ಷೇತ್ರಮಹಾತ್ಮೆ'ಯು ಸ್ಥಳಪುರಾಣವನ್ನು ಆಧರಿಸಿದೆ. ಸ್ವತಃ ಯಕ್ಷಗಾನ ಭಾಗವತರಾಗಿದ್ದ ಶಿರೂರು ಫಣಿಯಪ್ಪಯ್ಯನವರಿಗೆ ವಿವಿಧ ಛಂದೋಬಂಧಗಳು ಕರತಲಾಮಲಕವಾಗಿದ್ದವು. ಜೊತೆಗೆ ಸಂಸ್ಕೃತ–ಕನ್ನಡ ಭಾಷೆಗಳಲ್ಲಿ ಪಾಂಡಿತ್ಯವೂ, ರಂಗನಿರ್ವಹಣೆಯ ಕೌಶಲವೂ ಅವರಿಗೆ ಒಲಿದು ಬಂದಿತ್ತು. ಸುಮಾರು ಹದಿನೈದು ಪ್ರಸಂಗಗಳನ್ನು ರಚಿಸಿದ್ದ ಅವರು ನೂರಾರು ಪ್ರಾಚೀನ ಪ್ರಸಂಗಗಳನ್ನು ಮತ್ತು ಕನ್ನಡ ಕಾವ್ಯಗಳನ್ನು ಬರೆದಿಟ್ಟುಕೊಂಡಿದ್ದರು. ಅನೇಕ ತಾಡವಾಲೆ ಪ್ರತಿಗಳನ್ನು ಸಂರಕ್ಷಿಸಿಕೊಂಡು ಬಂದಿದ್ದರು. ಮೂಲಿಕೆ ವೆಂಕಣ್ಣಕವಿಯ 'ಮಾನಸಚರಿತ್ರೆ' ಎಂಬ ಅಪೂರ್ವಪ್ರಸಂಗದ ತಾಳೆಗರಿ ಮತ್ತು ಹಸ್ತಪ್ರತಿ ಇವರ ಸಂಗ್ರಹದಿಂದಲೇ ಲಭ್ಯವಾದವು ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಇವರು ರಚಿಸಿದ 'ಶ್ರೀಕೃಷ್ಣಗಾರುಡಿ' ಮತ್ತು 'ವಾಜಿಗ್ರಹಣ' ಪ್ರಸಂಗಗಳು ಈಗಾಗಲೇ ಮುದ್ರಣವಾಗಿದ್ದು, ಈಗ ಈ ಮೇಲಿನ ಪ್ರಸಂಗಪಂಚಕಗಳು ಸಂಪುಟರೂಪದಲ್ಲಿ ಬೆಳಕಿಗೆ ಬರುತ್ತಿರುವುದು ಸಂತಸದ ಸಂಗತಿ. ಈ ಪ್ರಸಂಗಗಳಲ್ಲಿ ಕವಿಪ್ರತಿಭೆ ಸಾಧಿಸಿದ ಸಾಹಿತ್ಯಸೌಂದರ್ಯದ ಬಗೆಗೆ ಪ್ರಾಸ್ತಾವಿಕವಾಗಿ ನಾಲ್ಕು ಮಾತುಗಳನ್ನು ಬರೆಯಲು ನನಗೆ ಮುದವೆನಿಸುತ್ತದೆ.

ಯಕ್ಷಗಾನ ಪ್ರಸಂಗಗಳನ್ನು 'ಕಾವ್ಯ'ವೆಂದು ಕರೆದು, ಅವುಗಳನ್ನು ರಚಿಸಿದವರನ್ನು ಪ್ರಸಂಗಕರ್ತರೆಂದು ಕರೆಯದೆ 'ಕವಿ'ಗಳೆಂದೇ ಹೆಸರಿಸ ಬೇಕೆನ್ನುವುದು ನನ್ನ ಹೆಬ್ಬಯಕೆ. ಅದಕ್ಕೆ ಪೂರಕವಾಗಿ ಇಲ್ಲಿರುವ ಕಾವ್ಯದ ಚೆಲುವನ್ನು ಒಂದೊಂದಾಗಿ ಸಹೃದಯರ ಮುಂದೆ ತೋರಣಗಟ್ಟಬೇಕೆನಿಸುತ್ತದೆ. ಭಾಷೆ, ಅಲಂಕಾರ, ವರ್ಣನೆ, ಛಂದೋಬಂಧಗಳು, ಸಂವಾದರಮ್ಯತೆ, ಸಂಸ್ಕೃತಿನಿಷ್ಠೆ ಮುಂತಾಗಿ ಅದರ ಹಾಸುಬೀಸುಗಳನ್ನು ಇಲ್ಲಿ ಪೃಥಕ್ಕರಿಸಿ ನೋಡಬಹುದು.

ಭಾಷೆ ಮತ್ತು ಶೈಲಿ :

ಈ ಪ್ರಸಂಗಗಳ ನಡುಗನ್ನಡ ಶೈಲಿ ಯಕ್ಷಗಾನಕ್ಕೆ ಒಪ್ಪುವಂತಹುದು. ಸಂಸ್ಕೃತ–ಕನ್ನಡಗಳ ಹದವರಿತ ಮಿಶ್ರಣದಿಂದ ಇಲ್ಲಿಯ ಸಾಹಿತ್ಯಕ್ಕೆ ಸಹಜಸೌಂದರ್ಯ ಪ್ರಾಪ್ತವಾಗಿದೆ. ಸಂಸ್ಕೃತದ ಸೂದ (ಅಡುಗೆಯವನು), ಆಖು (ಇಲಿ), ದುಹಿತೃ (ಮಗಳು), ಅಬ್ದಷೋಡಶ (ಹದಿನಾರರ ಹರೆಯ), ಚಲನಸಖ (ಅಗ್ನಿ) ಮುಂತಾದ ಪದಗಳ ನಡುವೆ ಅಚ್ಚಗನ್ನಡದ ಉಲಿ (ಕೂಗು), ಸಾಣೆಯಲಗು (ಹರಿತವಾದ ಬಾಣ), ನೆಗಹು (ಎತ್ತು), ನೊರಜು (ಕ್ಷುಲ್ಲಕ ಕೀಟ), ಬೆನಕ (ವಿನಾಯಕ), ಹಂದೆ (ಹೇಡಿ), ಹೊಳಲು (ಪಟ್ಟಣ), ಹೊಲಬು (ಪರಿಚಯ), ಕೆಳದಿ (ಗೆಳತಿ), ಆಲವಟ್ಟ (ಬೀಸಣಿಗೆ) ಮುಂತಾದ ಹಲವಾರು ಶಬ್ದಗಳು ಪ್ರಸಂಗದ ಸಾಹಿತ್ಯಮೌಲ್ಯವನ್ನು ಹೆಚ್ಚಿಸಿವೆ. 'ಸಖಿ' ಎಂಬ ಶಬ್ದವನ್ನು ಸಂಸ್ಕೃತದಂತೆ ಪುಲ್ಲಿಂಗರೂಪದಲ್ಲೇ ಬಳಸಿದುದು, 'ಸರ್ವ' ಶಬ್ದವನ್ನು 'ಸರ್ಬ' ಎಂಬ ರೂಪದಲ್ಲಿ ಪ್ರಯೋಗಿಸಿರುವುದು, 'ಗಾರ್ಹಸ್ಥ್ಯ' ಎಂಬುದು 'ಗಾರಿಹಸ್ಥ್ಯ'ವೆಂಬ ವಿರಳೋಚ್ಚಾರದಲ್ಲಿ ಮೈದಳೆದಿರುವುದು ಇತ್ಯಾದಿ ಗಮನಾರ್ಹ. 'ಹೇರಳ'ವೆಂಬುದರ ಮೂಲರೂಪ 'ಹೇರಾಳ'ವೇ ಹೌದು! ಆಳವಾದ ಕಡೆ ಹೇರನ್ನು ಹಾಕುವುದು ಎಂಬುದು ಅದರ ವ್ಯುತ್ಪತ್ತಿ. ಗದುಗಿನಭಾರತ, ತೊರವೆ ರಾಮಾಯಣಗಳಲ್ಲಿ ಈ ಪ್ರಯೋಗವಿದೆ. ಇದರೊಂದಿಗೆ 'ಎವಗೆ' (ನಮಗೆ), 'ಏವೆನ್' (ಏನು ಮಾಡಲಿ), 'ಏಸರ' (ಎಷ್ಟರ), 'ಐಸಲೇ' (ಹೌದಲ್ಲಾ), 'ಪಳಂಚು' (ತಾಗು) ಇವೇ ಮುಂತಾದ ಅಪೂರ್ವ ಶಬ್ದಗಳನ್ನು ಬಳಸಿದುದು ಆಧುನಿಕಕಾಲದಲ್ಲಿ ಮರೆಯಾಗುತ್ತಿರುವ ಕನ್ನಡಭಾಷಾ ಪದಸಂಪತ್ತಿಯನ್ನು ಉಳಿಸಬೇಕೆಂಬ ಕವಿವಾಂಛೆಗೆ ನಿದರ್ಶನಗಳಾಗಿವೆ. ಇನ್ನು ಮತ್ತರಳೆ, ಮತ್ಸುತ, ಮದ್ರಮಣಿ, ಮಜ್ಜನಕ ಮುಂತಾದ ಸಂಸ್ಕೃತಪದಪ್ರೀತಿಯೊಂದಿಗೆ, ಸಂಸ್ಕೃತ–ಕನ್ನಡ ಪದಗಳನ್ನು ಸೇರಿಸಿದ ಅರಿಸಮಾಸವನ್ನು ಮೈಲಿಗೆಯೆಂದು ತಿಳಿಯದೆ ಪಾವಾಧೀಶ, ಸಜ್ಜಾಲಯ, ತಾವರ್ಯೋದರ, ಮೇಲುಪಂಕ್ತೀಶ, ನಾಕದೂರು ಇತ್ಯಾದಿ ಪದಗಳನ್ನು ಬಳಸಿದುದೂ ಗಮನಾರ್ಹ.

ಇದರೊಂದಿಗೆ ಕವಿಯ ದೇಸೀಪ್ರೀತಿಯನ್ನೂ ನಾವು ಮರೆಯುವಂತಿಲ್ಲ. ಒಂದೆರಡು ಉದಾಹರಣೆಗಳು:

ಖಳನೆನ್ನೊಳು ಕಾದಿ । ಸೋತನು ।
ಬಳಿಕಾ ಮಾಯಕದಿ ॥
ತಳೆಯುತ ಸೂಕರ ರೂಪದಿ ಬೆರಸಲು ।
ಅಳುಕದೆ ನಾ ಪೊಸ । ಹಿಳುಕಿನೊಳೆಸೆಯಲು ॥ (1–210)

ಇಲ್ಲಿಯ 'ಬೆರಸು' ಅಟ್ಟಿಸಿಕೊಂಡುಹೋಗು ಎಂಬರ್ಥದ ಕುಂದಾಪುರ ಪರಿಸರದ ಆಡುಮಾತು.

ಈಕೆ ಎನ್ನನು ಹೊರತು ಅನ್ಯಪುರುಷರನು ತಾ
ನೀಕೆನೆಂಬುದ ತಿಳಿದು ಎನ್ನ ॥
ತಾ ಕೊಲಲು ಶಿಶುವನಪಹರಿಸಿ ಪಿತಮಾತೆಯರ
ಶೋಕಾಬ್ಧಿಗೊಳಿಸಿದ ದುರಾತ್ಮ ॥ (2-295)

"ಅನ್ಯಪುರುಷರನು ತಾ ನೀಕೆ" ಎಂಬಲ್ಲಿ ಇಣುಕಿನೋಡುವುದಿಲ್ಲ ಎಂಬರ್ಥದ ದೇಸೀಪ್ರಯೋಗವನ್ನು ನೋಡಬಹುದು. ('ಇಣುಕು' ಎಂಬುದೇ 'ನೀಕು' ಆಗಿರಬೇಕು.) ಕುಂದಗನ್ನಡದಲ್ಲೇ ರಚನೆಗೊಂಡ ಒಂದು ಪದ್ಯವನ್ನೂ ಇಲ್ಲಿ ಗಮನಿಸಬಹುದು.

ವಡ್ಯ ಕೇಂಡ್ಕಣ್ಕ್ ಸುದ್ದಿ । ನಡೆದದ್ದೇಳ್ತೆವು ಬುದ್ಧಿ ।
ಗಿಡದಡ್ಡಂಡ್ಕಂಡು ಕೇಂಡೆವು । ಅವರಾಡ್ದ ಮಾತ ।
ಗಿಡದಡ್ಡಂಡ್ಕಂಡು ಕೇಂಡೆವು ॥ (2-298)

ವಡ್ಯ, ಎಡ್ಯ, ಕೇಂಡ್ಕಣ್ಕ್, ಅಂಡ್ಕಂಡ್, ಕೇಂಡೆವು ಎಂಬ ಪ್ರಯೋಗಗಳು ಸುಂದರ. ಇನ್ನು ಅಲ್ಲಲ್ಲಿ ಕಂಡುಬರುವ ಗಾದೆಮಾತುಗಳೂ ಜನಸಾಮಾನ್ಯರ ಮನಸ್ಸನ್ನು ಸೆಳೆಯುವಂತಿವೆ. "ಜಲದೊಳು ಬಿದ್ದ ಲವಣದಂದದಿ ಕರಗುತಿಹನು", "ಹರಿಯುವ ನಾವೆಯನು ನಡುನೀರೊಳದ್ದಿದ ತೆರದೊಳೆಸಗಿದೆಯಾ", "ಕನಸಿನಲಿ ಕಂಡೋಗರವ ಸವಿದುಂಡ ಜನರುಂಟೆ" ಇತ್ಯಾದಿ.

ದೇಶದೇಶಾಧಿಪತಿಗಳಿಗೋಲೆಯನು ಚರರು ।
ಬೇಸರದೆ ಕೊಡುತ ಸಂಚರಿಸಿ ॥ (5-33)

ಇಲ್ಲಿ 'ಬೇಸರದೆ' ಎಂಬುದು 'ಬೇಸರಿಸದೆ' ಎಂಬ ನಿಷೇಧರೂಪದಲ್ಲಿರುವುದು ವಿಶೇಷ ಪ್ರಯೋಗವೇ ಸರಿ. ಕುಮಾರವ್ಯಾಸ ಭಾರತದಲ್ಲೂ ಈ ಪ್ರಯೋಗವಿದೆ. ("ಹತ್ತಿದರು ಬೇಸರದೆ ಕಲುದರಿಗಳಲಿ ಬಹಳ ಶ್ವೇತಪರ್ವತವ" - ಸಭಾ : 3-57) 'ನಮ್ಮಿಂದ ಹರಿವ ಯತ್ನದೊಳು ನಿನಗೆ' (1-289) ಇಲ್ಲಿ 'ಹರಿ' ಎಂಬುದು 'ಸಾಧ್ಯವಾಗು' ಎಂಬರ್ಥದಲ್ಲಿದೆ. ("ಹರಿವುದಿದು ನಯಶಕ್ತಿಗೆಂಬುದ"-ಕೃ-ವ್ಯಾ ಸಭಾ : 1-41) ಆಡುಮಾತಿನಲ್ಲಿ ಇದಕ್ಕೆ ಹೀನಾರ್ಥ ಪ್ರಾಪ್ತಿಯಾಗಿರುವುದನ್ನು ಗಮನಿಸಬಹುದು.

ಅಲಂಕಾರ ಮತ್ತು ವರ್ಣನೆ :

ಈ ಕವಿಗೆ ಉಪಮಾಲಂಕಾರಕ್ಕಿಂತಲೂ ಹೆಚ್ಚಾಗಿ ರೂಪಕಾಲಂಕಾರವನ್ನು ಸಾಧಿಸುವಲ್ಲಿ ತುಂಬಾ ಪ್ರೀತಿ. ಮುನಿಕುಲಾಬ್ಧಿಚಂದ್ರಮ, ಪೂರ್ಣೇಂದುಮುಖಿ, ಖಳಕುಲಾಬ್ಧಿಶಶಾಂಕ, ಮನ್ಮಥನರಗಿಣಿ, ಚರಣಾಬ್ಜ, ಕೀರ್ತಿಲತೆ, ಕೋಲಮಳೆ ಮುಂತಾದ ಪದಪ್ರಯೋಗಗಳಿಂದ ಇದು ಸುವ್ಯಕ್ತ. 'ಮನೋರಥದ ಕೈ ಬೆಳೆದುದು', 'ಸವೆದುದೊಂದಬ್ದ' ಮುಂತಾದ ಚಿತ್ರಗಳಲ್ಲಿ ಅಮೂರ್ತವನ್ನು ಮೂರ್ತಗೊಳಿಸುವ ಕವಿಹೃದಯವಿದೆ.

ನಂದನವನದಲ್ಲಿರುವ ಕಲ್ಪತರುವಿನಲ್ಲಿ ಅಶೋಕಸುಂದರಿಯು ಆವಿರ್ಭವಿಸಿದಾಗ ಪಾರ್ವತಿಯು ಅವಳನ್ನು ಕಂಡು ಬಣ್ಣಿಸುವ ಒಂದು ಪದ್ಯ ಹೀಗಿದೆ:

ಅರರೆ ಹಿಮಕರನುದಿಸಿದನೊ ಹರ
ಶಿರದೊಳಿಹನವನಲ್ಲ ಪಂಕಜ
ವರಳಿತೋ ಜಲವಿಲ್ಲವುದಯಿಸ
ಲರಿದು ಸುದತಿಯ ವದನವೊ ॥

ಮದನನನು ಹರನುರಿಸಿದನುಯೆಂ
ಬುದಕೆ ರತಿಯೈತಂದಳೆಂಬೆನೆ
ಮುದವಿಹುದು ವದನದೊಳು ರತಿಯ
ಲ್ಲದು ತರುಣಿಕುಲರತ್ನವು ॥ (2–41, 42)

ಇಲ್ಲಿಯ ಕಲ್ಪಕತೆ ಮನೋಹರವಾದುದು. ಅಶೋಕಸುಂದರಿಯ ಸೌಂದರ್ಯವನ್ನು ವರ್ಣಿಸುವಲ್ಲಿ ಅನನ್ಯವಾದ ರೀತಿಯನ್ನು ಇಲ್ಲಿ ನೋಡಬಹುದು. "ಇದು ಅಚ್ಚರಿಯೇ ಸರಿ! ಚಂದ್ರೋದಯವಾಯಿತು ಎನ್ನೋಣವೇ? ಚಂದ್ರನು ಶಿವನ ಜಟಾಜೂಟದಲ್ಲಿದ್ದಾನೆ! ತಾವರೆಯು ಅರಳಿತು ಎನ್ನೋಣವೇ? ಇಲ್ಲಿ ಸರೋವರದ ನೀರೇ ಇಲ್ಲ. ಇದು ಈ ಸುಂದರಿಯ ಮುಖವೇ ಸತ್ಯ! ಕಾಮದಹನದ ಬಳಿಕ ರತಿಯೇ ಇಲ್ಲಿಗೆ ಬಂದಳೆಂದು ಭಾವಿಸೋಣವೇ? ಅವಳ ಮುಖದಲ್ಲಿ ದುಃಖದ ಛಾಯೆಯಿಲ್ಲ! ಹಾಗಾದರೆ ಇವಳು ರತಿಯಲ್ಲ; ಕನ್ಯಾರತ್ನವೇ ಹೌದು!" ಎಂದು ಪ್ರಕಾರಾಂತದಿಂದ ಅಶೋಕ ಸುಂದರಿಯನ್ನು ಬಣ್ಣಿಸಿದ ರೀತಿ ಎಷ್ಟೊಂದು ಸೊಬಗಾಗಿದೆ!

ಇನ್ನೊಂದು ನಗರವರ್ಣನೆ 'ಮದಾಲಸಾ ಪರಿಣಯ'ದಿಂದ:

ಅಹಹಾ ಏನೆಂಬೆ ಸೋಜಿಗವ । ಇಲ್ಲಿ ।
ಬಹುಸಂಭ್ರಮದೊಳಿರುತಿರ್ಪ ಪಟ್ಟಣವ ॥
ಸುರಪುರವನು ಧಿಕ್ಕರಿಸುತ । ಇರು ।
ತಿರುವುದು ಸೊಬಗನೇನೆಂಬೆನೈ ಸತತ ॥
ವರಮನೋಹರವಾಗಿ ತೋರ್ಪ । ಪುರ ।
ವರವಿದಾಳುವ ಧರಣಿಪನಾವನಿರ್ಪ (1-178)

ಅಭಿನಯಕ್ಕೆ ಆಸ್ಪದವೀಯುವಂತಹ ಪದ್ಯರಚನೆಯಿದು. ಆರಂಭದ 'ಅಹಹಾ' ಎಂಬ ಉದ್ಗಾರವೇ ಪರಿಣಾಮಕಾರಿಯಾದುದು. ಯುಗ್ಮಪಾದಗಳಲ್ಲಿರುವ ಅಂತ್ಯಪ್ರಾಸದೊಂದಿಗೆ ಸೋಜಿಗ, ಸಂಭ್ರಮಗಳನ್ನು ಸರಳವಾದ ಶಬ್ದಗಳಿಂದ ನಾದಮಯಗೊಳಿಸಿದ ರೀತಿ ಮನೋಹರವಾದುದು.

ಸಂವಾದದ ಚೆಲುವು :

ಹುಂಡಾಸುರ ಮತ್ತು ಅಶೋಕಸುಂದರಿಯರ ನಡುವಿನ ಸಂವಾದಭಾಗ ರಂಗದಲ್ಲಿ ಪ್ರೇಮನಿವೇದನೆ ಮತ್ತು ನಿರಾಕರಣೆಗಳ ರಸಪಾಕ.

ಬಾಳುವೀ ಯವ್ವನವ ವ್ಯರ್ಥದಿ
ಹಾಳುಗೆಡಹುತ ಮುಂದೆ ವಾರ್ಧಿಕ
ಕಾಲದೊಳು ಪತಿಯೊಲಿಸಲೇನ್ ಫಲ
ಲೋಲನಯನೆ ॥

ಲೋಕನಿಂದೆಯು ಬೇರಹುದು ಹಿರಿ
ಯಾಕೆ ವಲ್ಲಭೆಯೆನುತ ಬರಿದವಿ
ವೇಕಕೆಡೆಗೊಡದೆನ್ನನೊಲಿಸು ಪಿ
ನಾಕಿಯಣುಗೆ ॥ (2-65, 66)

ಎನಲೆಂದಳೆಲವೊ ಪಿಂದುದಿಸಿದ ರೇವತಿ
ಯನು ಮುಂದೆ ದ್ವಾಪರದಿ ।
ಜನಿಸುವ ಬಲರಾಮನೊಲಿಸುವನೆಂದಿದ
ರನು ಪಿಂದೆ ನುಡಿದಿರ್ಪರು ॥

ಅದರಂತೆ ಎನ್ನ ಭವಿಷ್ಯವ ಜನನಿಯು
ಮೊದಲೆ ಪೇಳಿಹಳದನು ।
ವಿಧಿಯ ಮೀರೆನು ನಹುಷನ ಹೊರತನ್ಯರ
ಮದುವೆಯಾಗೆನು ನಿಶ್ಚಯ ॥ (2-67, 69)

ಹಿರಿಯ ವಯಸ್ಸಿನ ಹೆಣ್ಣನ್ನು ಮದುವೆಯಾಗಬಾರದೆಂಬ ಸಾಮಾಜಿಕ ನಿಬಂಧನೆ ಮತ್ತು ಅದನ್ನು ಮೀರಿದ ಪೌರಾಣಿಕ ಘಟನೆಗಳನ್ನು ಇಲ್ಲಿ ಮುಖಾಮುಖಿಯಾಗಿಸಿರುವುದು ಕುತೂಹಲಕರವಾಗಿದೆ. ಇದರಿಂದ ಸಂವಾದ ಭೂಮಿಕೆಗೆ ತರ್ಕದ ಬಲ ಬಂದಂತಾಗಿದೆ. ಹಾಗೆಯೇ ಹೆಣ್ಣುಶಿಶುವಿನ ಜನನದಿಂದ ವಂಶೋದ್ಧಾರವಾಗುವುದಿಲ್ಲವೆಂಬ ವಿಚಾರಸರಣಿಯೂ ಪ್ರಾಚೀನ ಸಮಾಜದ ಪ್ರತಿಗಾಮೀಧೋರಣೆಗೆ ಸಾಕ್ಷಿಯಾಗಿರುವುದು ಗಮನಾರ್ಹ. ಆದರೆ ಇದು 'ರಾಕ್ಷಸಚಿಂತನೆ' ಎಂಬುದು ಸಮಾಧಾನಕರ ಸಂಗತಿ.

ಅಣುಗರುದಿಸುವ ಕುರುಹನರಿತರೆ
ಹನನಗೊಳಿಪುದು ಗರ್ಭವನು ಹೊರ
ತಣುಗೆಯುದಿಸಿದರಿರಲಿ ವಂಶಚ್ಛೇದವೆಂತಹುದು ॥ (2-143)

'ಮದಾಲಸಾಪರಿಣಯ'ದಲ್ಲಿ ಮದಾಲಸೆಯ ಗೆಳತಿಯಾದ ಕುಂಡಲೆ ಮತ್ತು ಋತಧ್ವಜನ ಪ್ರಶ್ನೋತ್ತರದಲ್ಲಿ ಸಹೃದಯ ಸಂವಾದದ ಸೊಬಗಿದೆ.

ಚಾರುಗಾತ್ರದ ಸುಂದರಾಸ್ಯದ
ವೀರ ನೀನಾರೇನು ಕಾರಣ
ಘೋರರಾಕ್ಷಸ ಪುರಕೆ ಬಂದ ವಿ
ಚಾರವೇನು ॥

ಚಾರಣನೊ ಸುರನೋ ಮಹೋರಗ
ನಾರು ನೀ ಧಾರಿಣಿಯ ನರರಿಗೆ
ಸೇರಲಸದಳವೀ ಪುರವ ನೀ
ನಾರುಯೆನಲು ॥ (1- 206, 207)

ಸುಂದರಾಸ್ಯೆ ಕೇಳೆ । ಪುಷ್ಪಸು ।
ಗಂಧಿನಿ ಗುಣಶೀಲೆ ॥
ಇಂದೆನ್ನಯ ನಿಜದಂದವ ನಿನ್ನೊಡ
ನೊಂದ ಬಿಡದೆ ಸಾನಂದದೊಳುಸುರುವೆ ॥

ಅರಸ ಶತ್ರುಜಿತನು । ಎಂಬನ ।
ತರಳ ಋತಧ್ವಜನು ॥

ದುರುಳನ ಬಾಧೆಯ ಹರಿಸಲು ಗಾಲವ
ವರಮುನಿಯಾಶ್ರಮಕೈದಿದೆ ನಂತರ ॥ (1-208, 209)

ರಾಜ-ರಾಣಿಯರ ಸಂವಾದ ಭಾಗವೊಂದನ್ನು ನೋಡಿ :

ಎಡಗಣ್ಣು ಅದುರುತಿದೆ । ಪ್ರಾಣೇಶ ಮ ।
ತ್ತೆಡಭುಜ ಕುಣಿಯುತಿದೆ ॥
ತಡೆದೊಂದು ದಿನ ನಾಳೆಗೆ । ಪೋಗಲು ಬಹು ।
ದಡವಿಯ ಮೃಗಬೇಟೆಗೆ

ನರದೌರ್ಬಲ್ಯದೊಳಾಗುವದಂಗ ।
ಸ್ಫುರಣವು ಕೇಳೆಲೆಗೆ ॥
ಬರಿದದನರಿಯದೆ ದುಃಶಕುನವಿದೆಂ ।
ದರೆ ನಂಬಿಕೆ ಹೇಗೆ (4-37,39)

ಇಲ್ಲಿ ದುಃಶಕುನಗಳನ್ನು ನಂಬದೆ, ಅಂಗಸ್ಫುರಣೆಗೆ ಮನುಷ್ಯನ ನರದೌರ್ಬಲ್ಯವೇ ಕಾರಣವೆಂಬ ವೈಜ್ಞಾನಿಕ ಮನೋಭಾವವು ಸ್ಥಾನಪಡೆದಿರುವುದು ಗಮನಾರ್ಹ. ಅಲ್ಲಲ್ಲಿ ತುಂಬಿನಿಂತ ಇಂತಹ ಹಲವಾರು ಸಂವಾದಭಾಗಗಳು ವಾಚಿಕಾಭಿನಯಕ್ಕೆ ಹೇಳಿಮಾಡಿಸಿದಂತಿವೆ.

ಛಂದೋಬಂಧಗಳು :

ಸಂಪ್ರದಾಯನಿಷ್ಠರಾದ ಈ ಕವಿಗೆ ಪುರಾತನ ಛಂದೋಬಂಧಗಳ ಬಗೆಗೆ ಹೆಚ್ಚು ಒಲವು. ಸೌರಾಷ್ಟ್ರ-ತ್ರಿವುಡೆ, ಕಾಂಭೋದಿ-ಝಂಪೆ, ಸಾಂಗತ್ಯ-ರೂಪಕ, ಕೇದಾರಗೌಳ-ಅಷ್ಟ, ಸುರುಟಿ-ಏಕ ಮುಂತಾದ ಪ್ರಸಿದ್ಧ ಪದ್ಯಬಂಧಗಳು ಸಮೃದ್ಧವಾಗಿ ಇಲ್ಲಿ ಕಂಡುಬರುತ್ತವೆ. ಮುದ್ದಣನನಂತಹ ಕವಿಗಳು ಸೃಜಿಸಿದ ಪ್ರಯೋಗಶೀಲ ಬಂಧಗಳ ಕಡೆಗೂ ಇವರ ದೃಷ್ಟಿ ಹರಿದಿದೆ. ಉದಾ:

ಮಾತನಾಡೇ । ಮದಗಜಯಾನೆ ।
ಯಾತಕೀಪರಿ ಭಯಗೊಳುತಿಹೆ ಜಾಣೆ ।
ನಿ-ನ್ನಂತರಕಾಣೆ ।
ಜ-ಗದಿ ಸುಪ್ರವೀಣೆ ॥
ವನಿತೆ ನಿನ್ನಯ ಪುರವಾವಲ್ಲಿ ಪೇಳು ।
ಜನನಿ ಜನಕರಾರೆಂದೆನುವುದ ಪೇಳು ॥

ಶೋ-ಕಿಪೆ ಯಾಕೆ ತಾಳು ।
ಧೈ-ರ್ಯವ ಹೊಂದು ಏಳು ॥ (1- 191, 192)

ಮೋಹನಾಂಗಿ ಮರುಗುವುದೇನೇ ।
ಬಾಹನೆ ಮಡಿದಿರ್ದ ಪತಿ ಹಂಸಯಾನೆ ।
ದುಃಖಿಪೆ ಬರಿದೇನೇ । ಸ್ಯೆ । ರಿಸು ಶುಕಗಾನೆ ॥

ವಿಧಿಲಿಖಿತವ ಮೀರಲದಕಾರಿಗಹುದೆ ।
ಸದನದೊಳಿರ್ದರು ಬಿಡದದು ಮುಗುದೆ ।
ವ್ಯ । ರ್ಥದಿ ಮರುಗುವುದೆ । ಸಾ । ಕಿದು ಬಿಡು ಬರಿದೆ ॥ (4-92, 93)

'ಛಂದೋವತಂಸ' ಎಂಬ ಈ ಛಂದೋಬಂಧಗಳ ಉತ್ತರಾರ್ಧದಲ್ಲಿ ವರಣಸಹಿತವಾದ ಗಣಗಳನ್ನು ತಂದು ಅವುಗಳಿಗೆ ಅಂತ್ಯಪ್ರಾಸದ 'ಮುಡಿ'ಯನ್ನು ತೊಡಿಸಿ ಸೃಜನಶೀಲತೆಯನ್ನು ತಂದಿರುವುದು ಹಾಡುಗಾರಿಕೆಗೆ ಹೊಸ ಬನಿಯನ್ನು ನೀಡಿದೆ.

ಪೂ । ಗೋಲಸನ್ನಿಭ ಲಾಲಿಸಿವಳ । ಮೂಲಸ್ಥಿತಿಯನು ॥
ಪೇಳುವೆನು ಸುಶೀಲೆಗಾದ । ಹಾಳುಗತಿಯನು ॥

ಗಂ । ಧರುವಪತಿ ವಿಶ್ವಾವಸುವಿನ । ತರಳೆ ಈಕೆಯು ॥
ತೆರಳೆ ವನದಿ ತಿರುಗುತಲ್ಲಿ । ಇರಲಿಕೀಕೆಯು ॥ (1-195, 196)

ಇಲ್ಲಿಯೂ 'ಅತೀತಾಕ್ಷರ'ದ ಚೆಲುವಿದೆ. ಮುದ್ದಣಕವಿಯ ಪ್ರಸಂಗಪದ್ಯಗಳ ಪ್ರಭಾವ ಇಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ.

ಲಾಟಾನುಪ್ರಾಸದ ಸೌಂದರ್ಯವನ್ನೂ ಇಲ್ಲಿ ಕೆಲವೆಡೆ ಸಾಧಿಸಲಾಗಿದೆ. ಉದಾ:

ಹರಿಕುಲಜ ಕೇಳಿಂತು ನೃಪಸುತ ।
ಹರಿಣನೇತ್ರೆಯ ನೆನೆದು ಹಾಹಾ ।
ಹರಿಗಮನೆ ಹರಿವೇಣಿ ಹರಿಭಾಸುರೆ ಸುಹರಿವರ್ಣೆ ॥
ಹರಿಜನರಸಿಸಮಾನೆ ಶೋಕವ ।
ಹರಿಸು ಬಾರೆಂದೆನುತ ಮರುಗುತ ।
ಹರಿಕುಲೋದ್ಭವನಿಂತು ಮನ ತರಹರಿಸುತಿರುತಿರಲು ॥ (1-286)

"ಚಂದ್ರವಂಶಜನಾದ ಪರೀಕ್ಷಿತನೆ! ಕೇಳು. ಜಿಂಕೆಯ ಕಣ್ಣುಳ್ಳವಳನ್ನು ನೆನೆಯುತ್ತಾ ಹಂಸಗಮನೆಯೆ, ನಾಗವೇಣಿಯೆ, ಚಂದ್ರಕಾಂತಿಯುಳ್ಳವಳೆ,

ಬಂಗಾರಬಣ್ಣದ ಮೆಯ್ಯುವಳೆ, ಮನ್ಮಥನ ಮಡದಿಯಾದ ರತಿಯನ್ನು ಹೋಲುವವಳೆ, ಈ ನನ್ನ ಶೋಕವನ್ನು ಪರಿಹರಿಸು ಎಂದುಚಂದ್ರವಂಶಸಂಜಾತನಾದ ಕುವಲಯಾಶ್ವನು ದುಃಖಿಸಿದನು." ಇಲ್ಲಿ 'ಹರಿ'ಶಬ್ದಕ್ಕಿರುವ ವಿವಿಧಾರ್ಥಗಳನ್ನು ಬಳಸಿಕೊಳ್ಳಲಾಗಿದೆ. ಇದೇ ತೆರನಾದ ಇನ್ನೊಂದು ರಚನೆ:

ಹಂಸವಾಹನನರಸಿ ಭಾರತಿ ।
ಹಂಸಮುಖಿ ತ್ರಿಜಗಜ್ಜನನಿ ಕಲ ।
ಹಂಸಗಮನೆ ನಿಧಾನೆ ವೀಣಾಪಾಣಿ ವಾಗ್ದೇವಿ ॥
ಹಂಸಶತಸಂಕಾಶೆ ಮುನಿಕುಲ ।
ಹಂಸವಂದಿತೆ ಸರ್ಪವೇಣಿ ಸು ।
ಹಂಸನೇತ್ರೆಯೆ ಹಂಸರಿಪುಸೇವಿತೆ ನಮೋಯೆಂದ ॥ (1-303)

"ಬ್ರಹ್ಮದೇವನ ರಾಣಿ ಸರಸ್ವತಿಯೆ! ಪರಿಶುದ್ಧವಾದ ವೇದವಾಣಿಯೆ! ಮೂರುಲೋಕದ ಮಾತೆಯೆ! ಹಂಸಗಾಮಿನಿಯೆ! ವೀಣಾಪಾಣಿಯಾದ ಶಾರದೆಯೆ! ಸೂರ್ಯಶತಪ್ರಭೆಯುಳ್ಳವಳೆ! ಪರಮಹಂಸಾದಿಗಳಿಂದ ವಂದಿಸಲ್ಪಡುವವಳೆ! ನಾಗವೇಣಿಯೆ! ಕಮಲದಳಾಕ್ಷಿಯೆ! ವಿರಾಗಿಗಳಿಂದ ಪೂಜಿತೆಯಾದವಳೆ! ನಿನಗೆ ನಮಸ್ಕಾರಗಳು." ಇಲ್ಲಿಯೂ 'ಹಂಸ' ಶಬ್ದವನ್ನು ನಾನಾರ್ಥಗಳಿಂದ ಬಳಸಲಾಗಿದೆ.

ಜಯತು **ವಾಣೀನಾಥ** ಜಯ **ಸರೋರುಹಜಾತ** ।
ಜಯತು **ಲೋಕಾಧೀಶ** ಜಯ **ಸತ್ಯಲೋಕೇಶ** ।
ಜಯತು **ಜನದಾತಾರ** ಜಯ **ಸೃಷ್ಟಿಕರ್ತಾರ**
ಜಯತು **ಭಯದೂರ ಧೀರ** ॥
ಜಯತು **ಗುಣಮಂದಾರ** ಜಯ **ಕುಜನಸಂಹಾರ** ।
ಜಯತು **ಶ್ಯಾಮಲವರ್ಣ** ಜಯ ಸುಗುಣ**ಪರಿಪೂರ್ಣ**।
ಜಯತು **ಮನ್ಮಥರೂಪ** ಜಯ ದೇವ**ಕುಲದೀಪ**
ಜಯಜಯೆಂದಡಿಗೆಡೆದನು॥ (3-26)

ಈ ವಾರ್ಧಕಷಟ್ಪದಿಯಲ್ಲಿ ಒಳಪ್ರಾಸದ ಚೆಲುವಿದೆ. ಗೇಯತೆಯಲ್ಲಿ ಇದರ ಮನೋಹರತೆ ಅತಿಶಯವಾಗುತ್ತದೆ. ಸಾಂಪ್ರದಾಯಿಕವಾದ ಹಲವು ಛಂದೋಬಂಧಗಳಲ್ಲಿ ಒಂದೆರಡನ್ನು ನಿದರ್ಶನಾರ್ಥವಾಗಿ ನೋಡಬಹುದು:

॥ **ರಾಗ ಬೇಗಡೆ – ಅಷ್ಟತಾಳ** ॥

ಭಳಿರೆ ಭೂಮಿಪಕುಲಶಿರೋಮಣಿಯೆ । ಮೆಚ್ಚಿದೆನು ನಿನ್ನಯ ।
ಬಲುತರಾತಿಥ್ಯಕ್ಕೆ ಗುಣಮಣಿಯೆ ॥
ಇಳೆಯೊಳಗೆ ನಿನ್ನಂಥ ಧಾರ್ಮಿಕ
ಬಲುಪರಾಕ್ರಮಿ ಸದ್ಗುಣಾನ್ವಿತ
ಕುಲಜರಾಳ್ವಿಕೆಯೊಳಗೆ ಸಿಗರೆಂ
ಬುಲುಹು ತುಂಬಿದೆ ಜಗದೊಳೆಲ್ಲವು ॥ (4-219)

॥ **ರಾಗ ಮುಖಾರಿ–ಏಕತಾಳ** ॥

ಸುರಪಾಲ ಲಾಲಿಸೆಮ್ಮ ಗೋಳ । ಸುರಲೋಕಕೀಗ ।
ದುರುಳ ಮಹಿಷನೆಂಬ ಖೂಳ ॥
ಪರಿವಾರವನೊಡಗೊಂಡೆಮ್ಮಯ ಪುರ
ವರವನು ಮುತ್ತುತ ಸೂರೆಯ ಗೈದೆ
ಲ್ಲರಬಡಿದೋಡಿಸಿ ಲೂಟಿಯೊಳೆಲ್ಲವ
ಪುರಕೊಯ್ದಿಹ ಭಯವಹುದು ಪರಾಕೆ ॥ (3-38)

॥ **ರಾಗ ನವರೋಜು – ಏಕತಾಳ** ॥

ಲಾಲಿಸು ರಾಜಲಲಾಮ । ನರ
ಪಾಲ ಕೃಪಾಂಬುಧಿಸೋಮ ॥
ಶ್ರೀಲಲನಾಪತಿ । ಪಾಲಿಸಿದನು ಕರು ।
ಣಾಳು ದಯದಿ ಕುಲ । ದೇಳಿಗೆಯಾದುದು ॥ (2-181)

॥ **ರಾಗ ನೀಲಾಂಬರಿ – ರೂಪಕತಾಳ** ॥

ಅಕಟಕಟೀ ಪರಿ ದುರ್ವಿಧಿ ।
ಪ್ರಕಟಿಸುತೀ ಪರಿಯಾಯಿತೆ ।
ಸಕಲರ ಹಗೆತನ ಫಲಿಸಿದು
ದಕೆ ಫಲವಿಂತಾಯ್ತೆ ॥ (5-158)

ಕಥಾವಸ್ತುವಿನ ಸಂಯೋಜನೆಯಲ್ಲಿಯೂ ಯಕ್ಷಗಾನೀಯತೆ ಕಂಡು ಬರುವುದು ಗಮನಾರ್ಹ. ಮೊದಲ ಪ್ರಸಂಗ 'ಮದಾಲಸಾಪರಿಣಯ'ದ ಉತ್ತರಾರ್ಧದಲ್ಲಿ ಮದಾಲಸೆಯ ತತ್ತ್ವಬೋಧೆ ಭಾಗವತದಲ್ಲಿದ್ದರೂ ಯಕ್ಷಗಾನದ ದೃಶ್ಯನಿರ್ಮಾಣಕ್ಕೆ ಸೂಕ್ತವಾಗುವುದಿಲ್ಲ ಎಂಬುದನ್ನು ಮನಗಂಡ ಕವಿಹೃದಯ

ಅದನ್ನು ಕೈಬಿಟ್ಟಿದೆ. ಪದ್ಮಪುರಾಣೋಕ್ತವಾದ 'ನಹುಷೋದ್ಭವ'ದಲ್ಲಿ ಯಕ್ಷಗಾನಕ್ಕೆ ಹೊಂದುವಂತಹ ದೃಶ್ಯಗಳನ್ನು ಸಂಯೋಜಿಸಿ ಅದನ್ನು ನವರಸಭರಿತವನ್ನಾಗಿ ಮಾಡಿರುವುದು ಕವಿಪ್ರತಿಭೆಯ ಫಲ. 'ಶ್ರೀ ಅಬ್ಯಾಡಿ ಕ್ಷೇತ್ರಮಹಾತ್ಮೆ' ಸ್ಥಳಪುರಾಣವಾದರೂ ಪೌರಾಣಿಕಪಾತ್ರಗಳ ಸಮಾಮೇಲನದಿಂದ ರಂಗದಲ್ಲಿ ಮೆರೆಯುವಂತಿದೆ. 'ಭೂಮಿಕಾ ಪರಿಣಯ' ಮತ್ತು 'ಶ್ವೇತಚಂದ್ರಿಕೆ'ಗಳು ಕಾಲ್ಪನಿಕವಾದರೂ ಸಮಾಜಕ್ಕೆ ಸಮಂಜಸವಾದ ಸಂದೇಶವನ್ನು ಸಾರುವಲ್ಲಿ ಸಫಲವಾಗಿವೆ. 'ಭೂಮಿಕಾ ಪರಿಣಯ'ದ ಕಥೆಯನ್ನು ಕವಿಯ ಸುಪುತ್ರ ಶ್ರೀ ಉಮೇಶರೇ ಸಂಗ್ರಹಿಸಿ ನೀಡಿದ್ದರೆ, 'ಶ್ವೇತಚಂದ್ರಿಕೆ'ಯ ಕಥೆಯನ್ನು ಭಾಗವತ ನರಸಿಂಹದಾಸರಿಂದ ಪಡೆಯಲಾಗಿದೆ. ಈ ಎಲ್ಲಾ ಪ್ರಸಂಗಗಳಲ್ಲಿ ದೇವತೆಗಳು, ರಾಕ್ಷಸರು, ಗಂಧರ್ವರು, ಮುನಿಗಳು, ಸರ್ಪರಾಜ, ರಾಜರು, ರಾಜಕುಮಾರರು, ರಾಜಕುಮಾರಿ, ಕಿರಾತ, ಕಿರಾತಕನ್ಯೆ, ದುಷ್ಟಮಂತ್ರಿ, ಚೋರರು, ಜನಸಾಮಾನ್ಯರೇ ಮುಂತಾದ ವೈವಿಧ್ಯಮಯ ಪಾತ್ರಗಳು ರಂಗವೇರಿ ಯಕ್ಷಗಾನದ ಆಹಾರ್ಯವೈಭವವನ್ನು ಸಾಕಾರಗೊಳಿಸಲು ಸಹಕಾರಿಯಾಗುವಂತಿವೆ.

ಶ್ರೀ ಶಿರೂರು ಫಣಿಯಪ್ಪಯ್ಯನವರ ಯಕ್ಷಗಾನ ಪ್ರಸಂಗಗಳಲ್ಲಿ ಭಾಷಾಸೌಂದರ್ಯ, ಛಂದೋಬಂಧಗಳ ಸೃಜನೆ, ಅಲಂಕಾರ ಮತ್ತು ವರ್ಣನೆಗಳ ಕಾವ್ಯಾತ್ಮಕತೆ, ಮಾರ್ಗ ಮತ್ತು ದೇಸಿಗಳ ಸಮನ್ವಯ, ಅಭಿನಯಕ್ಕೆ ಪೂರಕವಾದ ಪದಪ್ರಯೋಗ ಮುಂತಾದ ಹಲವಾರು ಕೌಶಲಗಳು ಇಡಿಕಿರಿದಿವೆ. ಜೀವನವನ್ನು ಕಲೆ ಮತ್ತು ಸಂಸ್ಕೃತಿಗಳ ಸಂವರ್ಧನೆಗಾಗಿ ಮುಡಿಪಾಗಿಟ್ಟ ಕವಿವರ್ಯರು ತಾವು ರಚಿಸಿದ ಪ್ರಸಂಗಗಳು ಮುದ್ರಣವಾಗುವುದನ್ನು ನೋಡಲು ಸಾಧ್ಯವಾಗಿಲ್ಲ ಎಂಬುದು ಬೇಸರದ ವಿಚಾರವಾದರೂ ಅವರ ಸುಪುತ್ರರು ಆ ಪುಣ್ಯಕಾರ್ಯವನ್ನು ಕೈಗೊಂಡಿರುವುದು ಮೆಚ್ಚಬೇಕಾದ ಸಂಗತಿ. ತಂದೆ ತಾಯಿಗಳ ಸಂಸ್ಮರಣೆಗಾಗಿಯೇ 'ಫಣಿಗಿರಿ' ಎಂಬ ಪ್ರತಿಷ್ಠಾನವನ್ನು ಆರಂಭಿಸಿ ಹಸ್ತಪ್ರತಿಗಳಲ್ಲಿರುವ ಸಾಹಿತ್ಯವನ್ನು ಪ್ರಕಟಿಸುವ ಸರಸ್ವತೀಪೂಜೆಗೆ ತೊಡಗಿರುವುದನ್ನು ಎಲ್ಲ ಸಂಸ್ಕೃತಿಪ್ರಿಯರ ಪರವಾಗಿ ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಶ್ರೀ ಶಿರೂರು ಫಣಿಯಪ್ಪಯ್ಯ ವಿರಚಿತ 'ಯಕ್ಷಗಾನ ಪ್ರಸಂಗಸಂಪುಟ'ವನ್ನು ಸಂಪಾದಿಸುವ ಸಾಹಿತ್ಯಕಲಾಸೇವೆಯ ಸೌಭಾಗ್ಯವನ್ನು ನನಗೆ ನೀಡಿರುವುದಕ್ಕಾಗಿ 'ಫಣಿಗಿರಿ ಪ್ರತಿಷ್ಠಾನ'ದ ಸರ್ವಸದಸ್ಯರಿಗೆ ನಾನು ಕೃತಜ್ಞನಾಗಿದ್ದೇನೆ.

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ

ಕೃತಜ್ಞತೆ

ಈ ಸಂಪುಟದ ಸಂಪಾದಕರಾದ
ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ಅವರಿಗೆ,
ಬೆನ್ನುಡಿ ಬರೆದು ಶುಭಹಾರೈಸಿದ
ಶ್ರೀಧರ ಡಿ. ಎಸ್. ಅವರಿಗೆ,
ಸುಂದರವಾಗಿ ಮುದ್ರಿಸಿಕೊಟ್ಟ
ಓಂಶಿವಪ್ರಕಾಶ, Techfiz. Inc., Bangalore ಅವರಿಗೆ
ಮತ್ತು
ಫಣಿಗಿರಿ ಪ್ರತಿಷ್ಠಾನದ ಎಲ್ಲಾ ಸದಸ್ಯರಿಗೆ

ಉಮೇಶ ಶಿರೂರು

ನನ್ನ ಅಪ್ಪಯ್ಯ
ಶಿರೂರು ಫಣಿಯಪ್ಪಯ್ಯ

ಶಿರೂರು ಫಣಿಯಪ್ಪಯ್ಯ ಯಕ್ಷಗಾನ ಕ್ಷೇತ್ರದಲ್ಲಿ 75ಕ್ಕೂ ಹೆಚ್ಚು ವರ್ಷ ಹಲವು ವಿಭಾಗಗಳಲ್ಲಿ ಹಲವು ಯಕ್ಷಗಾನ ಪ್ರಸಂಗಗಳ ಕವಿಯಾಗಿ, ಯಕ್ಷಗಾನ ಪ್ರಸಂಗ ಪುಸ್ತಕಗಳ ಸಂಗ್ರಹಕಾರರಾಗಿ, ತಾಡವಾಲೆ ಗ್ರಂಥಗಳ ಅಧ್ಯಯನಶೀಲರಾಗಿ, ಮೇಳಗಳಲ್ಲಿ ವ್ಯವಸ್ಥಾಪಕರಾಗಿ, ಭಾಗವತರಾಗಿ, ಯಕ್ಷಗುರುಗಳಾಗಿ ಸೇವೆಸಲ್ಲಿಸಿದ ಮಹಾನ್ ವ್ಯಕ್ತಿ. ನಾನು ಇವರ ಮಗ ಎಂದು ಬಹಳ ಹೆಮ್ಮೆಯಿಂದ ಹೇಳುತ್ತೇನೆ. ಬಹಳ ವರ್ಷಗಳಿಂದ ನಮ್ಮ ತಂದೆಯವರ ಹಸ್ತಪ್ರತಿಯಲ್ಲಿರುವ ಪ್ರಸಂಗಗಳನ್ನು ಪ್ರಕಟಿಸುವ ಆಶಯ ಈಗ ಕಾರ್ಯರೂಪಕ್ಕೆ ಬರುತ್ತಿದೆ. ನಾಡಿನ ಹೆಸರಾಂತ ವಿದ್ವಾಂಸರಾದ ಡಾ. ಕಬ್ಬಿನಾಲೆ ವಸಂತ ಭಾರದ್ವಾಜರು ನಮ್ಮೊಡನೆ ಕೈಜೋಡಿಸಿ ಈ ಕೃತಿಗೆ ಸಂಪಾದಕರಾಗಿರುವುದು ಹೆಮ್ಮೆಯ ಸಂಗತಿ. ಈ ಸಂದರ್ಭದಲ್ಲಿ ನನ್ನ ಅಪ್ಪಯ್ಯನ ಕುರಿತು ನನಗೆ ತಿಳಿದಿರುವ ಸಂಗತಿಗಳನ್ನು ಯಕ್ಷಗಾನ ಪ್ರೇಮಿಗಳೊಂದಿಗೆ ಹಂಚಿಕೊಳ್ಳುವುದು ನನ್ನ ಕರ್ತವ್ಯ ಎಂದು ತಿಳಿದಿದ್ದೇನೆ. ಹಾಗಾಗಿ ಈ ಲೇಖನ.

ಕುಟುಂಬದ ಹಿನ್ನಲೆ

ನಮ್ಮ ಮನೆಯಲ್ಲಿರುವ ತಾಮ್ರಶಾಸನದ ದಾಖಲೆ ಮೂಲಕ ನಮ್ಮ ಪೂರ್ವಜರ ಹಿನ್ನೆಲೆ ಇಂತಿದೆ: ಶಕವರ್ಷ 1396 ಅಂದರೆ 1474ನೆ ಇಸ್ವಿಯಲ್ಲಿ ಬರೆದ ತಾಮ್ರಶಾಸನದ ಪ್ರಕಾರ ಸಾಗರ ಸೀಮೆಯ ಮಕ್ಕಿಮನೆ ಕಲ್ಗಲ್ ಪ್ರದೇಶದಿಂದ ಹಾಡುವಳ್ಳಿ ಅರಸರ ಆಜ್ಞೆಯಂತೆ ಶಾನುಭೋಗಿಕೆಗಾಗಿ ಆಗಿನ ಕುಂದಾಪುರ ತಾಲೂಕಿನ ಶಿರೂರಿಗೆ ನಮ್ಮ ಪೂರ್ವಜರು ಬಂದು ನೆಲೆಸಿದರು. ಆ ಕುಟುಂಬದಲ್ಲಿ ನರಸಪ್ಪಯ್ಯ ಮತ್ತು ವೆಂಕಮ್ಮರಿಗೆ ಮೂವರು ಗಂಡುಮಕ್ಕಳು. ಅವರಲ್ಲಿ ಎರಡನೇ ಮಗ ದೇವಪ್ಪಯ್ಯ (ಕಾಲ 1878 ರಿಂದ 1936) ಮೊದಲ ಎರಡು ಮದುವೆಯಿಂದ ಸಂತಾನಭಾಗ್ಯ ದೊರೆಯದ ಕಾರಣ ಮೂರನೇ ಬಾರಿಗೆ ತಮಗಿಂತ 40ವರ್ಷ ಚಿಕ್ಕವರಾದ ಬಸರೂರುಕೆರೆ ಕಟ್ಟೆ ಸುಬ್ರಾಯ ಭಟ್ರ ಮಗಳು

ಗೌರಮ್ಮ ಅವರನ್ನು ಮದುವೆಯಾದರು. ಗೌರಮ್ಮ ಅವರು ಎಂಟು ಮಕ್ಕಳನ್ನು ಹಡೆದರು. ಅವರಲ್ಲಿ ಹಿರಿಯ ಸಂತಾನವೇ ನನ್ನ ಅಪ್ಪಯ್ಯ ಶಿರೂರು ಫಣಿಯಪ್ಪಯ್ಯ. ಇವರಿಗೆ ಮೂವರು ತಮ್ಮಂದಿರು, ನಾಲ್ವರು ತಂಗಿಯರು. ಫಣಿಯಪ್ಪಯ್ಯನವರ ದೊಡ್ಡಪ್ಪ ಸಂಭಯ್ಯ, ಚಿಕ್ಕಪ್ಪ ವಿಶ್ವೇಶ್ವರಯ್ಯ. ಸಂಭಯ್ಯನವರ ಕುಟುಂಬ ಉತ್ತರ ಕನ್ನಡದ ಸಿರ್ಸಿಯಲ್ಲಿ ನೆಲೆಸಿದರೆ ವಿಶ್ವೇಶ್ವರಯ್ಯನವರು ಮರವಂತೆಯಲ್ಲಿ ಶಾನುಭೋಗಿಕೆ ವೃತ್ತಿಯಲ್ಲಿ ತೊಡಗಿದರು. ವಿಶ್ವೇಶ್ವರಯ್ಯನವರಿಗೆ ಮೂವರು ಮಕ್ಕಳು. ಮಂಜುನಾಥಯ್ಯ, ಪದ್ಮನಾಭಯ್ಯ ಮತ್ತು ವಾಸುದೇವಯ್ಯ. ಪದ್ಮನಾಭಯ್ಯನವರು ಆಯುರ್ವೇದಿಕ ವೈದ್ಯರಾಗಿ, ಯಕ್ಷಗಾನ ಅರ್ಥಧಾರಿಯಾಗಿ ಪ್ರಸಿದ್ಧಿಯಾಗಿದ್ದವರು. ಅವರು ಉತ್ತರಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಹೈಗುಂದದಲ್ಲಿ ಮೊದಲು ತಮ್ಮ ವೃತ್ತಿಜೀವನ ಪ್ರಾರಂಭಿಸಿ ಹೈಗುಂದ ಡಾಕ್ಟರೆಂದು ಪ್ರಸಿದ್ಧಿಯಾಗಿದ್ದಾರೆ. ಅನಂತರ ಅಲ್ಲಿಯೇ ಸಮೀಪದ ಉಪ್ಪೋಣಿಯಲ್ಲಿ ನೆಲೆಸಿದ್ದರು. ನಮ್ಮ ಅಪ್ಪಯ್ಯ ಅವರನ್ನು ಪದ್ದಣ್ಣಯ್ಯ ಎಂದು ಕರೆಯುತ್ತಿದ್ದರು. ಅವರು ಆಗಾಗ ನಮ್ಮ ಮನೆಗೆ ಭೇಟಿ ಕೊಡುತ್ತಿದ್ದರು. ಪದ್ಮನಾಭಯ್ಯ ಆಕಾಲದಲ್ಲಿ ಪ್ರಸಿದ್ಧ ಯಕ್ಷಗಾನ ತಾಳಮದ್ದಳೆ ಅರ್ಥಧಾರಿ ಯಾಗಿದ್ದು ಹೊನ್ನಾವರ ಕುಮಟಾ ಪರಿಸರದಲ್ಲಿ ಹೆಸರು ವಾಸಿಯಾಗಿದ್ದರು. ವಾಸುದೇವಯ್ಯ ಚಿಕ್ಕವಯಸ್ಸಿನಲ್ಲೇ ಇಹಲೋಕ ತ್ಯಜಿಸಿದ್ದು ಅವರ ಬಗ್ಗೆ ನನಗೆ ಹೆಚ್ಚಿನಮಾಹಿತಿ ಇಲ್ಲ. ಮರವಂತೆಯಲ್ಲಿ ಶಾನುಭೋಗಿಕೆ ಮಾಡುತ್ತಿದ್ದ ಮಂಜುನಾಥಯ್ಯ ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ವಿಧಿವಶರಾಗಿದ್ದು ಅವರ ಸುಪುತ್ರರೇ ಶ್ರೀ ಎಸ್. ಜನಾರ್ದನ್ ಎಂಬ ಮರವಂತೆಯ ಪ್ರಸಿದ್ಧ ವ್ಯಕ್ತಿ. ತಮ್ಮ ಎಂಟನೆಯ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡ ಜನಾರ್ದನ್ ಪ್ರಾಥಮಿಕ ವಿದ್ಯಾಭ್ಯಾಸವನ್ನು ಶಿರೂರಿನಲ್ಲಿ ನಮ್ಮ ಮನೆಯಲ್ಲಿದ್ದುಕೊಂಡು (ಫಣಿಯಪ್ಪಯ್ಯ ನವರ ಮನೆ) ಮುಗಿಸಿ ಬೈಂದೂರಿನಲ್ಲಿ ಎಸ್. ಎಸ್.ಎಲ್.ಸಿ. ಮುಗಿಸಿ ತಂದೆಯವರಿಂದ ವಂಶಪಾರಂಪರ್ಯವಾಗಿ ಬಂದ ಶ್ಯಾನುಭೋಗ ವೃತ್ತಿ ಆರಂಭಿಸಿದರು. ಮುಂದೆ ಸ್ವಪ್ರಯತ್ನದಿಂದ ವೃತ್ತಿಯ ಜೊತೆಗೆ ಖಾಸಗಿಯಾಗಿ ವಿದ್ಯಾಭ್ಯಾಸ ಮುಂದುವರೆಸಿ 1966ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಬಿ.ಎ. ಪದವಿಪಡೆದು ಅನಂತರ ಮಂಗಳೂರಿನಲ್ಲಿ ಬಿ.ಇಡಿ. ಪದವಿಪಡೆದು ಹೈಸ್ಕೂಲಿನ ಪ್ರಾಧ್ಯಾಪಕರಾಗಿ, ಅನಂತರ ಎಂ.ಎ. ಪದವಿ ಪಡೆದು ಜೂನಿಯರ್ ಕಾಲೇಜು ಪ್ರಾಧ್ಯಾಪಕರಾಗಿ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದರು. ಮರವಂತೆಯಲ್ಲಿ ಸಾಧನ ಸೇವಾಸಂಸ್ಥೆಯನ್ನು ಆರಂಭಿಸಿ ಸಮಾಜಸೇವಾ ಕಾರ್ಯದಲ್ಲಿ ತೊಡಗಿದರು. ನಿವೃತ್ತಿಯ ಅನಂತರ ಮರವಂತೆ ಪಂಚಾಯತಿ ಅಧ್ಯಕ್ಷರಾಗಿ ರಾಜ್ಯ ಮಟ್ಟದ ಉತ್ತಮ ಪಂಚಾಯ್ತೆಂಬ ಪ್ರಶಸ್ತಿ ಗಳಿಸಿಕೊಟ್ಟ

ಧೀಮಂತ ವ್ಯಕ್ತಿ. ಇತ್ತೀಚಿಗೆ 2021ರ ಕರ್ನಾಟಕ ಸರ್ಕಾರದ ಹಿರಿಯ ನಾಗರಿಕ ಪ್ರಶಸ್ತಿ ಕೂಡ ಇವರ ಮುಡಿಗೇರಿದೆ. ಇಂತಹ ಜನಾರ್ದನರು ನಮ್ಮ ಹತ್ತಿರದ ಸಂಬಂಧಿ ಎನ್ನುವುದು ನನಗೆ ಹೆಮ್ಮೆಯ ಸಂಗತಿಯಾಗಿದೆ. ಅವರ ಮಗ ಯೋಗಿಂದ್ರ ದೂರದ ಲಂಡನ್ ವಾಸಿಯಾಗಿದ್ದು ಅಲ್ಲಿ ಯಕ್ಷಗಾನ ಕಲೆಯನ್ನು ಪಸರಿಸುತ್ತಿದ್ದಾರೆ.

ಬಾಲ್ಯ

ಶಿರೂರು ಫಣಿಯಪ್ಪಯ್ಯನವರು 1918 ಜುಲೈ ತಿಂಗಳ 6ನೆ ದಿನ ಶಿರೂರು ಗ್ರಾಮದ ದೇವಪ್ಪಯ್ಯ ಮತ್ತು ಗೌರಮ್ಮನವರ ಪ್ರಥಮ ಸುಪುತ್ರನಾಗಿ ಜನಿಸಿದರು. ದೇವಪ್ಪಯ್ಯನವರು ತಮ್ಮ ಮೂರನೆಯ ಪತ್ನಿಯಿಂದ ಪಡೆದ ಮೊದಲ ಮಗುವಿದು. ಬಹಳ ವರ್ಷಗಳ ಬಳಿಕ ಮನೆಗೆ ಮಗುವಿನ ಆಗಮನ ಎಲ್ಲರನ್ನು ಸಂತೋಷಗೊಳಿಸಿತ್ತು. ಅನಂತರ ವೆಂಕಮ್ಮ, ಶಿವರಾಮ, ಸಾವಿತ್ರಿ, ಭವಾನಿ, ಲಕ್ಷ್ಮಿ, ಸುಬ್ರಾಯ, ಬಾಲಕೃಷ್ಣ ಹೀಗೆ ಒಟ್ಟು ಎಂಟು ಮಕ್ಕಳನ್ನು ಹಡೆದರು. ಗೌರಮ್ಮ ಆಗಿನ ಕಾಲದಲ್ಲಿ ಶಿರೂರು ಪರಿಸರದಲ್ಲಿ ನೂರಾರು ಎಕ್ರೆ ಗದ್ದೆ ಸಾಗುವಳಿ ಹೊಂದಿದ್ದ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ ಬಾಲ್ಯವನ್ನು ಕಳೆದರು. ನಮ್ಮ ಅಪ್ಪಯ್ಯ ಐದು ವರ್ಷಕಳೆದ ನಂತರ ಶಿರೂರಿನಲ್ಲಿಯೇ ತಮ್ಮ ಪ್ರಾಥಮಿಕ ಶಿಕ್ಷಣ ಪ್ರಾರಂಭಿಸಿ ಹತ್ತಿರದ ಬೈಂದೂರಿನ ಶಾಲೆಗೂ ಸೇರಿ ನಾಲ್ಕನೆಯ ತರಗತಿವರೆಗೆ ಓದಿದರು. ಬೈಂದೂರಿನ ಶಾಲೆಯಲ್ಲಿ ಕನ್ನಡದ ಹಿರಿಯ ಸಾಹಿತಿ ಮೊಗೇರಿ ಗೋಪಾಲಕೃಷ್ಣ ಅಡಿಗರು ನನ್ನ ಸಹಪಾಠಿಯಾಗಿದ್ದರು ಎಂದು ಅಪ್ಪಯ್ಯ ಆಗಾಗ ಹೇಳುತ್ತಿದ್ದರು. ಉಳಿದ ಸಹಪಾಠಿಗಳ ಬಗ್ಗೆ ಹೆಚ್ಚಿನಮಾಹಿತಿ ನನಗಿಲ್ಲ.

ನಮ್ಮ ಮನೆಯಲ್ಲಿ ಅಪ್ಪಯ್ಯನ ಸಂಗ್ರಹದಲ್ಲಿ ನೋಡಿದಾಗ 1929ರಲ್ಲಿ ಅಂದರೆ ಅವರ 11ನೆಯ ವಯಸ್ಸಿನಲ್ಲಿಯೇ ಯಕ್ಷಗಾನ ಪ್ರಸಂಗ ಪುಸ್ತಕಗಳನ್ನು ಪ್ರತಿಮಾಡಿ ಅದರ ಅಧ್ಯಯನ ಪ್ರಾರಂಭಿಸಿರುವುದು ಕಂಡುಬರುತ್ತದೆ. ಧ್ರುವಚರಿತ್ರೆ ಪ್ರಸಂಗದ ಹಸ್ತಪ್ರತಿ 1929ರಲ್ಲಿ ಬರೆಯಲು ಪ್ರಾರಂಭಿಸಿ 1930 ಜನವರಿಯಲ್ಲಿ ಮುಗಿಸಿದ್ದಾಗಿ ತಿಳಿದುಬಂದಿದೆ. ಆಗ ಫಣಿಯಪ್ಪಯ್ಯನವರ ವಯಸ್ಸು ಕೇವಲ ಹನ್ನೊಂದು. ಹೀಗೆ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ಬಾಲ್ಯದಲ್ಲಿಯೇ ಆರಂಭಿಸಿದ ಯಕ್ಷಗಾನ ಅಧ್ಯಯನವನ್ನು ಮುಂದೆ 86ರ ಪ್ರಾಯದಲ್ಲಿ ಸಾಯುವ ತನಕ ಮುಂದುವರಿಸಿ ಯಕ್ಷಗಾನ ಸಾಹಿತ್ಯಸೇವೆಗೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟರು. ಇವರ ಓದು ನಾಲ್ಕನೆಯ ತರಗತಿಯಾಗಿದ್ದರೂ ಇಂಗ್ಲಿಷ್ ಭಾಷೆ ಓದುವ ಬರೆಯುವ ಜ್ಞಾನಹೊಂದಿದ್ದರು.

ಯಕ್ಷಗಾನ ಜ್ಞಾನದ ಜೊತೆಗೆ ಲೋಕಜ್ಞಾನವನ್ನು ಪಡೆಯಲು ಪ್ರಾರಂಭಿಸಿದ ಫಣಿಯಪ್ಪಯ್ಯನವರು ಮನೆತನದ ಆಸ್ತಿಯ ಮೇಲುಸ್ತುವಾರಿಯ ಜವಾಬ್ದಾರಿಯನ್ನು ಹೊತ್ತುಕೊಂಡು ತಮ್ಮ ತಂದೆಗೆ ಸಹಾಯ ಮಾಡ ತೊಡಗಿದರು. ಇಂತಹ ಸಂದರ್ಭದಲ್ಲಿ ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿಯೇ ತಂದೆ ದೇವಪ್ಪಯ್ಯ ವಿಧಿವಶರಾದಾಗ ದೊಡ್ಡಸಂಸಾರದ ಹೊರೆ ಇವರ ಮೇಲೆ ಬಿತ್ತು. ಹಿರಿಯ ಮಗನಾಗಿ ಸಂಸಾರದ ಜವಾಬ್ದಾರಿ ಹೊತ್ತರು. ತಂದೆ ತೀರಿಹೋದಾಗ ಇವರ ಕಿರಿಯ ತಮ್ಮನಿಗೆ ಎರಡು ವರ್ಷ. ಹದಿನೆಂಟರ ಹರೆಯಕ್ಕೆ ತಾಯಿ, ತಮ್ಮ, ತಂಗಿಯರ ಜೊತೆಗೆ ದೊಡ್ಡ ಆಸ್ತಿಯ ಉಸ್ತುವಾರಿ. ದೇಶದಲ್ಲಿ ಸ್ವಾತಂತ್ರ್ಯ ಹೋರಾಟ ಬಿರುಸಾಗಿ ನಡೆಯುತ್ತಿದ್ದ ಕಾಲ ಹಾಗೂ ವಿಶ್ವದ ಎರಡನೆಯ ಮಹಾಯುದ್ಧ ನಡೆಯುತ್ತಿದ್ದ ಕಾಲ. ಹೀಗೆ ಹಲವು ಸಮಸ್ಯೆಗಳ ಜೊತೆಗೆ ಜೀವನ ರೂಪಿಸಿಕೊಂಡರು. ಅವರು ತಮ್ಮ ಹನ್ನೊಂದನೆಯ ವಯಸ್ಸಿಗೆ ಯಕ್ಷಗಾನ ಪ್ರಸಂಗ, ರಾಮಾಯಣ, ಮಹಾಭಾರತ, ಭಾಗವತ, ಜೈಮಿನಿ ಭಾರತ ಮುಂತಾದ ಪುರಾಣ ಗ್ರಂಥಗಳ ಅಧ್ಯಯನವನ್ನು ಪ್ರಾರಂಭಿಸಿದರು. ಮನೆಯಲ್ಲಿದ್ದ ತಾಡವಾಲೆ ಗ್ರಂಥಗಳನ್ನು ಅಭ್ಯಸಿಸಿದರು. ನನಗೆ ದೊರೆತ ದಾಖಲೆಗಳ ಪ್ರಕಾರ 1929 ರಿಂದ 1935ರವರೆಗೆ ಸುಮಾರು ನಲವತ್ತು ಯಕ್ಷಗಾನ ಪ್ರಸಂಗಗಳನ್ನು ಹಸ್ತಪ್ರತಿ ಮಾಡಿದ್ದರು. ಅವುಗಳನ್ನು ಹೀಗೆ ಪಟ್ಟಿ ಮಾಡಿದ್ದೇನೆ.

1. ಪ್ರಹ್ಲಾದಚರಿತ್ರೆ :13-6-1932
2. ಕಡಂದಲೆ ರಾಮರಾವ್ ಅವರ ರಾಮಾಂಜನೇಯ ಅಥವಾ ಹನುಮಂತ ಪ್ರತಾಪ : 13-5-1935
3. ಪಾರ್ತಿಸುಬ್ಬ ಬರೆದ ಪಂಚವಟಿ ಮತ್ತು ವಾಲಿ ಸುಗ್ರೀವರ ಕಾಳಗ : 6-4-1932
4. ಅಜಪುರದ ವಿಷ್ಣು ವಿರಚಿತ ಇಂದ್ರಕೀಲಕ : 6-71930
5. ಇಂದ್ರಜಿತು ಮತ್ತು ಮೈರಾವಣ ಕಾಳಗ: 7-4-1932
6. ಸುಬಾಹು ಕಾಳಗ : 25-6-1937
7. ಕುಂಭಕರ್ಣ ಕಾಳಗ : 3-3-1940
8. ರತ್ನಮಾಲಿಕೆಯ ಕಲ್ಯಾಣ ಅಥವಾ ಚಿತ್ರವಿಚಿತ್ರ ವೀರ್ಯರ ಕಾಳಗ : 3-4-1932
9. ಶ್ವೇತಕುಮಾರಚರಿತ್ರೆ : ಕಿರಿಕ್ಕಾಡು ವಿಷ್ಣುಭಟ್ಟ ವಿರಚಿತ
10. ಕರ್ಣಾರ್ಜುನ ಪ್ರಸಂಗ : ಪಾಂಡೇಶ್ವರ ವೆಂಕಟ ವಿರಚಿತ
11. ಶಂಬರಾಸುರ ಕಾಳಗ

12. ಪಟ್ಟಾಭಿಷೇಕ : ಪಾರ್ತಿಸುಬ್ಬ ವಿರಚಿತ ಪ್ರಸಂಗ : 20 -4-1933
13. ವಿರಾಟಪರ್ವ-ಅಜಪುರದ ವಿಷ್ಣು ವಿರಚಿತ : 17-7-1931
14. ಲವಕುಶರ ಕಾಳಗ ಅರ್ಥಸಹಿತ : 14-10-1936
15. ಕೃಷ್ಣಸಂಧಾನ ದೇವಿದಾಸ ವಿರಚಿತ : 8-10-1931
16. ಧ್ರುವಚರಿತ್ರೆ : ಜನವರಿ 1930 (ಬರೆಯಲು ಪ್ರಾರಂಭಿಸಿದ್ದು 1929ರಲ್ಲಿ)
17. ಪಾರಿಜಾತ ರುಕ್ಮಾವತಿಕಲ್ಯಾಣ : ಹಲಸಿನಹಳ್ಳಿ ನರಸಿಂಹಶಾಸ್ತ್ರಿ ವಿರಚಿತ : 2-2-1931
18. ಕರ್ಣಾರ್ಜುನ ಕಾಳಗ: ಪಾಂಡೇಶ್ವರ ವೆಂಕಟ: 23-7-1932
19. ಗಿರಿಜಾಕಲ್ಯಾಣ : ದೇವಿದಾಸ ವಿರಚಿತ : 1-1-1935
20. ರುಕ್ಮಾಂಗದಚರಿತ್ರೆ : ಹಲಸಿನಹಳ್ಳಿ ನರಸಿಂಹಶಾಸ್ತ್ರಿ ವಿರಚಿತ : 15-7-1937
21. ಅಂಗದಸಂಧಾನ : ಪಾರ್ತಿಸುಬ್ಬ ವಿರಚಿತ: 25-3-1940
22. ಬಾಣಾಸುರನಕಾಳಗ : ವಿಷ್ಣುವಾರಂಬಳ್ಳಿ ವಿರಚಿತ: 16-6-1931
23. ಭೀಷ್ಮವಿಜಯ : ಹಲಸಿನಹಳ್ಳಿ ನರಸಿಂಹಶಾಸ್ತ್ರಿ ವಿರಚಿತ : 22-10-1934
24. ಬಭ್ರುವಾಹನಕಾಳಗ : ದೇವಿದಾಸ ವಿರಚಿತ : 7-11-1931
25. ಅಭಿಮನ್ಯುಕಾಳಗ-ಸೈಂಧವವಧೆ: ದೇವಿದಾಸ ವಿರಚಿತ: 13-9-1931
26. ಸುರಥಸುಧನ್ವರ ಕಾಳಗ : ಮುಲ್ಕಿ ರಾಮಕೃಷ್ಣಯ್ಯ ವಿರಚಿತ: 13-7-1932
27. ತಾಮ್ರಧ್ವಜನ ಕಾಳಗ : ರತ್ನಪುರದ ರಾಮ ವಿರಚಿತ : 10-7-1935
28. ಘಟೋದ್ಗಜನ ಕಾಳಗ : ಧ್ವಜಪುರದ ನಾಗಪ್ಪಯ್ಯ ವಿರಚಿತ: 21-6-1930
29. ಕಾರ್ತವೀರ್ಯಾರ್ಜುನ ಕಾಳಗ : ಕಡಂದಲೆ ರಾಮರಾಯ ವಿರಚಿತ (ಇದು ಸಂಪಾದಿತ ಎಂದಾಗಬೇಕು)
30. ವಿದ್ಯುನ್ಮತಿಕಲ್ಯಾಣ : ಹಲಸಿನಹಳ್ಳಿ ನರಸಿಂಹಶಾಸ್ತ್ರಿ ವಿರಚಿತ: 19-12-1936
31. ರತ್ನಾವತಿಕಲ್ಯಾಣ : ಕವಿ ಮುದ್ದಣ ವಿರಚಿತ : 11-11-1934
32. ಕುಶಲವರಕಾಳಗ :ಪಾರ್ತಿಸುಬ್ಬ ವಿರಚಿತ : 19-6-1932
33. ದ್ರೌಪದಿಸ್ವಯಂವರ: ಹಟ್ಟಿಯಂಗಡಿ ರಾಮಭಟ್ಟ ವಿರಚಿತ:9-7-1932

ಮೇಲಿನ ಎಲ್ಲಾ ಹಸ್ತಪ್ರತಿಗಳು ನಮ್ಮ ಫಣಿಗಿರಿ ಪ್ರತಿಷ್ಠಾನದ ಸಂಗ್ರಹಾಲಯ ದಲ್ಲಿದ್ದು ಆಸಕ್ತರು ವೀಕ್ಷಿಸಬಹುದು. ಇವುಗಳನ್ನು ಸಂರಕ್ಷಿಸುವ ಕೆಲಸವನ್ನು ಕೂಡ ನಮ್ಮ ಪ್ರತಿಷ್ಠಾನ ಮಾಡಿದೆ. ಬೆಂಗಳೂರಿನ ಯಕ್ಷವಾಹಿನಿಯವರ ಆನ್‌ಲೈನ್ ಯಕ್ಷಪ್ರಸಂಗಕೋಶದ ಮೂಲಕ ಅಂತರ್ಜಾಲದಲ್ಲಿಯೂ ಇವುಗಳ ಸ್ಕ್ಯಾನ್ ಪ್ರತಿ ಲಭ್ಯವಿದೆ.

ಇವಲ್ಲದೆ ಇನ್ನು ಅನೇಕ ಹಸ್ತಪ್ರತಿಗಳು ಇವೆ. ಅವು ಗೆದ್ದಲು ಹಿಡಿದು ಜೀರ್ಣಾವಸ್ಥೆಯಲ್ಲಿರುವುದರಿಂದ ಗುರುತಿಸಲು ಸಾಧ್ಯವಾಗಿಲ್ಲ. ಇದೇ ಸಂದರ್ಭದಲ್ಲಿ ಜ್ಞಾನಪೀಠ ಪ್ರಶಸ್ತಿಪುರಸ್ಕೃತ ಡಾ. ಕೋಟ ಶಿವರಾಮಕಾರಂತರು ತಮ್ಮ 'ಯಕ್ಷಗಾನಬಯಲಾಟ' ಪುಸ್ತಕದಲ್ಲಿ ಬರೆದ ಒಂದು ವಾಕ್ಯ ನೆನಪಿಗೆ ಬರುತ್ತದೆ: "ಶಿರೂರು ಪಣಿಯಪ್ಪಯ್ಯನವರು ಯಕ್ಷಗಾನ ಪ್ರತಿಗಳನ್ನು ಸಂಗ್ರಹಿಸಿರುವದು ಮಾತ್ರವಲ್ಲದೆ ಪ್ರತಿಯೊಂದು ಪ್ರಸಂಗವನ್ನು ಆಳವಾಗಿ ಅಭ್ಯಸಿಸಿದ್ದು ಅವುಗಳ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿದ್ದಾರೆ" ಎಂದು.

ನನಗೆ ತಿಳಿದಿರುವಂತೆ ನಮ್ಮ ಅಪ್ಪಯ್ಯನಿಗೆ 40ಕ್ಕೂ ಹೆಚ್ಚು ಪೌರಾಣಿಕ ಪ್ರಸಂಗಗಳ ಪದ್ಯಗಳನ್ನು ಪೂರ್ತಿಯಾಗಿ ತಮ್ಮ ನೆನಪಿನಶಕ್ತಿಯಿಂದ ಕಂಠಪಾಠವಾಗಿ ಪುಸ್ತಕದ ಸಹಾಯವಿಲ್ಲದೆ ಹೇಳುವ ಸಾಮರ್ಥ್ಯವಿತ್ತು. ನನಗೆ ದೊರೆತ ಒಂದು ದಾಖಲೆಯಲ್ಲಿ 1935ರಲ್ಲಿ (ಅವರ 17ನೆ ವಯಸ್ಸಿನಲ್ಲಿ) ಅವರು ತಮ್ಮ ಕಂಠಪಾಠ ಬರುವ ಪ್ರಸಂಗಗಳ ಒಂದು ಪಟ್ಟಿ ತಯಾರಿಸಿರುವುದು ಸಿಕ್ಕಿದ್ದು ಆ ಪಟ್ಟಿ ಹೀಗಿದೆ:

1. ಕರ್ಣಾರ್ಜುನಕಾಳಗ
2. ಚಿತ್ರಸೇನಕಾಳಗ
3. ಬಿಲ್ಲಹಬ್ಬ–ಕಂಸವಧೆ
4. ಲವಕುಶರಕಾಳಗ
5. ಕೃಷ್ಣಸಂಧಾನ
6. ಭೀಷ್ಮಪರ್ವ
7. ಸುಭದ್ರಾಕಲ್ಯಾಣ
8. ಸುಧನ್ವಕಾಳಗ
9. ಪಂಚವಟಿ
10. ವಾಲಿಸುಗ್ರೀವರಕಾಳಗ
11. ದ್ರೌಪದಿಸ್ವಯಂವರ
12. ಕೃಷ್ಣಾರ್ಜುನಕಾಳಗ

13. ಅಭಿಮನ್ಯುಕಾಳಗ
14. ಸೈಂಧವವಧೆ
15. ಶಂಬರಾಸುರಕಾಳಗ
16. ಭೀಷ್ಮವಿಜಯ
17. ವಿರಾಟಪರ್ವ
18. ಉತ್ತರಗೋಗ್ರಹಣ
19. ಬಭ್ರುವಾಹನಕಾಳಗ
20.ತಾಮ್ರಧ್ವಜನಕಾಳಗ

ಇದಲ್ಲದೆ ಬಾಯಿಪಾಠ ಬರುವ 'ದೇವದೇವರದೇವಾ' ಮೊದಲಾದ ಸುಮಾರು 36 ತುಂಡು ಪದ್ಯಗಳ ಪಟ್ಟಿಕೂಡ ಇದೆ. ಹೀಗೆ ಬಾಲ್ಯದಲ್ಲಿ ಏಳೆಂಟು ವರ್ಷ ಸತತ ಯಕ್ಷಗಾನ ಸಾಹಿತ್ಯ ಪುರಾಣ ಸಾಹಿತ್ಯಗಳನ್ನು ಮನೆಯಲ್ಲಿಯೇ ಸ್ವಇಚ್ಛೆಯಿಂದ ಸ್ವಂತ ಪರಿಶ್ರಮದಿಂದ ಕಲಿತಿರುವುದು ಕಂಡುಬರುತ್ತದೆ. ಯಾವುದೇ ವಿಶ್ವವಿದ್ಯಾನಿಲಯದ ಪದವಿ ಪರೀಕ್ಷೆ ಪಾಸು ಮಾಡದಿದ್ದರೂ ಯಕ್ಷಗಾನದಲ್ಲಿ ಮನೆಯ ಪಾಠಶಾಲೆಯಲ್ಲಿಯೇ ಸಾಕಷ್ಟು ಜ್ಞಾನ ಸಂಪಾದಿಸಿದ್ದಾರೆ ನಮ್ಮ ಅಪ್ಪಯ್ಯ ಶಿರೂರು ಪಣಿಯಪ್ಪಯ್ಯನವರು. ಪ್ರಸಂಗಕಂಠ ಪಾಠದ ಬಗ್ಗೆ ಅವರು ಕೊಲ್ಲೂರು ಮೇಳದಲ್ಲಿ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದಾಗ ನಡೆದ ಘಟನೆಯೊಂದನ್ನು (ನಾನು ಕೇಳಿ ತಿಳಿದುದು) ಹೇಳ ಬಯಸುತ್ತೇನೆ. ಊರು ಯಾವುದೆಂದು ಗೊತ್ತಿಲ್ಲ; ಸುಮಾರು 1955ರ ಸಮಯ. ಕೊಲ್ಲೂರು ಮೇಳದ ಆಟ ನಿಗದಿಯಾಗಿತ್ತು. ಆಟ ವಹಿಸಿಕೊಂಡ ವ್ಯಕ್ತಿ ಒಂದು ಪೌರಾಣಿಕ ಪ್ರಸಂಗ (ದ್ರೌಪದಿ ಸ್ವಯಂವರ) ಆಡುವಂತೆ ಹೇಳುತ್ತಾರೆ. ಅದರಂತೆ ಆಟ ನಿಗದಿಯಾಗುತ್ತದೆ. ಸಂಜೆ 5ಘಂಟೆಗೆ ಭಾಗವತರು ಬಂದು ಫಣಿಯಪ್ಪಯ್ಯನವರಲ್ಲಿ 'ಇಂದು ನಿಗದಿಯಾದ ಪ್ರಸಂಗದ ಪುಸ್ತಕ ಸಿಗುತ್ತಿಲ್ಲ ಏನು ಮಾಡುವುದು?' ಎಂದು ಕೇಳುತ್ತಾರೆ. ಈಗಾಗಲೇ ಪ್ರಚಾರವಾಗಿರುವುದ ರಿಂದ ಪ್ರಸಂಗ ಬದಲಾವಣೆಗೆ ಪ್ರದರ್ಶಕರು ಒಪ್ಪುವುದಿಲ್ಲ ಆಗ ಫಣಿಯಪ್ಪಯ್ಯನವರು ತಮಗೆ ಕಂಠಪಾಠವಿದ್ದ ಪ್ರಸಂಗವನ್ನು ಹಾಳೆಗಳಲ್ಲಿ ಬರೆಯಲು ಪ್ರಾರಂಭಿಸುತ್ತಾರೆ. ಹೀಗೆ ಎರಡು ಮೂರು ತಾಸಿನಲ್ಲಿ ಪ್ರಸಂಗವನ್ನು ತಮ್ಮ ನೆನಪಿನ ಶಕ್ತಿಯಿಂದಲೇ ಬರೆದು ಆಟನಡೆಸುತ್ತಾರೆ. ಬೆಳಗಿನವರೆಗೆ ಆಟ ನಡೆಯುತ್ತದೆ. ಆಟ ನಡೆಯುತ್ತಿದ್ದಾಗ ಕೂಡ ಮುಂದಿನ ಪದ್ಯಗಳನ್ನು ಹಾಳೆಯಲ್ಲಿ ಬರೆದು ಭಾಗವತರಿಗೆ ಕೊಡುತ್ತಾರೆ. ಹೀಗೆ ರಾತ್ರಿ ಬರೆದ ಆ ಹಾಳೆಗಳನ್ನು ನಾನು ನೋಡಿದ್ದೆ. ಬಾಲ್ಯದಲ್ಲಿ ಕಲಿತ ವಿದ್ಯೆ ಕೊನೆಯವರೆಗೆ ನೆನಪಿನಲ್ಲಿರುತ್ತದೆ ಎಂಬುದು ಸುಳ್ಳಲ್ಲ.

ತಮ್ಮ ತಂದೆಯ ಮರಣಾನಂತರ ಮನೆಯ ಯಜಮಾನತ್ವ ಫಣಿಯಪ್ಪಯ್ಯನವರ ಹೆಗಲೇರಿತು. ಯಕ್ಷಗಾನ ಬಯಲಾಟ, ತಾಳಮದ್ದಳೆ ಕೂಟ ಎರಡರಲ್ಲೂ ಆಸಕ್ತಿ ಬೆಳಸಿಕೊಂಡ ಇವರು ತಮ್ಮ ಮನೆಯಲ್ಲಿಯೇ ಕಲಾವಿದರನ್ನು ಸೇರಿಸಿ ತಾಳಮದ್ದಳೆ ನಡೆಸುತ್ತಿದ್ದರು. ನೆರೆಮನೆಯ ವಿನಾಯಕ ಶ್ಯಾನುಭೋಗ, ಅಣ್ಣ ಪದ್ಮನಾಭಯ್ಯ (ಚಿಕ್ಕಪ್ಪನಮಗ) ಇವರು ಉತ್ತಮ ಯಕ್ಷಗಾನ ತಾಳಮದ್ದಳೆ ಅರ್ಥಧಾರಿಗಳಾಗಿದ್ದು ಇಂತಹ ಕೂಟಗಳಲ್ಲಿ ಭಾಗವಹಿಸುತ್ತಿದ್ದರು. ವರ್ಷದಲ್ಲಿ ಮೂರ್ನಾಲ್ಕು ಬಾರಿ ಯಕ್ಷಗಾನ ಮೇಳಗಳಿಗೆ ವೀಳ್ಯಕೊಟ್ಟು ಕರೆಸಿ ನಮ್ಮ ಮನೆಯ ಎದುರಿನ ಗದ್ದೆಯಲ್ಲಿ ಯಕ್ಷಗಾನ ಬಯಲಾಟ ಆಡಿಸುತ್ತಿದ್ದುದು ಮಾಮೂಲಿಯಾಗಿತ್ತು. ಇದರಿಂದ ಆಕಾಲದ ಹಲವು ಯಕ್ಷಗಾನ ಕಲಾವಿದರು ನಮ್ಮ ಅಪ್ಪಯ್ಯನ ಸ್ನೇಹಿತರಾಗಿದ್ದರು. ನಮ್ಮ ಅತ್ತೆ (ಅಪ್ಪಯ್ಯನತಂಗಿ) ಸಾವಿತ್ರಿಯವರನ್ನು ಐರೋಡಿ ಸುಬ್ರಾಯಭಟ್ಟರಿಗೆ ಕೊಟ್ಟು ಮದುವೆ ಮಾಡಿದ್ದರು. ಅವರು ಕೂಡ ಯಕ್ಷಗಾನ ಪ್ರೇಮಿಯಾಗಿದ್ದು ಇಬ್ಬರೂ ಪತ್ರವ್ಯವಹಾರವನ್ನು ಯಕ್ಷಗಾನ ಪದ್ಯಗಳ ರೂಪದಲ್ಲಿ ನಡೆಸುತ್ತಿದ್ದರೆಂದು ಕೇಳಿದ್ದೇನೆ. ಇನ್ನೊಬ್ಬ ತಂಗಿ ಭವಾನಿಯ ಗಂಡ ಎಸ್. ಜಿ. ಭಟ್ಟರು ಮುರುಡೇಶ್ವರದವರಾಗಿದ್ದು ಒಳ್ಳೆಯ ಚಿತ್ರಕಲಾವಿದ ಮತ್ತು ಫೋಟೋಗ್ರಾಫರ್ ಆಗಿದ್ದರು. ದೊಡ್ಡ ತಂಗಿ ವೆಂಕಮ್ಮನನ್ನು ಉಪ್ಪುಂದಕ್ಕೆ ಮದುವೆ ಮಾಡಿಕೊಟ್ಟಿದ್ದರು. ಅವರು ಬಹಳ ಸಣ್ಣ ವಯಸ್ಸಿನಲ್ಲಿ ವಿಧವೆಯಾಗಿ ತವರುಮನೆ ಸೇರಿಕೊಂಡಿದ್ದರು. ಕಿರಿಯ ತಂಗಿ ಲಕ್ಷ್ಮಿಯನ್ನು ಭಟ್ಕಳದ ಹಡೀಲು ಅವಭೃತರ ಮನೆಗೆ ಮಾಡುವೆ ಮಾಡಿಕೊಟ್ಟಿದ್ದು ಭಾವ ಶಿವರಾಮ ಅವಭೃತ ತಂಗಿ ಲಕ್ಷ್ಮಿ ಮುಂಬೈನಲ್ಲಿ ವಾಸವಾಗಿದ್ದರು. ತಮ್ಮಂದಿರಲ್ಲಿ ಶಿವರಾಮ ಮತ್ತು ಸುಬ್ರಾಯ ಸರಕಾರಿ ಶಾಲೆಗಳಲ್ಲಿ ಅಧ್ಯಾಪಕ ವೃತ್ತಿಯಲ್ಲಿ ತೊಡಗಿದ್ದರೆ ಕಿರಿಯ ತಮ್ಮ ಬಾಲಕೃಷ್ಣ ಲೋಕೋಪಯೋಗಿ ಇಲಾಖೆಯಲ್ಲಿ ಉದ್ಯೋಗ ಮಾಡುತ್ತಿದ್ದರು. ಹೀಗೆ ತಮ್ಮಂದಿರು ಬೇರೆ ಕಡೆ ಉದ್ಯೋಗಗಳಲ್ಲಿ ತೊಡಗಿಕೊಂಡುದರಿಂದ ನನ್ನ ತಂದೆಯವರು ಮನೆಯಲ್ಲಿನಿಂತು ಕುಟುಂಬದ ಆಸ್ತಿ ನಿರ್ವಹಣೆಯ ಜವಾಬ್ದಾರಿ ನಿರ್ವಹಿಸತೊಡಗಿದರು. ತಮ್ಮ ಇಪ್ಪತ್ನಾಲ್ಕನೆಯ ವಯಸ್ಸಿನಲ್ಲಿ ಬಾರಕೂರಿನ ಪರಮೇಶ್ವರರಾಯರ ಹಿರಿಯ ಪುತ್ರಿ ಗಿರಿಜಾ ಅವರನ್ನು ಲಗ್ನವಾದರು. ಆಗ ನಮ್ಮ ಅಮ್ಮನ ವಯಸ್ಸು 14 ಆಗಿತ್ತು. 1942ರಲ್ಲಿ ಮದುವೆಯಾಗಿರಬಹುದು. ದಿನಾಂಕ ಗೊತ್ತಿಲ್ಲ.

ಇದೇ ಸಮಯದಲ್ಲಿ (1938-40) ಮೊಳಹಳ್ಳಿ ಶಿವರಾಯರ ನೇತೃತ್ವದಲ್ಲಿ ಸಹಕಾರಿ ಸಂಘಗಳ ಕಾರ್ಯಚಟುವಟಿಕೆ ಆರಂಭವಾಗಿತ್ತು. ಆಗ ಶಿರೂರು

ಗ್ರಾಮದಲ್ಲಿ ಸಹಕಾರಿ ಸಂಘದ ಕಾರ್ಯದರ್ಶಿಯಾಗಿ ನೇಮಕವಾದವರು ನಮ್ಮ ಅಪ್ಪಯ್ಯ. ಸಂಘದ ಕಾರ್ಯಚಟುವಟಿಕೆಗಳನ್ನು ತಮ್ಮ ಮನೆಯಲ್ಲಿಯೇ ಪ್ರಾರಂಭಿಸಿದರು. ಮುಖ್ಯವಾಗಿ ಊರಿನ ಜನರಿಗೆ ರೇಷನ್ ವಿತರಣೆಯ ಜವಾಬ್ದಾರಿ ಸಂಘದ್ದಾಗಿತ್ತು. ಎರಡನೇ ವಿಶ್ವಮಹಾಯುದ್ಧ ಆರಂಭವಾದಾಗ ಜನರಿಗೆ ಆಹಾರ ವಿತರಣೆ ಇವರ ಹೆಗಲೇರಿತು. ಸರಕಾರ ನಿರ್ಧರಿಸಿದ ಪಡಿತರ ವಿತರಣೆ ಮಾಡಬೇಕಿತ್ತು. ಜಾಸ್ತಿ ಸಂಗ್ರಹಮಾಡಿ ಇಡುವಂತಿರಲಿಲ್ಲ. ಆಗಾಗ ತಹಸೀಲ್ದಾರರು ಭೇಟಿಕೊಡುತ್ತಿದ್ದರು. ಕಟ್ಟುನಿಟ್ಟಿನ ತಪಾಸಣೆ ನಡೆಸುತ್ತಿದ್ದರಂತೆ. ಆಗ ಪ್ರಾಮಾಣಿಕತೆಯಿಂದ ತನ್ನ ಪಾಲಿನ ಕೆಲಸ ನಿರ್ವಹಿಸಿ ಅಧಿಕಾರಿಗಳ ಹಾಗೂ ಊರಿನ ಜನರ ವಿಶ್ವಾಸಗಳಿಸಿರುವುದಾಗಿ ಆಗಾಗ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು.

ಊರಿಗೆ ಯಾವುದೇ ಸರಕಾರೀ ಅಧಿಕಾರಿಗಳು ಬಂದರೂ ಊಟ ವಸತಿಗೆ ಫಣಿಯಪ್ಪಯ್ಯನವರ ಮನೆಯನ್ನೇ ಆಶ್ರಯಿಸಬೇಕಿತ್ತು. ಶಾಲೆಯ ಅಧ್ಯಾಪಕರು ಇವರ ಮನೆಯಲ್ಲಿಯೇ ಊಟಕ್ಕೆ ಬರುತ್ತಿದ್ದರು. ನಾಲ್ಕಾರು ಹತ್ತಿರ ಸಂಬಂಧಿಕರ ಮಕ್ಕಳು ಶಾಲಾ ವಿದ್ಯಾಭ್ಯಾಸವನ್ನು ಇವರ ಮನೆಯಲ್ಲಿದ್ದು ನಡೆಸುತ್ತಿದ್ದರು. ಹೀಗೆ ಪ್ರತಿದಿನ 25 ರಿಂದ 30ಜನ ಊಟಕ್ಕೆ ಇರುತ್ತಿದ್ದರೆಂದು ಅಮ್ಮ ಹೇಳುತ್ತಿದ್ದ ನೆನಪು. ಗಣಪತಿ ಚೌತಿಹಬ್ಬ, ಹತ್ತು ದಿನದ ನವರಾತ್ರಿ ವಿಜಯದಶಮಿ ಹಬ್ಬ ಪ್ರತಿವರ್ಷ ವಿಜೃಂಭಣೆಯಿಂದ ನಡೆಯುತ್ತಿತ್ತು. ಇದರ ಜೊತೆಗೆ ಸ್ವಾತಂತ್ರ್ಯ ಸಂಗ್ರಾಮದ ಖಾದಿ ಚಳುವಳಿಯಲ್ಲಿಯೂ ಫಣಿಯಪ್ಪಯ್ಯನವರು ಭಾಗವಹಿಸಿ ತಮ್ಮಮನೆಯಲ್ಲಿಯೇ ಅಂಬರಚರಕ ತರಗತಿ ಪ್ರಾರಂಭಿಸಿ ದೇಶ ಸೇವೆಯ ಕೈಂಕರ್ಯ ಕೈಗೊಂಡಿದ್ದರು. ಈ ಖಾದಿನೂಲು ತೆಗೆಯುವ ಚರಕಗಳು ನಮ್ಮ ಮನೆಯಲ್ಲಿ ಇಂದಿಗೂ ಇದ್ದು ಗತಕಾಲವನ್ನು ನೆನಪಿಸುತ್ತವೆ. ಯಕ್ಷಗಾನ ಸಾಹಿತ್ಯ ರಚನೆಯ ಜೊತೆಗೆ ಯಕ್ಷಗಾನ ಪರಿಕರಗಳಾದ ಮದ್ದಳೆ, ಚಂಡೆ, ಶ್ರುತಿಬುರುಡೆ ಇವುಗಳನ್ನು ಸ್ವತಃ ಸಿದ್ಧಪಡಿಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದರು. ಅವರು ತಯಾರಿಸಿದ ಪರಿಕರಗಳು ನಮ್ಮಮನೆಯಲ್ಲಿ ಇದ್ದವು. ಚೌತಿಹಬ್ಬಕ್ಕೆ ಆವೆಮಣ್ಣಿನಿಂದ ಗಣಪತಿ ವಿಗ್ರಹಗಳ ತಯಾರಿಕೆ, ಮದುವೆ ಮನೆಗಳಲ್ಲಿ ಬಿದಿರು ಮತ್ತು ಬಣ್ಣದ ಕಾಗದಗಳಿಂದ ಮಂಟಪ ರಚನೆ, ದೀಪಾವಳಿಯಲ್ಲಿ ಬಣ್ಣದ ಗೂಡುದೀಪರಚನೆ, ದೊಡ್ಡ ಗಾಳಿಪಟಗಳ ರಚನೆ, ತಗಡಿನಿಂದ ಕರಡಿಗೆ ಡಬ್ಬಗಳನ್ನು ಮಾಡುವುದು, ಸಾರಣಿಗೆ ಮೊದಲಾದ ಕೃಷಿಸಲಕರಣೆ ತಯಾರಿಕೆ, ಬಿದಿರಿನಿಂದ ಬುಟ್ಟಿ ಹೆಣೆಯುವುದು, ಓಲೆಕೊಡೆ, ಗೊರಬು (ಕೃಷಿಕಾರ್ಯದಲ್ಲಿ ಹೆಂಗಸರು ಮಳೆಯಿಂದ ರಕ್ಷಣೆಪಡೆಯಲು ಬಳಸುವ

ಸಾಧನ) ತಯಾರಿ, ಕೊಡೆ ರಿಪೇರಿ ಹೀಗೆ ಹಲವು ಕೆಲಸಗಳನ್ನು ನೋಡಿ ಕೇಳಿ ಕಲಿತುಕೊಂಡಿದ್ದರು. ಇದಲ್ಲದೆ ಆಯುರ್ವೇದ ಚಿಕಿತ್ಸೆಗಳಲ್ಲಿ ಆಸಕ್ತಿ ಹೊಂದಿದ್ದು ಕೆಲವು ಗಿಡಮೂಲಿಕೆ ಔಷಧಗಳನ್ನೂ ಊರಿನ ರೋಗಿಗಳಿಗೆ ನೀಡಿ ಗುಣಪಡಿಸುತ್ತಿದ್ದರು. ಜ್ಯೋತಿಷ್ಯ ಶಾಸ್ತ್ರದಲ್ಲೂ ಪರಿಣತಿ ಹೊಂದಿದ್ದು ಜಾತಕ ತಯಾರಿಸುವುದು, ಲಗ್ನಕ್ಕೆ ಗಂಡು ಹೆಣ್ಣು ಹೊಂದಾಣಿಕೆ ಇತ್ಯಾದಿ ಕಾರ್ಯಗಳನ್ನು ಮಾಡುತ್ತಿದ್ದರು. ದೇವತಾಪೂಜೆ, ಮಂತ್ರತಂತ್ರಗಳ ಜ್ಞಾನ ಕೂಡ ಹೊಂದಿದ್ದರು. ಎಲ್ಲ ರೀತಿಯ ಕರಕುಶಲಕಲೆಗಳಲ್ಲಿ ಪರಿಣತರಾಗಿದ್ದರೂ ಯಾವುದನ್ನೂ ಉದ್ಯೋಗಕ್ಕಾಗಿ ಅಥವಾ ಹಣ ಸಂಪಾದನೆಗಾಗಿ ಬಳಸಿಕೊಳ್ಳದೇ ಇದ್ದದ್ದು ನಮ್ಮ ಅಪ್ಪಯ್ಯನ ವೈಶಿಷ್ಯ ಎನ್ನಬಹುದು. ಎಲ್ಲ ವಿದ್ಯೆಯನ್ನು ಮನಃಸಂತೋಷಕ್ಕಾಗಿ, ಬೇರೆಯವರಿಗೆ ಉಪಕಾರ ಮಾಡುವುದಕ್ಕಾಗಿ ಮಾತ್ರ ಉಪಯೋಗಿಸುತ್ತಿದ್ದಲ್ಲದೆ ಯಾವುದಕ್ಕೂ ಫಲಾಪೇಕ್ಷೆ ಮಾಡುತ್ತಿರಲಿಲ್ಲ.

ನಮ್ಮ ಅಪ್ಪಯ್ಯ ತಮ್ಮ 22ನೆಯ ವಯಸ್ಸಿನಲ್ಲಿ 1940ರಲ್ಲಿ ಸ್ವತಂತ್ರವಾಗಿ ರಚಿಸಿದ ಮೊದಲ ಯಕ್ಷಗಾನಕೃತಿ 'ವಾಜಿಗ್ರಹಣ ಅಥವಾ ಯೌವನಾಶ್ವಕಾಳಗ'. (ಈ ಪ್ರಸಂಗ ಪುಸ್ತಕವನ್ನು ಇತ್ತೀಚಿಗೆ ನಾವು ಡಾ. ಕಬ್ಬಿನಾಲೆ ವಸಂತ ಭಾರದ್ವಾಜರ ಸಂಪಾದಕತ್ವದಲ್ಲಿ 'ಫಣಿಗಿರಿಪ್ರತಿಷ್ಠಾನ'ದ ಮೂಲಕ 19-11-1921ರಂದು ಪ್ರಕಟಣೆ ಮಾಡಿದ್ದೇವೆ.) ಫಣಿಯಪ್ಪಯ್ಯನವರು ಯಕ್ಷಗಾನದಲ್ಲಿ ಹೆಚ್ಚಿನ ಆಸಕ್ತಿ ಬೆಳೆಸಿಕೊಂಡು ಹಸ್ತಪ್ರತಿಗಳ ಜೊತೆಗೆ ಮುದ್ರಿತ ಯಕ್ಷಗಾನ ಪ್ರಸಂಗಗಳನ್ನೂ ಸಂಗ್ರಹಿಸಿ ಅವುಗಳ ಅಧ್ಯಯನ ನಡೆಸಿದವರು. ನನಗೆ ದೊರೆತ ಇಂತಹ ಮುದ್ರಿತ ಪ್ರಸಂಗಗಳ ವಿವರ ಈ ರೀತಿ ಇದೆ:

1. ಕುಮಾರವಿಜಯ - ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಪ್ರಕಟಣೆ - 1949
2. ವಾಲಿಸುಗ್ರೀವರಕಾಳಗ - ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ ಪ್ರಕಟಣೆ-1942
3. ಶ್ರೀಕೃಷ್ಣವಿವಾಹ -ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಪ್ರಕಟಣೆ-1949
4. ಕನಕಾಂಗಿಕಲ್ಯಾಣ - ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಪ್ರಕಟಣೆ-1929
5. ಕರ್ಣಪಟ್ಟಾಭಿಷೇಕ - ಎಸ್. ಆರ್. ಶೆಟ್ಟಿ, ಹಿರಿಯಡ್ಕ -1957
6. ರತಿಕಲ್ಯಾಣ - ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಪ್ರಕಟಣೆ-1926
7. ಹನುಮಂತಪ್ರತಾಪ - ಮಂಜಪ್ಪ ಹೊನ್ನಪ್ಪ ಬುಕ್ ಸೆಲ್ಲರ್, ಕುಮಟಾ-1931
8. ಏಣಿಬಂಧನ - ವಂಡ್ಸೆಪಾಂಡುರಂಗ ಅನಂತಶೆಣೈ

9. ಯಕ್ಷಗಾನ ಐರಾವತ – ಮೈಸೂರು ಮುದ್ರಣ
10. ಶಶಿಪ್ರಭಾಪರಿಣಯ – ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಪ್ರಕಟಣೆ–1949
11. ಮೀನಾಕ್ಷಿಕಲ್ಯಾಣ –ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಪ್ರಕಟಣೆ–1946
12. ಭಸ್ಮಾಸುರಮೋಹಿನಿ –ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಪ್ರಕಟಣೆ–1954
13. ಯೋಗಿನಿಕಲ್ಯಾಣ –ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಪ್ರಕಟಣೆ–1961
14. ಕೃಷ್ಣಾರ್ಜುನಕಾಳಗ –ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಪ್ರಕಟಣೆ–1947
15. ಶ್ರೀಶನಿಮಹಿಮಾಕೀರ್ತನಾಮೃತ
16. ಇಂದ್ರಜಿತುಕಾಳಗ –ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಪ್ರಕಟಣೆ–1929
17. ವಿಷಯೇಕಲ್ಯಾಣ–ಚಂದ್ರಹಾಸಾಖ್ಯಾನ –ಶಂಭುಗಣಪತಿಭಟ್ –1950
18. ಗಿರಿಜಾಕಲ್ಯಾಣ –ಕರ್ನಾಟಕ ಬುಕ್‌ಡಿಪೋ, ಬೆಂಗಳೂರು –1887
19. ಬ್ರಹ್ಮಕಪಾಲ –ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಪ್ರಕಟಣೆ–1950
20. ಐರಾವತಪ್ರಸಂಗ – ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಪ್ರಕಟಣೆ– 1949
21. ಕುಮುದಾಕ್ಷಿಕಲ್ಯಾಣ –ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಪ್ರಕಟಣೆ–1933
22. ಶ್ರೀಮಂದಾರ್ತಿಕ್ಷೇತ್ರಮಹಾತ್ಮೆ– ದುರ್ಗಾಪರಮೇಶ್ವರಿ ದೇವಸ್ಥಾನ –1966
23. ಅಂಗದಸಂಧಾನ –ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಪ್ರಕಟಣೆ–1955
24. ಭೋಜಕಾಳಿದಾಸ– ಕಡತೋಕ ಮಂಜುನಾಥ ಭಾಗವತ –1959
25. ನಳಚರಿತ್ರೆ– ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಪ್ರಕಟಣೆ– 1962
26. ಇಂದ್ರಕೀಲಕ –ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಪ್ರಕಟಣೆ–1951
27. ದ್ರೌಪದಿಪ್ರತಾಪ –ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಪ್ರಕಟಣೆ–1959
28. ಹರಿಶ್ಚಂದ್ರಚರಿತ್ರೆ
29. ರತ್ನಪ್ರಭಾಪರಿಣಯ–ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಪ್ರಕಟಣೆ–1951
30. ಬಭ್ರುವಾಹನಕಾಳಗ
31. ಶ್ರೀವಿಷ್ಣುಲೀಲೆ– ಡಿ.ವಿ. ಹೊಳ್ಳ, ಕುಂದಾಪುರ
32. ಕಾರ್ತವೀರ್ಯಾರ್ಜುನವಧೆ
33. ರುಗ್ಮವತಿಕಲ್ಯಾಣ
34. ತ್ರಿಪುರಮಥನ –1957
35. ಕುಶಲವರಕಾಳಗ
36. ಶಶಿಕಲಾಸ್ವಯಂವರ
37. ಶ್ರೀದೇವಿಬನಶಂಕರಿ

ಈ ಎಲ್ಲಾ ಪ್ರಸಂಗ ಪುಸ್ತಕಗಳನ್ನು ಫಣಿಗಿರಿ ಪ್ರತಿಷ್ಠಾನದ ಸಂಗ್ರಹಾಲಯದಲಿ ಸಂರಕ್ಷಿಸಿ ಇಡಲಾಗಿದೆ. ಆಸಕ್ತರು ವೀಕ್ಷಿಸಬಹುದು.

1940 ರಿಂದ 1965ರವರೆಗೆ ಹಲವು ಪೌರಾಣಿಕ ಪ್ರಸಂಗಗಳನ್ನು ತಮ್ಮ ಬಿಡುವಿರದ ಇತರ ಚಟುವಟಿಕಗಳ ನಡುವೆ ಶಿರೂರು ಪಣಿಯಪ್ಪಯ್ಯನವರು ರಚಿಸಿದ್ದಾರೆ. ಅವುಗಳ ಒಂದು ಪಟ್ಟಿ ಹೀಗಿದೆ:

1. ನಹುಷೋದ್ಭವ
2. ಮದಾಲಸಾಪರಿಣಯ
3. ವಾಜಿಗ್ರಹಣ
4. ಸಗರಾಶ್ವಮೇಧ
5. ಅಮೃತಾಪಹರಣ
6. ವೀರವರ್ಮಕಾಳಗ
7. ನೀಲಧ್ವಜಕಾಳಗ
8. ಪೌಲೋಮಚರಿತ್ರೆ
9. ಭ್ರಮರವೇಣಿಕಲ್ಯಾಣ
10. ಸರ್ಪಾಧ್ವರ
11. ಶ್ರೀಕೃಷ್ಣಗಾರುಡಿ

ಇವುಗಳನ್ನು ಹಲವು ಮೇಳಗಳಲ್ಲಿ ಆಟಆಡುತ್ತಿದ್ದರಂತೆ. ಇವುಗಳಲ್ಲಿ 'ಶ್ರೀಕೃಷ್ಣಗಾರುಡಿ' ಉಡುಪಿಯ ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯದಿಂದ 1963ರಲ್ಲಿ ಪ್ರಕಟಣೆಗೊಂಡಿದೆ. ಇಂದಿಗೂ ಶ್ರೀಕೃಷ್ಣಗಾರುಡಿ ಜನಪ್ರಿಯ ಪ್ರಸಂಗವಾಗಿದ್ದು ಇತ್ತೀಚೆಗೆ ಸುಬ್ರಹ್ಮಣ್ಯ ಧಾರೇಶ್ವರರ ಭಾಗವತಿಕೆಯಲ್ಲಿ ಪ್ರದರ್ಶನಗೊಂಡಿದೆ. ಮಂದಾರ್ತಿ, ಮಾರಣಕಟ್ಟೆ, ಪೆರ್ಡೂರು ಮೇಳದವರು ಆಗಾಗ ಇದನ್ನು ರಂಗದಲ್ಲಿ ಪ್ರದರ್ಶಿಸಿದ್ದಾರೆ.

ಅನಂತರ ಫಣಿಯಪ್ಪಯ್ಯನವರು ಕೆಲವು ಕಾಲ್ಪನಿಕಕತೆ/ ಸ್ಥಳ ಪುರಾಣಗಳ ಪ್ರಸಂಗಗಳನ್ನೂ ರಚಿಸಿದರು. ಅವುಗಳ ವಿವರ ಇಂತಿದೆ:

1. ಮಹೇಂದ್ರವಿಜಯ
2. ಭೂಮಿಕಾಪರಿಣಯ
3. ಶ್ವೇತಚಂದ್ರಿಕಾ
4. ಅಬ್ಯಾಡಿ ಕ್ಷೇತ್ರಮಾಹಾತ್ಮೆ

ಇವುಗಳಲ್ಲಿ ಕೆಲವು ಪ್ರಸಂಗಗಳು ಈಗ ದೊರೆಯುತ್ತಿಲ್ಲ. ಆಗ ಪ್ರಸಂಗ ರಚಿಸಿ ಪುಸ್ತಕಗಳನ್ನೂ ಮೇಳದ ಭಾಗವತರಿಗೆ ಕೊಡುತ್ತಿದ್ದರಂತೆ. ಕೆಲವು ಪುಸ್ತಕ

ಹಿಂತಿರುಗಿ ಬಂದಿದ್ದರೆ ಕೆಲವು ಕಣ್ಮರೆಯಾಗಿವೆ. ಸದ್ಯ ಸಗರಾಶ್ವಮೇಧ, ಅಮೃತಾಪಹರಣ, ವೀರವರ್ಮಕಾಳಗ, ನೀಲಧ್ವಜಕಾಳಗ, ಪೌಲೋಮಚರಿತ್ರೆ, ಭ್ರಮರವೇಣಿ ಕಲ್ಯಾಣ, ಸರ್ಪಾಧ್ವರಪ್ರಸಂಗಗಳ ಹಸ್ತಪ್ರತಿ ದೊರಕಿಲ್ಲ. ದೊರಕಿದ ಉಳಿದ ಪ್ರಸಂಗಗಳನ್ನು ಪ್ರಕಟಿಸುವ ದೃಢಸಂಕಲ್ಪ ನನ್ನದು. ಇದಕ್ಕೆ ಕಲಾಭಿಮಾನಿಗಳ ಸಹಕಾರ ಕೋರುತ್ತೇನೆ.

ನನ್ನ ಅಪ್ಪಯ್ಯನ ಸಮಕಾಲೀನ ಕಲಾವಿದರಲ್ಲಿ ಕೆಲವರನ್ನು ಇಲ್ಲಿ ಸ್ಮರಿಸಿಕೊಳ್ಳುತ್ತೇನೆ. ಅವರು ಕೆಲವು ಕಾಲ ಕೊಲ್ಲೂರು ಮತ್ತು ಇಡಗುಂಜಿ ಮೇಳದಲ್ಲಿ ಒಟ್ಟಿಗೆ ಕೆಲಸಮಾಡಿದ್ದ ಸಹೋದ್ಯೋಗಿಗಳಾಗಿದ್ದರು. ಪ್ರಾಚಾರ್ಯ ನಾರಾಯಣಪ್ಪ ಉಪ್ಪೂರರು, ಕೆರೆಮನೆ ಶಿವರಾಮಹೆಗಡೆ, ಮಹಾಬಲ ಹೆಗಡೆ, ಶಂಭು ಹೆಗಡೆ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಮುರೂರು ದೇವರು ಹೆಗಡೆ, ಕುಂಜಾಲು ರಾಮಕೃಷ್ಣ, ಮಾರ್ಗೋಳಿ ಗೋವಿಂದ ಸೇರಿಗಾರ, ತಿಮ್ಮಪ್ಪಶೇರಿಗಾರ, ಹಾರಾಡಿ ರಾಮ, ಹಾರಾಡಿ ಕೃಷ್ಣ, ನಾರಾಯಣ, ಮರವಂತೆ ನರಸಿಂಹದಾಸ, ಮರವಂತೆ ಶ್ರೀನಿವಾಸದಾಸ, ನೆಬ್ಬೂರು ನಾರಾಯಣ ಭಾಗವತ, ಮಲ್ಪೆ ಶಂಕರನಾರಾಯಣ ಸಾಮಗ, ರಾಮದಾಸ ಸಾಮಗ, ಸಕ್ಕಟ್ಟು ಲಕ್ಷ್ಮೀನಾರಾಯಣ, ಅರಾಟೆ ಮಂಜುನಾಥ, ಮೊಳಹಳ್ಳಿ ಹೆರಿಯ, ಉಡುಪಿ ಬಸವ, ವಂಡಾರು ಬಸವ, ಬೆಲ್ತೂರು ರಾಮ, ಶೇಷಗಿರಿ ಭಾಗವತರು, ಶ್ರೀನಿವಾಸ ಉಪ್ಪೂರರು, ಬಡಾಕೆರೆ ರಾಮಪ್ಪ ಅಡಿಗ, ವಂಡ್ಸೆ ಮುತ್ತ, ಚಿಕ್ಕು, ಹಾರಾಡಿ ಮಹಾಬಲ, ಕರ್ಕಿ ಕೃಷ್ಣ ಹಾಸ್ಯಗಾರ ಮೊದಲಾದ ಕಲಾವಿದರು ನಮ್ಮ ಅಪ್ಪಯ್ಯನಿಗೆ ಆತ್ಮೀಯರಾಗಿದ್ದರು.

ಡಾ. ಕೋಟ ಶಿವರಾಮ ಕಾರಂತರ ಒಡನಾಟ

ಡಾ. ಕೋಟ ಶಿವರಾಮಕಾರಂತರು 1955-56ರಲ್ಲಿ 'ಯಕ್ಷಗಾನ ಬಯಲಾಟ' ಪುಸ್ತಕ ಬರೆಯಲು ದಕ್ಷಿಣಕನ್ನಡ, ಉತ್ತರಕನ್ನಡ, ಶಿವಮೊಗ್ಗ ಜಿಲ್ಲೆಯ ಹಲವು ಊರುಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುತ್ತಿದ್ದರು. ಶಿರೂರು ಫಣಿಯಪ್ಪಯ್ಯನವರಲ್ಲಿ ಯಕ್ಷಗಾನಕ್ಕೆ ಸಂಬಂಧಿಸಿದ ಹಸ್ತಪ್ರತಿ ಮತ್ತು ತಾಡವಾಲೆ ಸಂಗ್ರಹ ಹಾಗು ಅವುಗಳ ಮಾಹಿತಿ ಸಿಗಬಹುದೆಂದು ಶಿರೂರು ಮೇಲ್ಪಂಕ್ತಿಯ ನಮ್ಮ ಮನೆಗೆ ಭೇಟಿ ನೀಡಿದ್ದರು. ಒಂದು ದಿನ ಉಳಿದುಕೊಂಡು ಫಣಿಯಪ್ಪಯ್ಯನವರೊಡನೆ ಯಕ್ಷಗಾನಕ್ಕೆ ಸಂಬಂಧಿಸಿದ ಹಲವು ವಿಷಯಗಳನ್ನು ಚರ್ಚಿಸಿ ಹಸ್ತಪ್ರತಿ ಹಾಗೂ ತಾಡವಾಲೆ ಗ್ರಂಥಗಳನ್ನು ಪರಿಶೀಲಿಸಿದ್ದರು. ಈ ಬಗ್ಗೆ ಡಾ. ಕಾರಂತರು ತಮ್ಮ 'ಯಕ್ಷಗಾನಬಯಲಾಟ' ಪುಸ್ತಕದಲ್ಲಿ ಹಲವೆಡೆ

ಬರೆದಿದ್ದಾರೆ. ಆ ಗ್ರಂಥದ ಮುನ್ನುಡಿ (4–11–1957) ಯಲ್ಲಿ ಫಣಿಯಪ್ಪಯ್ಯನವರನ್ನು ಅವರು ಹೀಗೆ ನೆನಪಿಸಿಕೊಂಡಿದ್ದಾರೆ:

"ನನ್ನ ಹುಟ್ಟೂರಿನಲ್ಲಿಯೂ ಅನೇಕ ಬಂಧುಮಿತ್ರರು ಹಳೆಯ ಓಲೆಗಳನ್ನೊದಗಿಸಿ ಕೊಟ್ಟರು. ಅದರಂತೆ ಬ್ರಹ್ಮಾವರ, ಹಲ್ಸನಾಡು, ಕೊಲ್ಲೂರು, ಶಿರೂರು, ಹನ್ನಾರು ಮೊದಲಾದ ಅನೇಕ ಊರುಗಳಲ್ಲಿ ಉಪಯುಕ್ತವಾದ ಪುರಾತನ ಪ್ರಸಂಗ ಸಾಹಿತ್ಯಗಳನ್ನೂ ಇನ್ನಿತರ ಬರಹಗಳನ್ನೂ ಕಂಡೆ. ಅಂಥ ಒಂದೆರಡು ಸ್ಥಳಗಳನ್ನು ಕುರಿತು ಎರಡುಮಾತು ಹೇಳಬೇಕಾಗುತ್ತದೆ. ನಮ್ಮ ಜಿಲ್ಲೆಯ ಉತ್ತರ ಸರಹದ್ದಿನ ಗ್ರಾಮವಾದ ಶಿರೂರಿನ ಶ್ಯಾನುಭೋಗ ಮನೆತನದ ಫಣಿಯಪ್ಪಯ್ಯ ಎಂಬವರಲ್ಲಿ ಎಪ್ಪತ್ತು ಎಂಬತ್ತು ಪ್ರಸಂಗಗಳನ್ನು ಕೈಬರಹದಲ್ಲೂ ತಾಡವಾಲೆಗಳಲ್ಲೂ ನೋಡಿದೆ. ಅವರು ಅವನ್ನಿರಿಸಿಕೊಂಡುದು ಮಾತ್ರವಲ್ಲ, ಅವಕ್ಕೆ ಸಂಬಂಧಿಸಿದ ವಿಚಾರವನ್ನು ಪ್ರಶ್ನಿಸಿದೊಡನೆ ಹೇಳಬಲ್ಲ ವ್ಯಕ್ತಿಗಳೂ ಆಗಿದ್ದಾರೆ." (ಯಕ್ಷಗಾನ ಬಯಲಾಟ –ಮುನ್ನುಡಿ ಪುಟ 8)

ಇದೇ ಪುಸ್ತಕದಲ್ಲಿ ಡಾ.ಕಾರಂತರು ಕವಿಕಾವ್ಯ ಪರಿಚಯ ಲೇಖನದಲ್ಲಿ ಹದಿನೇಳನೆಯ ಶತಮಾನದಲ್ಲಿ 'ಕೃಷ್ಣಾರ್ಜುನಕಾಳಗ' ಯಕ್ಷಗಾನ ಪ್ರಸಂಗ ಬರೆದ ಕವಿ ಹಳೆಮಕ್ಕಿ ರಾಮನೆಂಬ ಕವಿಯ ಹುಟ್ಟೂರಿನ ಸ್ಥಳದ ಮಾಹಿತಿ ಫಣಿಯಪ್ಪಯ್ಯನವರಿಂದ ತಮಗೆ ಸಿಕ್ಕಿದ ವಿಷಯವನ್ನು ಹೀಗೆ ವಿವರಿಸುತ್ತಾರೆ:

"ಯಕ್ಷಗಾನದಲ್ಲಿ ಗಯಚರಿತ್ರೆಯನ್ನು ಅನೇಕ ಕವಿಗಳು ಬರೆದಿದ್ದಾರೆ. ದೇವಿದಾಸ ಅದನ್ನು ಕೃಷ್ಣಾರ್ಜುನ ಕಾಳಗ ಎಂಬ ಹೆಸರಲ್ಲಿ ಬರೆದುದುಂಟು. ಅದೇ ಹೆಸರಿನಲ್ಲಿ ಕರೂರು ಸೀಮೆಯ ಹಳೆಮಕ್ಕಿ ರಾಮನೆಂಬಾತ ಬಹಳ ಸುಂದರವಾದೊಂದು ರಚನೆ ಮಾಡಿದ್ದಾನೆ. ಇದು ಕನ್ನಡ ಜಿಲ್ಲೆಯ ಬಡಗಣ ಭಾಗಗಳಲ್ಲಿ ವಿಶೇಷ ಪ್ರಚಾರದಲ್ಲಿದೆ. ಈ ಪ್ರಸಂಗದ ತಾಡವಾಲೆ ಪ್ರತಿಯೊಂದು ಕ್ರಿ.ಶ. 1618ರದ್ದು ದೊರೆಯುತ್ತದೆ. ಅವನ ಕಾಲವನ್ನು ಈ ಕಾರಣದಿಂದ ಹದಿನೇಳನೆಯ ಶತಮಾನ ಎನ್ನಬಹುದು. ಕವಿಯು ತನ್ನ ವಿಚಾರದಲ್ಲಿ ಸಾಕಷ್ಟು ವಿವರ ಕೊಟ್ಟಿದ್ದರೂ ಪ್ರತಿಕಾರರ ಕೈತಪ್ಪಿನಿಂದ ಅದರ ಅರ್ಥಮಾಡಿಕೊಳ್ಳುವುದೇ ಕಷ್ಟವಾಗಿತ್ತು. ಆ ಪದ್ಯ ಹೀಗಿದೆ:

ಅಂಬುನಿಧಿವಾಮಾಗ್ರಭಾಗದ
ಡಿಂಬಪ್ರತಿನಾಮಕ್ಕಿಯೂರಹಿ
ಡಿಂಬಕಾರಿಯ ನಾಮವಿಪ್ರನ ತನುಭವನು ರಾಮ ॥

ಇದರಿಂದ ಕವಿಯ ವಿಚಾರವಾಗಿ ತಿಳಿದೂ ತಿಳಿಯದಂತಾಯಿತು. ನನಗೆ ಶಿರೂರು ಗ್ರಾಮದ ಫಣಿಯಪ್ಪಯ್ಯ ಎಂಬ ಯಕ್ಷಗಾನ ಅಭಿಮಾನಿಗಳು ಆ

ಪದ್ಯದ ಸ್ಪಷ್ಟವಾದ ತಿಳಿವಳಿಕೆ ಮಾಡಿಕೊಟ್ಟರು. ಪದ್ಯದಲ್ಲಿರುವ 'ಅಂಬುನಿಧಿ' ಅಂಬುನದಿ ಆಗಬೇಕೆಂದೂ, ಪ್ರತಿನಾಮಕ್ಕಿಯೂರ ಎಂಬುದು ಪ್ರಾಕಿನಮಕ್ಕಿ (ಹಳೆಮಕ್ಕಿ) ಆಗಬೇಕೆಂದೂ ತಿಳಿಸಿದರು. ಶರಾವತಿ ನದಿಗೆ ಉಪನದಿಯಾಗಿ ಸರಳು ಹೊಳೆಹರಿಯುತ್ತದೆ. ಅದರ ದಂಡೆಯ ಹಳೆಮಕ್ಕಿ ಭೀಮಯ್ಯನ ಮಗ ರಾಮ ಎಂಬವ ಇದನ್ನು ಬರೆದನು. ಆತ ಈ ಕಾವ್ಯದಲ್ಲಿ ಸ್ಥಳದೇವತೆಯಾದ ಭೀಮೇಶನನ್ನು ನುತಿಸಿದ್ದಿದೆ. (ಯಕ್ಷಗಾನ ಬಯಲಾಟ ಪುಟ 250)

ಮುಂದಿನ ಅಧ್ಯಾಯದಲ್ಲಿ ಡಾ. ಕಾರಂತರು ವೆಂಕಣ್ಣ ಕವಿಯ ವಿಷಯವನ್ನು ಪ್ರಸ್ತಾಪಿಸುವಾಗ ಕೂಡ "ಶಿರೂರು ಫಣಿಯಪ್ಪಯ್ಯನವರಲ್ಲಿ ವೆಂಕಣ್ಣ ಕವಿಯ ಮಾನಸಚರಿತ್ರೆ ಯಕ್ಷಗಾನ ಪ್ರಸಂಗದ ಸಂಗ್ರಹವಿದೆ" ಎಂದು ಉಲ್ಲೇಖಿಸುತ್ತಾರೆ. ವೆಂಕಣ್ಣ ಕವಿಯು ಬರೆದಿರುವ 'ಮಾನಸ ಚರಿತ್ರೆ' ಎಂಬ ಒಂದು ಯಕ್ಷಗಾನ ಪ್ರಸಂಗವು ತಾಡವಾಲೆಯ ರೂಪದಲ್ಲಿ ಇಂದು ಉಳಿದುಕೊಂಡಿದೆ. ಅದರ ಪ್ರತಿಗಳನ್ನು ನಾನು ಉಡುಪಿಕೃಷ್ಣ ಛಾಪಖಾನೆಯಲ್ಲಿಯೂ, ಶಿರೂರಿನ ಫಣಿಯಪ್ಪಯ್ಯ ಎಂಬವರಲ್ಲಿಯೂ ನೋಡಿದ್ದುಂಟು. (ಯಕ್ಷಗಾನ ಬಯಲಾಟ ಪುಟ 265)

ಡಾ. ಕಾರಂತರು 'ಯಕ್ಷಗಾನ ಬಯಲಾಟ' ಗ್ರಂಥದಲ್ಲಿ ಪ್ರಸ್ತಾಪಿಸಿದ ಈ ವಿಷಯವೇ ಕಳೆದವರ್ಷ 19-11-2021ರಂದು ಮುಲ್ಕಿಯಲ್ಲಿ ಡಾ. ಕಬ್ಬಿನಾಲೆ ವಸಂತ ಭಾರದ್ವಾಜರ ಸಂಪಾದಕತ್ವದಲ್ಲಿ ನಮ್ಮ 'ಫಣಿಗಿರಿಪ್ರತಿಷ್ಠಾನ' ಸ್ಥಾಪನೆಯೊಂದಿಗೆ 'ಮಾನಸಚರಿತ್ರೆ' ಲೋಕಾರ್ಪಣೆಗೊಳ್ಳಲು ನಾಂದಿ ಯಾಯಿತು ಎಂದರೆ ಬಹಳ ಆಶ್ಚರ್ಯವಾಗುತ್ತದೆ. ಆ ಬಗ್ಗೆ ಒಂದೆರಡು ಮಾತು ಹೇಳುವುದು ಸೂಕ್ತವೆನಿಸುತ್ತದೆ. ಜುಲೈ 2021ರಲ್ಲಿ ನಾನು ನಮ್ಮ ತಂದೆ ಫಣಿಯಪ್ಪಯ್ಯನವರ ಸಂಗ್ರಹದ ಪಟ್ಟಿಯನ್ನು ಬೆಂಗಳೂರಿನ 'ಯಕ್ಷವಾಹಿನಿ ಸಂಸ್ಥೆ'ಯ ವಾಟ್ಸಪ್‌ನಲ್ಲಿ ಪ್ರಕಟಿಸಿದಾಗ ಡಾ. ಶಿವರಾಮ ಕಾರಂತರ ಈ ಲೇಖನದಿಂದ 'ಮಾನಸಚರಿತ್ರೆ' ಬಗ್ಗೆ ಮಾಹಿತಿ ಹೊಂದಿದ್ದ ಕನ್ಯಾನ ರಾಜಗೋಪಾಲ ಮತ್ತು ಡಾ. ಕಬ್ಬಿನಾಲೆ ವಸಂತ ಭಾರದ್ವಾಜರು ನನ್ನನ್ನು ಸಂಪರ್ಕಿಸಿ ವೆಂಕಣ್ಣ ಕವಿಯ ಮಾನಸಚರಿತ್ರೆಯ ಹಸ್ತಪ್ರತಿ ಮತ್ತು ತದನಂತರ ತಾಡವಾಲೆಗಳನ್ನು ಹುಡುಕುವಂತೆ ಮಾಡಿದರು. ಅದರ ಫಲವಾಗಿ ಮಾನಸಚರಿತ್ರೆ ಪ್ರಕಟವಾಯಿತು. ಯಕ್ಷಗಾನ ರಸಿಕರ ಅನೇಕ ವರ್ಷಗಳ ಕುತೂಹಲ ತಣಿಯಿತು!

ಡಾ. ಶಿವರಾಮ ಕಾರಂತರು ಯಕ್ಷಗಾನ ಬಯಲಾಟದ ಪರಿಶಿಷ್ಟದಲ್ಲಿಯೂ ಶಿರೂರು ಫಣಿಯಪ್ಪಯ್ಯನವರ ಮನೆಯಲ್ಲಿ ದೊರೆತ ಯಕ್ಷಗಾನ ಪ್ರಸಂಗಗಳನ್ನೂ ಉಲ್ಲೇಖಿಸಿದ್ದಾರೆ. (ಯಕ್ಷಗಾನ ಬಯಲಾಟ ಪುಟ 293, 297, 298)

14. ಕಾರ್ತವೀರ್ಯ
(ತಿರುಮಲಕವಿ) ಶಿರೂರು ಫಣಿಯಪ್ಪನವರಲ್ಲಿ
ಪಾರ್ಥಿವ ಜ್ಯೇಷ್ಠ ಪೌರ್ಣಿಮೆ ಮಂದವಾಸರ
7 ಮೇ 12 .08 +14 .76 =26 .84 ಬುಧ 26 ಮೇ 1705

50. ಮದನಸುಂದರಿಪರಿಣಯ
ಶಿರೂರು ಫಣಿಯಪ್ಪಯ್ಯನವರ ತಾಡವಾಲೆ
ಸಾಧಾರಣ ಚೈತ್ರ ಬಹುಳ 13 ಶನಿವಾರ
7 ಮಾರ್ಚ್ 7.97 +25 .56 =35 .53 4 ಏಪ್ರಿಲ್ 1730

51. ಮೂಲಕಾಸುರಕಾಳಗ
ಶಿರೂರು ಫಣಿಯಪ್ಪಯ್ಯನವರ ಪ್ರತಿ
ಖರ ಭಾದ್ರಪದ ಬಿದಿಗೆ ಶುಕ್ರವಾರ
(ಗತ) 4 ಆಗ 20 .83 +1.96 =22 .79 22 ಆಗಸ್ಟ್ 1713

55. ರಾವಣೋದ್ಭವ
(ನಗಿರೆ ಸುಬ್ಬ) ಶಿರೂರು ಫಣಿಯಪ್ಪಯ್ಯನವರಲ್ಲಿ
ಶಾಶ 1785, 1853

ಅನಂತರ ಕೂಡ ಡಾ . ಶಿವರಾಮ ಕಾರಂತರನ್ನು ನಮ್ಮ ಅಪ್ಪಯ್ಯ ಭೇಟಿಯಾಗುತ್ತಿದ್ದರು. ಅವರು ಕರ್ನಾಟಕ ಸರಕಾರದಿಂದ ಕಲಾವಿದರ ಮಾಸಾಶನ ಮಂಜೂರಾತಿಗಾಗಿ 1982ರಲ್ಲಿ ಶಿಫಾರಸು ಪತ್ರವನ್ನು ನೀಡಿ ಸಹಕರಿಸಿದ್ದನ್ನು ನಮ್ಮ ಅಪ್ಪಯ್ಯ ಆಗಾಗ ನೆನಪಿಸಿಕೊಳ್ಳುತ್ತಿದ್ದರು.

ಮದುವೆ ಸಂಸಾರ ಇತ್ಯಾದಿ ಕುರಿತು

ನಮ್ಮ ತಂದೆಯವರು 1942ರಲ್ಲಿ ತಮ್ಮ 24ನೆಯ ವಯಸ್ಸಿನಲ್ಲಿ ಬಾರಕೂರು ಪರಮೇಶ್ವರರಾಯರ ಹಿರಿಯಪುತ್ರಿ ಗಿರಿಜಾರವರನ್ನು ಮದುವೆಯಾದರು. ಹಿರಿಯಪುತ್ರ ದೇವಪ್ಪಯ್ಯ (ತಮ್ಮ ತಂದೆಯ ಹೆಸರನ್ನು ಮಗನಿಗೆ ಇಟ್ಟಿದ್ದರು) 1944ರಲ್ಲಿ ಜನಿಸಿದರೆ, 1946ರಲ್ಲಿ ಎರಡನೆಯ ಪುತ್ರ ಪರಮೇಶ್ವರ (ಇವನಿಗೆ ತಮ್ಮ ಹೆಂಡತಿಯ ತಂದೆಯ ಹೆಸರು), 1948ರಲ್ಲಿ

ಗೌರಿ (ತಮ್ಮ ತಾಯಿಯ ಹೆಸರು), 1950ರಲ್ಲಿ ಪ್ರಭಾಕರ, 1951ರಲ್ಲಿ ಶಕುಂತಲಾ ಹೀಗೆ ಮಕ್ಕಳನ್ನು ಪಡೆದರು. ಗೌರಿ ಎನ್ನುವ ಮಗು ಮೂರನೆಯ ವಯಸ್ಸಿನಲ್ಲಿ ಅನಾರೋಗ್ಯದಿಂದ ತೀರಿಕೊಂಡಿತು. ಅನಂತರ ಎರಡು ಮೂರು ವರ್ಷಕ್ಕೊಮ್ಮೆಯಂತೆ ನಾಲ್ಕೈದು ಮಕ್ಕಳು ಹುಟ್ಟಿದರೂ ಬದುಕಿ ಉಳಿಯಲಿಲ್ಲ! 1967ರಲ್ಲಿ ಉಮೇಶ ಮತ್ತು 1969ರಲ್ಲಿ ರಮೇಶ ಎಂಬ ಇಬ್ಬರು ಗಂಡುಮಕ್ಕಳು ಹುಟ್ಟಿದರು. ಹೀಗೆ ಸುಮಾರು ಹತ್ತು ಹನ್ನೊಂದು ಮಕ್ಕಳು ಹುಟ್ಟಿದ್ದರೂ ಬದುಕಿ ಉಳಿದ ಮಕ್ಕಳು ನಾವು ಆರು ಜನ ಮಾತ್ರ. (ಐದು ಗಂಡು ಒಂದು ಹೆಣ್ಣು). 1964ರಲ್ಲಿ ಫಣಿಯಪ್ಪಯ್ಯನವರ ತಾಯಿ ಗೌರಮ್ಮ ನಿಧನರಾದರು. ಇದು ನಮ್ಮ ಅಪ್ಪಯ್ಯನ ಸಂಸಾರದ ಕಥೆ.

1975ರಲ್ಲಿ ಭೂಸುಧಾರಣಾಕಾಯಿದೆ ಬಂದುದರಿಂದ ತಂದೆಯ ಕಾಲದ ಆಸ್ತಿಗಳು ಕೈತಪ್ಪಿದವು. ಗೇಣಿಬರುವುದು ನಿಂತಿತು. ಇದರಿಂದಾಗಿ ಫಣಿಯಪ್ಪಯ್ಯ ನವರ ವ್ಯವಹಾರ ಸಂಕಷ್ಟದಲ್ಲಿ ಸಿಲುಕಿತು. ಆದಾಯ ಕಡಿಮೆ ಆಯಿತು. ಹಲವು ವಿದ್ಯೆಗಳನ್ನು ಕಲಿತಿದ್ದರೂ ಯಾವುದನ್ನು ಹಣಗಳಿಸುವ ಉದ್ಯೋಗವಾಗಿ ಮಾಡದ ಕಾರಣ ಬಡತನದಲ್ಲಿ ಜೀವನ ನಡೆಸಬೇಕಾಯಿತು. ಈ ಸಂದರ್ಭದಲ್ಲಿ ಹಿರಿಯ ಮೂವರು ಗಂಡುಮಕ್ಕಳು ದೊಡ್ಡವರಾಗಿ ಉದ್ಯೋಗಸ್ಥರಾಗಿದ್ದರು. ಮಗಳ ಮದುವೆ ಆಗಿರಲಿಲ್ಲ. ಇಬ್ಬರು ಸಣ್ಣಮಕ್ಕಳು ಶಾಲೆಗೆ ಹೋಗುತ್ತಿದ್ದರು. ಆಸ್ತಿ ಎಲ್ಲ ಹೋದರೂ ದೊಡ್ಡ ಗಂಡುಮಕ್ಕಳು ತಮ್ಮ ಸಂಸಾರದ ಹೊರೆಯ ಜೊತೆಗೆ ತಂದೆತಾಯಿ ತಂಗಿ ತಮ್ಮಂದಿರ ಸಂಸಾರದ ಜವಾಬ್ದಾರಿಯನ್ನು ಹೊತ್ತು ಸಹಾಯ ಮಾಡಿ ಫಣಿಯಪ್ಪಯ್ಯನವರು ನೆಮ್ಮದಿಯ ಜೀವನ ನಡೆಸಲು ಸಹಕರಿಸಿದರು.

1978ರಲ್ಲಿ ಫಣಿಯಪ್ಪಯ್ಯನವರು ಷಷ್ಟ್ಯಬ್ದಿಕಾರ್ಯವನ್ನು ತುಂಬಿದ ಕುಟುಂಬದೊಂದಿಗೆ ಆಚರಿಸಿಕೊಂಡರು. 1975-76ರಲ್ಲಿ ಊರಿನ ಎಲಗೇಶ್ವರ ದೇವಸ್ಥಾನದ ಮೊಕ್ತೇಸರರಾಗಿ ಆಯ್ಕೆಯಾದ ಇವರು ದೇವಾಲಯದ ಜೀರ್ಣೋದ್ಧಾರದ ಕೆಲಸ ಮಾಡಿ ಜನಾನುರಾಗಿಯಾದರು. ಇವರ ಎಲ್ಲ ಯಕ್ಷಗಾನ ಪ್ರಸಂಗಗಳಲ್ಲಿ 'ದೇವ ಎಲಗೇಶ'ನನ್ನು ಸ್ತುತಿಸಿರುವುದು ಕಂಡುಬರುತ್ತದೆ. 1982ರಲ್ಲಿ ಮಗಳ ಮದುವೆ ಮಾಡಿದರು. 1988ರಲ್ಲಿ ಮಕ್ಕಳು ಇವರ 70ನೆಯ ಜನ್ಮದಿನವನ್ನು ಧಾರ್ಮಿಕ ವಿಧಿವಿಧಾನಗಳೊಂದಿಗೆ ಆಚರಿಸಿದರು. ಫಣಿಯಪ್ಪಯ್ಯನವರಿಗೆ ತಮ್ಮ ಯಕ್ಷಗಾನ ಕ್ಷೇತ್ರದ ಸಾಧನೆಗೆ ಮನ್ನಣೆ ದೊರೆಯುತ್ತಿಲ್ಲವೆಂಬ ಕೊರಗಿತ್ತು. ಹತ್ತಾರು ಪ್ರಸಂಗಗಳನ್ನು ಬರೆದಿದ್ದರೂ ಅವುಗಳನ್ನು ಪ್ರಕಟಿಸಲು ಸಾಧ್ಯವಾಗಿರಲಿಲ್ಲ. 'ಶ್ರೀಕೃಷ್ಣಗಾರುಡಿ' ಮಾತ್ರ ಮುದ್ರಣಗೊಂಡ ಏಕೈಕ ಪ್ರಸಂಗವಾಗಿತ್ತು. ತಾವು ಬರೆದ ಹಾಗೂ ಸಂಗ್ರಹಿಸಿದ

ಅಮೂಲ್ಯ ಪ್ರಸಂಗಗಳ ಪ್ರಕಟಣೆಗಾಗಿ ಸರಕಾರದ ಅಂದಿನ ಜಾನಪದ ಅಕಾಡೆಮಿಯ ಮುಖ್ಯಸ್ಥರಿಗೆ ಪತ್ರಗಳ ಮೂಲಕ ವಿನಂತಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ. 1983ರಲ್ಲಿ ಶ್ರೀರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ ಅವರಿಗೆ ಹಾಗೂ ಕನ್ನಡಸಂಸ್ಕೃತಿ ಸಚಿವರಾಗಿದ್ದ ಜೀವರಾಜ ಆಳ್ವರಿಗೆ ವಿನಂತಿಸಿದ ಪತ್ರ ವ್ಯವಹಾರಗಳ ದಾಖಲೆ ಇಂದಿಗೂ ಅವರ ಸಂಗ್ರಹದಲ್ಲಿದೆ. ಇವರ ಪ್ರಸಂಗಪುಸ್ತಕಗಳ ಪ್ರಕಟಣೆ ಸಾಧ್ಯವಾಗದಿದ್ದರೂ ಸರಕಾರ ಅಶಕ್ತ ಕಲಾವಿದರಿಗೆ ಕೊಡುವ ತಿಂಗಳಿಗೆ ನೂರು ರೂಪಾಯಿಗಳ ಮಾಸಾಶನ ಫಣಿಯಪ್ಪಯ್ಯನವರಿಗೆ ದೊರೆಯಿತು. ಸರಕಾರ ಇಷ್ಟಾದರೂ ತನಗೆ ಸಹಾಯ ಮಾಡಿತಲ್ಲ ಎಂದು ಸಂತೋಷಪಟ್ಟರು. ಈ ಮಾಸಾಶನ ಕೊಡಿಸಲು ಯಕ್ಷಗಾನ ಕ್ಷೇತ್ರದ ಹಲವು ಗಣ್ಯರು ಶಿಫಾರಸು ಪತ್ರನೀಡಿ ಸಹಕರಿಸಿದ್ದನ್ನು ನಮ್ಮ ಅಪ್ಪಯ್ಯ ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತಿದ್ದರು. ಡಾ. ಶಿವರಾಮ ಕಾರಂತ ಮತ್ತು ಕೆರೆಮನೆ ಶಿವರಾಮ ಹೆಗಡೆಯವರು, ಅಂಕೋಲ ಕ್ಷೇತ್ರದ ಅಂದಿನ ಶಾಸಕಿ ಅನಸೂಯಾ ಗಜಾನನ ಶರ್ಮ (ಫಣಿಯಪ್ಪಯ್ಯನವರ ಸಂಬಂಧಿ) ಇವರ ಮಾಸಾಶನ ಗೌರವಕ್ಕೆ ಶಿಫಾರಸುಮಾಡಿದವರಲ್ಲಿ ಪ್ರಮುಖರು. ಆಗ 1982 ರಿಂದ ಫಣಿಯಪ್ಪಯ್ಯನವರಿಗೆ ನೂರು ರೂಪಾಯಿಗಳ ಮಾಸಾಶನ ಗೌರವ ಸರಕಾರದಿಂದ ದೊರೆಯಿತು. ಫಣಿಯಪ್ಪಯ್ಯನವರು ನಿವೃತ್ತ ಜೀವನ ನಡೆಸುತ್ತಿದ್ದರೂ ಯಕ್ಷಗಾನ ಕಲೆಯ ಬಗೆಗಿನ ಆಸಕ್ತಿ ಕಡಿಮೆಯಾಗಿರಲಿಲ್ಲ. ಪ್ರತಿವರ್ಷ ಊರಿಗೆ ಯಕ್ಷಗಾನ ಮೇಳಗಳು ಬಂದಾಗ ಅಲ್ಲಿ ಕಲಾವಿದರನ್ನು ಭೇಟಿಯಾಗಿ ಅವರೊಡನೆ ಯಕ್ಷಗಾನದ ಕುರಿತಾಗಿ ಚರ್ಚಿಸಿ ಪ್ರದರ್ಶನಗಳನ್ನು ನೋಡಿ ಭಾಗವತರಿಗೆ ಕಲಾವಿದರಿಗೆ ಸಲಹೆ ಸೂಚನೆಗಳನ್ನು ಕೊಟ್ಟು ಬರುತ್ತಿದ್ದರು. ಊರಿನಲ್ಲಿ ಆಸಕ್ತ ಮಕ್ಕಳಿಗೆ ಯಕ್ಷಗಾನ ಕಲಿಸುತ್ತಿದ್ದರು. ಇವರ ಕುಟುಂಬದ ನೆರೆಮನೆಯ ಹುಡುಗ ಶಂಕರನಾರಾಯಣ ಯಕ್ಷಗಾನದಲ್ಲಿ ಆಸಕ್ತಿ ಹೊಂದಿ ಭಾಗವತಿಕೆ ಕಲಿಯಲು ಆಸಕ್ತನಾದಾಗ ಅವನಿಗೆ ಸಲಹೆಸೂಚನೆ ನೀಡಿ ಬೇಕಾದ ಸಹಕಾರ ನೀಡಿದರು. ಮುಂದೆ ಇವನು ಉಪ್ಪಿನಕುದ್ರು ಕೊಗ್ಗಣ್ಣ ಕಾಮತರ ಗೊಂಬೆಯಾಟ ಮೇಳದಲ್ಲಿ ಹಲವು ಬಾರಿ ವಿದೇಶ ಪ್ರವಾಸಕ್ಕೆಗೊಂಡು ಪ್ರಸಿದ್ಧ ಭಾಗವತರಾಗಿ ಹೆಸರು ಗಳಿಸಲು ಸಾಧ್ಯವಾಯಿತು. ಫಣಿಯಪ್ಪಯ್ಯನವರ ಅಭಿಮಾನಿಯಾಗಿದ್ದ ಶಂಕರನಾರಾಯಣ ಶಾನುಭೋಗರು ತಂದೆಯವರ ಸಹಾಯವನ್ನು ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತಿದ್ದರು. ದುರದೃಷ್ಟವಶಾತ್ ಶಂಕರನಾರಾಯಣ ಶ್ಯಾನುಭೋಗರು ಅನಾರೋಗ್ಯದಿಂದ ತಮ್ಮ ಐವತ್ತೊಂದನೆಯ ವಯಸ್ಸಿನಲ್ಲಿ ದೈವಾಧೀನರಾದರು. ಉಪ್ಪಿನ ಕುದ್ರುವಿನ ಯಕ್ಷಗಾನ

ಬೊಂಬೆಯಾಟ ಮೇಳವನ್ನು ನಡೆಸುತ್ತಿದ್ದ ಕೊಗ್ಗಣ್ಣ ಕಾಮತರ ಮಗ ಭಾಸ್ಕರಕಾಮತರು ಶಿರೂರು ಫಣಿಯಪ್ಪಯ್ಯನವರ ಅಭಿಮಾನಿಯಾಗಿದ್ದು ಆಗಾಗ ಫಣಿಯಪ್ಪಯ್ಯನವರೊಂದಿಗೆ ಯಕ್ಷಗಾನದ ಅನುಭಗಳನ್ನು ಕೇಳಿ ತಿಳಿದುಕೊಳ್ಳುತ್ತಿದ್ದರು. ಕಾಮತರು ಅಂದಿನ ಜಾನಪದ ಅಕಾಡೆಮಿಯ ಸದಸ್ಯರಾಗಿ ಆಯ್ಕೆಯಾದರು. ಫಣಿಯಪ್ಪಯ್ಯನವರ ಯಕ್ಷಗಾನ ಕ್ಷೇತ್ರದ ಸಾಧನೆಯನ್ನು ತಿಳಿದುಕೊಂಡಿದ್ದ ಭಾಸ್ಕರಕಾಮತರು ಇವರಿಗೆ ಕರ್ನಾಟಕ ಸರಕಾರದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ರಾಜ್ಯಮಟ್ಟದ ಗೌರವ ಪ್ರಶಸ್ತಿಕೊಡಿಸುವ ದೃಢಸಂಕಲ್ಪ ಮಾಡಿದರು. 2000ದಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಕಲಾವಿದರಿಗೆ ಕೊಡುವ ಪ್ರಶಸ್ತಿಗಾಗಿ ಫಣಿಯಪ್ಪಯ್ಯನವರ ಹೆಸರನ್ನು ಶಿಫಾರಸು ಮಾಡಿಸಿದರು. ಇದೇ ಸಂದರ್ಭದಲ್ಲಿ ಹಲವು ಯಕ್ಷಗಾನ ಕ್ಷೇತ್ರದಗಣ್ಯರು ಪ್ರಶಸ್ತಿಗೆ ಫಣಿಯಪ್ಪಯ್ಯನವರ ಹೆಸರನ್ನು ಶಿಫಾರಸು ಮಾಡಿದರು. ದಾಖಲೆಗಳ ಪ್ರಕಾರ ಭಾಸ್ಕರಕೊಗ್ಗಕಾಮತ್, ಕೆರೆಮನೆ ಶಂಭುಹೆಗಡೆ, ಕೆರೆಮನೆ ಮಹಾಬಲ ಹೆಗಡೆ, ಅಮೃತ ಸೋಮೇಶ್ವರ, ಉದ್ಯಾವರ ಮಾಧವ ಆಚಾರ್ಯ, ಕೆ.ಪಿ.ಹಾಸ್ಯಗಾರ ಕರ್ಕಿ, ಅಂದಿನ ಬೈಂದೂರು ಕ್ಷೇತ್ರದ ಶಾಸಕ ಗೋಪಾಲ ಪೂಜಾರಿ, ಮಾಜಿಶಾಸಕಿ ಅನಸೂಯ ಗಜಾನನ ಶರ್ಮ ಇವರೆಲ್ಲರ ಶಿಫಾರಸ್ಸಿನ ಬಲದಿಂದ ತಮ್ಮ 82ನೆಯ ಇಳಿವಯಸ್ಸಿನಲ್ಲಿ(2001) ರಾಜ್ಯ ಸರಕಾರದ ಪ್ರಶಸ್ತಿಯ ಗೌರವಕ್ಕೆ ಫಣಿಯಪ್ಪಯ್ಯನವರು ಪಾತ್ರರಾದರು. ಪ್ರಶಸ್ತಿಯು ರೂಪಾಯಿ ಐದುಸಾವಿರ ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿತ್ತು. ಅವರಿಗೆ ಇದರಿಂದ ಬಹಳ ಸಂತೋಷವಾಗಿತ್ತು.

ತನ್ನ ಎಲ್ಲ ಪ್ರಸಂಗಗಳನ್ನು ಹಾಗೂ ತನ್ನ ಸಂಗ್ರಹದಲ್ಲಿರುವ 'ಮಾನಸ ಚರಿತ್ರೆ' ಯಂತಹ ಯಕ್ಷಗಾನ ಕೃತಿಗಳನ್ನು ಪ್ರಕಟಿಸುವ ಮಹದಾಸೆ ಅವರದಾಗಿತ್ತು. ಈ ಹಿಂದೆ ಹೇಳಿದಂತೆ ಆರ್ಥಿಕ ಪರಿಸ್ಥಿತಿ ಅನುಕೂಲಕರ ವಾಗಿಲ್ಲದ ಕಾರಣ ಸ್ವತಃ ಪ್ರಕಟಿಸುವ ಸ್ಥಿತಿಯಲ್ಲಿರಲಿಲ್ಲ. ಅದಕ್ಕಾಗಿ ಸರಕಾರದ ಅಕಾಡೆಮಿಯ ಸಹಾಯ ಕೋರಿ ಹಲವು ಸಾರಿ ಪತ್ರವ್ಯವಹಾರ ಮಾಡಿದರೂ ಪ್ರಯೋಜನವಾಗಿರಲಿಲ್ಲ. ನಾನು ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ಅವರು ಹೇಳುತ್ತಿದ್ದ ಒಂದುಮಾತು ಈಗ ನನಗೆ ನೆನಪಾಗುತ್ತದೆ. "ನನ್ನ ಜಾತಕದಲ್ಲಿ ಮಾಂದಿದೋಷವಿರುವುದರಿಂದ ನನ್ನ ಕೆಲಸಕ್ಕೆ ಮನ್ನಣೆ ಸಿಗುತ್ತಿಲ್ಲ. ಅದು ಮುನ್ನೆಲೆಗೆ ಬರುತ್ತಿಲ್ಲ. ನನ್ನ ಜೀವನದ ಅನಂತರ ನನ್ನ ಕೆಲಸಕ್ಕೆ ಗೌರವ ಸಿಗುತ್ತದೆ. ಜಾತಕದ ಪ್ರಕಾರ ನೂರುವರ್ಷ ಕಳೆದಮೇಲೆ ಇದು ಸಾಧ್ಯವಾಗುತ್ತದೆ" ಎಂದಿದ್ದರು! ಅವರು ಜ್ಯೋತಿಷ್ಯ, ಜಾತಕ ಪರಿಶೀಲನೆಯ ಜ್ಞಾನವನ್ನೂ ಹೊಂದಿದ್ದರು. ಅಲ್ಲಿಯವರೆಗೆ ನನ್ನ ಪುಸ್ತಕಗಳನ್ನು

ಕೆಡದಂತೆ ಜೋಪಾನವಾಗಿರಿಸಿ, ನನ್ನ ಮಕ್ಕಳು–ಮೊಮ್ಮಕ್ಕಳಲ್ಲಿ ಯಾರಾದರೂ ಈ ಕೆಲಸ ಮಾಡಬಹುದು ಎಂದಿದ್ದರು. ಅವರ ಮಾತು ಇಂದು ಸತ್ಯವಾಗಿದೆ. ಈಗ ಅವರು ಹೇಳಿದಂತೆ ನೂರನೆಯ ವರ್ಷಾಚರಣೆಯ ಅನಂತರ ಪ್ರತಿಷ್ಠಿತ 'ಪಾರ್ತಿಸುಬ್ಬ' ಪ್ರಶಸ್ತಿ ಪುರಸ್ಕೃತರಾದ ಡಾ. ಕಬ್ಬಿನಾಲೆ ವಸಂತ ಭಾರದ್ವಾಜರಂತಹ ಘನ ವಿದ್ವಾಂಸರ ಸಂಪಾದನ ಸಹಕಾರದಿಂದ ಈ ಪುಸ್ತಕ ಪ್ರಕಟಣೆಯ ಕಾರ್ಯಗಳು ನಡೆಯುತ್ತಿರುವುದು ನಮ್ಮ ಕುಟುಂಬಕ್ಕೆ ಸಂತೋಷವನ್ನು ಉಂಟುಮಾಡುತ್ತಿದೆ.

2003 ರ ಬಳಿಕ ನಮ್ಮ ಅಪ್ಪಯ್ಯನ ಅರೋಗ್ಯ ಕ್ಷೀಣಿಸತೊಡಗಿತು. ಮೂರ್ನಾಲ್ಕು ಬಾರಿ ಆಸ್ಪತ್ರೆಗೆ ದಾಖಲಾದರು. ಕೊನೆಗೆ 12–03–2004 ರಂದು ಅವರು ತಮ್ಮ 86ನೆ ವಯಸ್ಸಿನಲ್ಲಿ ನಮ್ಮನ್ನು ಅಗಲಿದರು.

ಫಣಿಯಪ್ಪಯ್ಯನವರ ಸಂಸ್ಮರಣಾ ಕಾರ್ಯಕ್ರಮವನ್ನು ಮಧ್ಯಮಾವತಿ ಗ್ರಾಮೀಣ ಸಾಂಸ್ಕೃತಿಕ ಕೇಂದ್ರ, ಮೇಲ್ಪಂಕ್ತಿ, ಶಿರೂರು ಇವರು ದಿನಾಂಕ 07–05–2004ರಂದು ನಡೆಸಿದರು. ಫಣಿಯಪ್ಪಯ್ಯನವರ ಶಿಷ್ಯ ಖ್ಯಾತ ಭಾಗವತ ಶಂಕರನಾರಾಯಣ ಶಾನುಭೋಗರು ಈ ಕಾರ್ಯಕ್ರಮದ ರೂವಾರಿಯಾಗಿದ್ದು ಪ್ರೊ. ಎಂ.ಎಲ್. ಸಾಮಗ, ಉಪ್ಪುಂದ ಚಂದ್ರಶೇಖರ ಹೊಳ್ಳ, ಭಾಸ್ಕರ ಕಾಮತ್, ಕನರಾಡಿ ವಾದಿರಾಜ ಭಟ್ಟ ಮೊದಲಾದ ಗಣ್ಯರು ಈ ಸಮಾರಂಭದಲ್ಲಿ ಭಾಗವಹಿಸಿ ಶ್ರದ್ಧಾಂಜಲಿ ಅರ್ಪಿಸಿದರು ಮತ್ತು ಪ್ರೊ. ಎಂ. ಎಲ್. ಸಾಮಗರ ನೇತೃತ್ವದಲ್ಲಿ 'ಶ್ರೀಕೃಷ್ಣಗಾರುಡಿ' ತಾಳಮದ್ದಳೆ ಕೂಟ ಫಣಿಯಪ್ಪಯ್ಯನವರ ನೆನಪಿಗಾಗಿ ನಡೆಯಿತು.

ಶ್ರೀ ಶಿರೂರು ಫಣಿಯಪ್ಪಯ್ಯನವರಿಗೆ ದೊರೆತ ಸಾರ್ವಜನಿಕಮಾನ ಸನ್ಮಾನಗಳು:

1. ಕುಂದಾಪುರ ತಾಲೂಕು ಕನ್ನಡ ಸಾಹಿತ್ಯಪರಿಷತ್ತು ಇದರಿಂದ ಕುಂದಾಪುರ ತಾಲೂಕು ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ. ಹಟ್ಟಿಯಂಗಡಿಯಲ್ಲಿ 1–3–1997

2. ದಕ್ಷಿಣಕನ್ನಡ ಜಿಲ್ಲಾ ಕರಾವಳಿ ಉತ್ಸವ–2000 ಈ ಕಾರ್ಯಕ್ರಮದಲ್ಲಿ ಪ್ರಶಸ್ತಿ ಮತ್ತು ಸನ್ಮಾನ, ಮಂಗಳೂರಿನಲ್ಲಿ 21–3–2000

3. ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಮತ್ತು ಸನ್ಮಾನ, ತುಮಕೂರಿನಲ್ಲಿ 6–6–2001

4. ಶಿರೂರು ನಾಗರಿಕರಿಂದ ಹುಟ್ಟೂರ ಸನ್ಮಾನ. ಸ್ವಾತಂತ್ರ್ಯೋತ್ಸವ ದಿನಾಚರಣೆಯೊಂದಿಗೆ 15–08–2001

5. ಅವಿಭಜಿತ ದಕ್ಷಿಣಕನ್ನಡ ಜಿಲ್ಲಾ ಬ್ರಾಹ್ಮಣ ಮಹಾಸಭಾ ಇದರಿಂದ ಸನ್ಮಾನ, ಉಡುಪಿಯಲ್ಲಿ 20-05-2000

6. ಅಖಿಲ ಹವ್ಯಕ ಮಹಾಸಭಾ (ರಿ) ಬೆಂಗಳೂರು ಇವರಿಂದ ಸನ್ಮಾನ, ಸುಳ್ಯದಲ್ಲಿ 27-01-2002

7. ಯಕ್ಷಸಂಪದ ಶಿರೂರು ಮತ್ತು ಕುಂದಾಪುರ ತಾಲೂಕು ಕನ್ನಡಸಾಹಿತ್ಯ ಪರಿಷತ್ತು ಮತ್ತು ಹಂಗಾರಕಟ್ಟೆ ಯಕ್ಷಗಾನಕೇಂದ್ರ ಇವರ ಜಂಟಿಕಾರ್ಯಕ್ರಮದಲ್ಲಿ ಸಾರ್ವಜನಿಕ ಸನ್ಮಾನ, ಶಿರೂರಿನಲ್ಲಿ 02-03-2002

8. ಕುಂದಾಪುರ ತಾಲೂಕು ಹವ್ಯಕ ಸಭಾದ ತೃತೀಯ ವಾರ್ಷಿಕೋತ್ಸವದ ಸನ್ಮಾನ, ಹಟ್ಟಿಯಂಗಡಿಯಲ್ಲಿ 28-02-2002

9. ಹವ್ಯಕ ಸಭಾ ಉಡುಪಿ ಇವರಿಂದ ಸನ್ಮಾನ, ಉಡುಪಿಯಲ್ಲಿ 28-07-2002

10. ರೋಟರಿ ಕ್ಲಬ್ ಬೈಂದೂರು ಇವರಿಂದ ಸನ್ಮಾನ, ಶಿರೂರಿನಲ್ಲಿ 15-08-2002

11. ಕುಂದಾಪುರದ ಭಂಡಾರ್‌ಕಾರ್ಸ್ ಕಾಲೇಜಿನವರಿಂದ ಸನ್ಮಾನ, ಕುಂದಾಪುರದಲ್ಲಿ 02-10-2002

12. ಮಂಗಳೂರು ಹವ್ಯಕ ಸಭಾ ಇವರಿಂದ ಸನ್ಮಾನ, ಕದ್ರಿ ಮಂಗಳೂರಿನಲ್ಲಿ 27-10-2002

ತಮ್ಮ 80ನೆಯ ವಯಸ್ಸಿನ ಅನಂತರ ಸಂಘಸಂಸ್ಥೆಗಳು ಗೌರವಿಸಿದ್ದು ಅವರಿಗೆ ಸಂತೋಷವನ್ನು ಉಂಟುಮಾಡಿದ್ದರೂ ತಮ್ಮ ಪ್ರಸಂಗ ಪುಸ್ತಕಗಳು ಪ್ರಕಟಣೆಗೊಳ್ಳದಿರುವ ನೋವು ಇತ್ತು. ಅದನ್ನು ಹಲವರೊಡನೆ ಹೇಳಿಕೊಂಡಿದ್ದರು. ನಮ್ಮ ಅಪ್ಪಯ್ಯ ತೀರಿಕೊಂಡಾಗ ಹಲವು ಗಣ್ಯರು ಸಂತಾಪಪತ್ರ ಕಳುಹಿಸಿದ್ದರು. ಅದರಲ್ಲೊಂದು ಉಪ್ಪಿನ ಕುದ್ರಿನ ಭಾಸ್ಕರ ಕಾಮತರದ್ದು. ಅವರು 15-03-2004ರಲ್ಲಿ ಬರೆದ ಆ ಪತ್ರ ಈಗಲೂ ನನ್ನಲ್ಲಿದೆ. ಅದರಲ್ಲಿ ಅವರು ಹೀಗೆ ಬರೆದಿದ್ದಾರೆ:

"ಫಣಿಯಪ್ಪಯ್ಯನವರ ನಿಧನವಾರ್ತೆ ನನಗೆ ತುಂಬಾ ದುಃಖವನ್ನುಂಟು ಮಾಡಿದೆ. ಮೊನ್ನೆಮೊನ್ನೆವರೆಗೆ ದೂರವಾಣಿಯಲ್ಲಿ ಸುಖದುಃಖವನ್ನು ನೇರವಾಗಿ ಹಂಚಿಕೊಂಡವರು. ಶ್ರೀಯುತರು ಕೆಲವು ದಿನಗಳ ಹಿಂದೆ ದೂರವಾಣಿ ಮೂಲಕ ಸಂಪರ್ಕಿಸಿ ಬರೆದ ಪ್ರಸಂಗಗಳು ಪ್ರಕಟವಾಗಬೇಕೆನ್ನುವ ಆಸೆತೋಡಿ ಕೊಂಡಿದ್ದರು. ಇದು ಅವರ ಕೊನೆಯ ಆಸೆಯೂ ಕೂಡ. ಇದನ್ನು ನನಸಾಗಿಸಿದಾಗ ಮಾತ್ರ ಅವರ ದಿವ್ಯಚೇತನಕ್ಕೆ ಚಿರಶಾಂತಿ ಲಭಿಸುತ್ತದೆ ಅಂತ ಭಾವಿಸುತ್ತೇನೆ.

ಇಂತಹ ಹಿರಿಯ ಅನುಭವಿಯನ್ನು ಕಳೆದುಕೊಂಡ ದುಃಖವನ್ನು ಭರಿಸುವ ಶಕ್ತಿಯನ್ನು ಪರಮಾತ್ಮನು ಅವರ ಶ್ರೀಮತಿಯವರಿಗೂ ನಿಮಗೆಲ್ಲರಿಗೂ ನೀಡಲಿ ಎಂದು ಹಾರೈಸುತ್ತೇನೆ."

ನಮ್ಮ ತಂದೆ ತೀರಿಹೋಗಿ ಹದಿನೆಂಟು ವರ್ಷಗಳ ಅನಂತರ ಆ ಕಾರ್ಯವನ್ನು ಮಾಡುವ ಭಾಗ್ಯವನ್ನು ಭಗವಂತ ಈಗ ಕರುಣಿಸಿದ್ದಾನೆ. ಅವರ ಮಗನಾಗಿ ಹುಟ್ಟಿ ಅವರ ಕೊನೆಯಾಸೆ ತೀರಿಸುವ ಶಕ್ತಿಯನ್ನು ನೀಡಿದ ದೇವರಿಗೆ ಸಹಸ್ರ ಪ್ರಣಾಮಗಳು. ಫಣಿಯಪ್ಪಯ್ಯನವರ ನಿಧನದ ಅನಂತರ ಅವರ 'ಶ್ರೀಕೃಷ್ಣಗಾರುಡಿ' ಪ್ರಸಂಗವನ್ನು ಉಡುಪಿಯಲ್ಲಿ ಶ್ರೀ ಸುಬ್ರಹ್ಮಣ್ಯ ಧಾರೇಶ್ವರರು ಪೆರ್ಡೂರು ಮೇಳದಲ್ಲಿ ನಡೆಸಿಕೊಟ್ಟರು. ಮಂದಾರ್ತಿ ಮತ್ತು ಮಾರಣಕಟ್ಟೆ ಮೇಳದವರೂ ಆಗಾಗ ಈ ಪ್ರಸಂಗವನ್ನು ಪ್ರದರ್ಶಿಸುತ್ತಿದ್ದರು ಎಂಬುದನ್ನು ಬಿಟ್ಟರೆ ಅವರ ನೆನಪು ಯಕ್ಷಗಾನ ಲೋಕದಲ್ಲಿ ಮರೆಯಾಗ ತೊಡಗಿತ್ತು. ಅವರ ಸಮಕಾಲೀನ ಕಲಾವಿದರೂ ಕಣ್ಮರೆಯಾಗಿದ್ದರು. ಆದರೆ 2021ರಲ್ಲಿ ಅವರ 'ವಾಜಿಗ್ರಹಣ' ಮತ್ತು ಈಗ 2022ರಲ್ಲಿ ಉಳಿದ ಐದು ಯಕ್ಷಗಾನ ಪ್ರಸಂಗಗಳನ್ನು ಡಾ. ಕಬ್ಬಿನಾಲೆ ವಸಂತ ಭಾರದ್ವಾಜರು ವಿದ್ವತ್ಪೂರ್ಣವಾದ ಪ್ರಸ್ತಾವನೆಯೊಂದಿಗೆ ಸಂಪಾದಿಸಿ ಕೊಟ್ಟಿದ್ದಾರೆ. ಅವರಿಗೆ ನಾವು ಆಭಾರಿಗಳು. ನಮ್ಮ ಅಪ್ಪಯ್ಯ ಶಿರೂರು ಫಣಿಯಪ್ಪಯ್ಯನವರನ್ನು ಮತ್ತು ಅವರ ಕೆಲಸವನ್ನು ಯಕ್ಷಗಾನ ಪ್ರಪಂಚಕ್ಕೆ ಪರಿಚಯಿಸುವ ಕಾರ್ಯಕ್ಕೆ ನನ್ನೊಡನೆ ಕೈಜೋಡಿಸಿದ ಡಾ. ಕಬ್ಬಿನಾಲೆಯವರಿಗೆ ನನ್ನ ಅನಂತ ವಂದನೆಗಳು. ಯಕ್ಷಗಾನ ಪ್ರಸಂಗ ಪುಸ್ತಕಗಳ ಪ್ರಕಟಣೆ, ಹಸ್ತಪ್ರತಿ ತಾಡವಾಲೆ ಗ್ರಂಥಗಳ ಸಂರಕ್ಷಣೆ ಮತ್ತು ಯಕ್ಷಗಾನ ಕ್ಷೇತ್ರದಲ್ಲಿ ಸೇವೆಸಲ್ಲಿಸಿದ ಅಶಕ್ತ ಕಲಾವಿದರಿಗೆ ಸಹಾಯ ನೀಡುವ ಉದ್ದೇಶದಿಂದ 'ಫಣಿಗಿರಿ ಪ್ರತಿಷ್ಠಾನ'ವನ್ನು 19-11-2021 ರಂದು ನಾವು ಸ್ಥಾಪಿಸಿದ್ದೇವೆ. ಎಲ್ಲ ಹಿರಿಯರ ಆಶೀರ್ವಾದದಿಂದ ನಮ್ಮ ಪ್ರತಿಷ್ಠಾನದ ಕಾರ್ಯಗಳು ನಡೆಯುತ್ತವೆ ಎನ್ನುವ ವಿಶ್ವಾಸ ಹೊಂದಿದ್ದೇವೆ.

ಶಿರೂರು ಫಣಿಯಪ್ಪಯ್ಯ ವಿರಚಿತ ಐದು ಯಕ್ಷಗಾನ ಪ್ರಸಂಗಗಳ ಈ ಸಂಪುಟವನ್ನು ಚಿಕ್ಕ ಪರಿಚಯಾತ್ಮಕ ಲೇಖನದೊಂದಿಗೆ ಪ್ರಕಟಿಸುತ್ತಿದ್ದೇವೆ. ಯಕ್ಷಗಾನ ಕಲಾರಸಿಕರು ಇದನ್ನು ಸ್ವಾಗತಿಸುತ್ತಾರೆ ಎಂಬ ವಿಶ್ವಾಸ ನಮ್ಮದು. ನಮಸ್ಕಾರ.

5.10.2022 **ಉಮೇಶ ಶಿರೂರು**

ವಿಜಯದಶಮಿ

ಯಕ್ಷಗಾನ

ಭೂಮಿಕಾ ಪರಿಣಯ

(ಸತಿ ನಯನಾವತಿ)

ಪಾತ್ರ ಪರಿಚಯ

1. ಶಿವವರ್ಮ (ಶಿವಪುರದ ರಾಜ)
2. ನಯನಾವತಿ (ಹೆಂಡತಿ)
3. ತೇಜವರ್ಮ – ಮಗ
4. ಸುಬುದ್ಧಿ – ಮಂತ್ರಿ
5. ಪ್ರೇತ (ಭೂತಾಕಾರ)
6. ದೀರ್ಘಜಟಿ (ಋಷಿ)
7. ಬ್ರಹ್ಮವ್ರತ (ಬ್ರಹ್ಮದೇಶದ ರಾಜ)
8. ಮಂತ್ರಿ
9. ದುರ್ಮದ (ರಾಕ್ಷಸ)
10. ಗುಣಾಢ್ಯ (ಜ್ಯೋತಿಷಿ)
11. ಭೂಮಿಕೆ (ಬ್ರಹ್ಮವ್ರತನ ಮಗಳು)
12. ಕಾಳಿಕಾದೇವಿ
13. ಕಿರಾತರು (ಮೃಗಬೇಟೆ)
14. ವನಪಾಲಕರು, ಚಾರಕರು, ಸಖಿಯರು, ಕುದುರೆ ಇತ್ಯಾದಿ

****

ಕಥಾಸಾರ

ಶಿವಪುರದ ರಾಜ ಶಿವವರ್ಮನಿಗೆ ನಯನಾವತಿ ಎಂಬ ಮಡದಿ ಮತ್ತು ತೇಜವರ್ಮನೆಂಬ ಮಗ. ಸುಬುದ್ಧಿ ಎಂಬ ದುಷ್ಟಮಂತ್ರಿಯ ಬಗೆಗೆ ರಾಣಿ ಕಿವಿಮಾತು ಹೇಳಿದರೂ ಅರಸ ನಂಬುವುದಿಲ್ಲ. ಒಮ್ಮೆ ವನಪಾಲಕರ ದೂರಿನ ಮೇರೆಗೆ ರಾಜನು ಬೇಟೆಗಾಗಿ ಅರಣ್ಯಕ್ಕೆ ಹೋದಾಗ ಮಂತ್ರಿಯೂ ಅವನೊಂದಿಗೆ ತೆರಳುತ್ತಾನೆ. ರಾಜನು ಕುದುರೆಯೇರಿ ಕರಡಿಯೊಂದನ್ನು ಬೆನ್ನಟ್ಟಿಹೋದಾಗ ಮಂತ್ರಿಯೂ ಅವನನ್ನು ಅನುಸರಿಸುತ್ತಾನೆ. ಬಹುದೂರದ ಅರಣ್ಯದಲ್ಲಿ ರಾಜನಿಗೆ ಬಾಯಾರಿಕೆಯಾಗುತ್ತದೆ. ಸರೋವರವನ್ನು ಹುಡುಕಿ ಮಂತ್ರಿಯು ತಂದ ನೀರನ್ನು ಕುಡಿದು ರಾಜನು ಮರದ ನೆರಳಲ್ಲಿ ವಿಶ್ರಮಿಸುತ್ತಾನೆ. ಅದೇ ಸಮಯವನ್ನು ಸಾಧಿಸಿ ಮಂತ್ರಿಯು ರಾಜನಿಗೆ ಔಷಧಿಕುಡಿಸಿ ಮೂರ್ಛೆಬರಿಸಿ ಮಣ್ಣಿನಡಿ ಹೂಳುತ್ತಾನೆ. ಪಟ್ಟಣಕ್ಕೆ ಹಿಂದಿರುಗಿ ತಾನೇ ರಾಜನಾಗುತ್ತಾನೆ.

ರಾಜನು ಸಿಂಹದ ಬಾಯಿಗೆ ತುತ್ತಾದನೆಂಬ ಸುದ್ದಿಯನ್ನು ತಿಳಿದು ರಾಣಿ ನಯನಾವತಿ ದುಃಖಿಸುತ್ತಾಳೆ. ಅವಳನ್ನು ಬಯಸಿದ ಸುಬುದ್ಧಿಗೆ ಎಂಟು ದಿವಸದ ಕಾಲಾವಕಾಶವನ್ನು ಕೇಳಿ, ಮಧ್ಯರಾತ್ರಿಯ ಹೊತ್ತಲ್ಲಿ ಮಗನೊಂದಿಗೆ ತಪ್ಪಿಸಿಕೊಂಡು ಕಾಡುಸೇರುತ್ತಾಳೆ. ಋಷ್ಯಾಶ್ರಮವೊಂದರಲ್ಲಿ ಆಶ್ರಯವನ್ನು ಪಡೆಯುತ್ತಾಳೆ. ರಾಣಿಯು ತಪ್ಪಿಸಿಕೊಂಡುಹೋದಳೆಂಬುದನ್ನು ತಿಳಿದ ಸುಬುದ್ಧಿ ಅವಳ ಹುಡುಕಾಟಕ್ಕೆ ರಾಜಭಟರನ್ನು ಕಳುಹಿಸುತ್ತಾನೆ. ಋಷ್ಯಾಶ್ರಮದಲ್ಲಿ ಬೆಳೆದ ತೇಜವರ್ಮ ವಿದ್ಯಾಪಾರಂಗತನಾಗಿ ತಾಯಿಗೊದಗಿದ ಸಂಕಷ್ಟವನ್ನು ತಿಳಿದು ಪ್ರತೀಕಾರಕ್ಕೆ ನಿರ್ಧರಿಸುತ್ತಾನೆ. ತಾಯಿ ಮತ್ತು ಗುರುಗಳ ಮಾತಿಗೊಪ್ಪಿ ಕಾಲದ ನಿರೀಕ್ಷೆಯಲ್ಲಿರುತ್ತಾನೆ.

ತಪ್ಪಿಸಿಕೊಂಡು ಹೋದ ರಾಣಿ ಮತ್ತು ಪುತ್ರನನ್ನು ಹುಡುಕಲು ಸುಬುದ್ಧಿಯೇ ಸ್ವಯಂ ಊರೂರು ಅಲೆಯುತ್ತಾನೆ. ಭೂತಾಕಾರವೊಂದು ಅವನಿಗೆ ಭಯಹುಟ್ಟಿಸುತ್ತದೆ. ಅನಂತರ ಪ್ರಾಣಭಯದಿಂದಲೇ ದಿನಕಳೆಯುತ್ತಾ ಇರುತ್ತಾನೆ. ತೇಜವರ್ಮನು ಸಮಿಧಾಸಂಗ್ರಹಕ್ಕೆಂದು ಗಿರಿಪ್ರದೇಶಕ್ಕೆ ಹೋದಾಗ ಕುದುರೆಯೊಂದನ್ನು ಕಂಡು ಅಚ್ಚರಿಗೊಳ್ಳುತ್ತಾನೆ. ಆ ಕುದುರೆಯೇ ಮಳಲರಾಶಿಯನ್ನು ಕಾಲಿನಿಂದ ಕೆದರಿ ಸನ್ನೆಮಾಡಿದಾಗ ತೇಜವರ್ಮನಿಗೆ ಸಂದೇಹವುಂಟಾಗುತ್ತದೆ. ಆ ಭೂಪ್ರದೇಶವನ್ನು ಅಗೆದಾಗ ತನ್ನ ತಂದೆಯ ಶರೀರ ಕಾಣಿಸುತ್ತದೆ. ಅದನ್ನು ಹಾಗೂ ಕುದುರೆಯನ್ನು ಋಷ್ಯಾಶ್ರಮಕ್ಕೆ ತಂದು ತಾಯಿಗೆ ನಡೆದ ಸಂಗತಿಯನ್ನು ವಿವರಿಸುತ್ತಾನೆ. ಪತಿಯ ದೇಹವನ್ನು ಕಂಡ

ನಯನಾವತಿಗೆ ದುಃಖ ಉಮ್ಮಳಿಸಿದಾಗ ಮುನಿಯು ಸಂತೈಸಿ ರಾಜನ ಶರೀರವನ್ನು ಸಂರಕ್ಷಿಸುತ್ತಾನೆ. ನಯನಾವತಿ ಸಂಕಷ್ಟನಿವಾರಣೆಗಾಗಿ ಸಾವಿತ್ರೀವ್ರತವನ್ನು ಕೈಗೊಳ್ಳುತ್ತಾಳೆ.

ಕಾಡಿನಲ್ಲಿ ದುರ್ಮದನೆಂಬ ರಾಕ್ಷಸನೊಬ್ಬ ಕಾಳಿಯನ್ನು ಪೂಜಿಸಿದಾಗ ಬ್ರಹ್ಮದೇಶದ ಬ್ರಹ್ಮವ್ರತರಾಜನ ಮಗಳಾದ ಭೂಮಿಕೆಯನ್ನು ಹದಿನಾರು ವರ್ಷ ತುಂಬಿದ ಕೂಡಲೇ ಕಾಳಿಗೆ ಬಲಿಕೊಟ್ಟರೆ ಇಷ್ಟಾರ್ಥ ಪ್ರಾಪ್ತಿಯಾಗುತ್ತದೆ ಎಂದು ಅಶರೀರವಾಣಿ ಮೊಳಗುತ್ತದೆ. ಆ ಕಾರ್ಯಸಾಧನೆಗಾಗಿ ದುರ್ಮದನು ಜ್ಯೋತಿಷಿಯ ವೇಷಧರಿಸಿ ಬ್ರಹ್ಮವ್ರತನಲ್ಲಿಗೆ ಬರುತ್ತಾನೆ. ಮಗಳಿಗೆ ಶುಭಭವಿಷ್ಯವನ್ನು ಹೇಳಿ ರಾಜನ ಮೈತ್ರಿಯನ್ನು ಸಂಪಾದಿಸುತ್ತಾನೆ. ಜಲಕೇಳಿಗೆ ಹೊರಟ ಭೂಮಿಕೆಯನ್ನು ಅಪಹರಿಸಿ ಕಾಳಿಕಾಮಂದಿರದಲ್ಲಿ ಬಂಧಿಸುತ್ತಾನೆ. ಮಂತ್ರದಂಡದ ಬಲದಿಂದ ಅವಳನ್ನು ಎಚ್ಚರತಪ್ಪಿಸಿ ಅಲ್ಲಿಯೇ ಮಲಗಿಸಿ, ಅವಳ ಶಿರೋಭಾಗದಲ್ಲಿ ದಂಡವನ್ನಿಟ್ಟು ಹಣ್ಣುಹಂಪಲು ತರಲು ತೆರಳುತ್ತಾನೆ.

ಮೃಗಬೇಟೆಗೆ ಹೊರಟ ತೇಜವರ್ಮ ಕಾಳಿಕಾಮಂದಿರಕ್ಕೆ ಬಂದು ಮಲಗಿರುವ ಭೂಮಿಕೆಯನ್ನು ಕಾಣುತ್ತಾನೆ. ದಂಡವನ್ನೆತ್ತಿದಾಗ ಅವಳಿಗೆ ಎಚ್ಚರವಾಗುತ್ತದೆ. ಪರಸ್ಪರ ಪರಿಚಯವಾಗುತ್ತದೆ. ಸಂಜೆಯಾದಾಗ ರಾಕ್ಷಸ ಮರಳುವುದನ್ನು ತಿಳಿದು ತೇಜವರ್ಮ ಮರೆಯಾಗುತ್ತಾನೆ. ರಾಕ್ಷಸನು ತನ್ನ ಪ್ರಾಣವು ಶಿಖೆಯಲ್ಲಿರುವುದೆಂದು ಭೂಮಿಕೆಗೆ ತಿಳಿಸಿ ಯಾರಿಂದಲೂ ತಾನು ಸಾಯಲಾರೆನೆಂದು ಸೂಚಿಸುತ್ತಾನೆ. ಆ ರಹಸ್ಯವನ್ನು ಭೂಮಿಕೆಯಿಂದ ತೇಜವರ್ಮ ತಿಳಿದು ರಾಕ್ಷಸನನ್ನು ಬಗ್ಗುಬಡಿಯುತ್ತಾನೆ. ತಂದೆಯ ಶರೀರಕ್ಕೆ ಮರುಜೀವ ಬರಿಸುವ ಮತ್ತು ಸೈನ್ಯಸೃಷ್ಟಿಯ ಅದ್ಭುತವನ್ನು ಸಾಧಿಸಲು ಸಾಧ್ಯವಾಗುವಂತಹ ಬಿಳಿಹುಡಿಯಿರುವ ಎರಡು ಭರಣಿಗಳನ್ನು ನೀಡಿ ದುರ್ಮದ ಪ್ರಾಣಭಿಕ್ಷೆಯನ್ನು ಪಡೆಯುತ್ತಾನೆ. ಅದರಂತೆ ತೇಜವರ್ಮ ಆಶ್ರಮಕ್ಕೆ ತೆರಳಿ ತಂದೆಯ ಶರೀರಕ್ಕೆ ಜೀವಶಕ್ತಿ ನೀಡಿ, ಶಿವಪುರಕ್ಕೆ ದಾಳಿಮಾಡಿ ಸುಬುದ್ಧಿಯನ್ನು ಸೋಲಿಸುತ್ತಾನೆ. ಭೂಮಿಕಾಳೊಂದಿಗೆ ವಿವಾಹವಾಗುತ್ತಾನೆ. ಮಂಗಲ.

॥ ಶ್ರೀ ಗಣಾಧಿಪತಯೇ ನಮಃ ॥

॥ ಶಾರ್ದೂಲವಿಕ್ರೀಡಿತವೃತ್ತ ॥

ಶ್ರೀವೈಕುಂಠಪುರಾಧಿಪಂ ಸುಜನರಕ್ಷಾವರ್ಧನಂ ಶ್ರೀಧವಂ ।
ದೇವಾರಾತಿವಿನಾಶಕಂ ಭಜಕಸದ್ಭಾವಾರ್ಚಿತಂ ಕೇಶವಂ ।
ಶ್ರೀವತ್ಸಾಂಕಧರಂ ಸರೋಜನಯನಂ ದೇವಾದಿದೇವೋತ್ತಮಂ ।
ಪಾಪಾಧೀಶಸುತಲ್ಪಶಾಯಿನುತಸಂಭಾವಂ ಸದಾಭಾವಯೇ ॥ 1 ॥

॥ ರಾಗ ನಾಟಿ - ರೂಪಕತಾಳ ॥

ಗಜಮುಖ ವಿಘ್ನವಿನಾಶಕ । ಭಜಕಜನಾರ್ಚಿತ ಮೂಷಿಕ ।
ನಿಜವಾಹನ ಹರಸುತ ಗೌ । ರಿಜ ವಿಘ್ನವಿಹರಣ ॥
ಸುಜನರಭೀಷ್ಟಪ್ರದಾಯಕ । ಅಜಮುಖ್ಯಮರಸಹಾಯಕ ।
ಭಜಿಸುವೆ ನಂಬಿದೆ ಚರಣಾಂ । ಬುಜವನು ಸಿರಿಬೆನಕ ॥
ಜಯಜಯ ಜಯಜಯತು ॥ 2 ॥

ತವಪದ ನಂಬಿದ ಭಜಕರ । ಭವಪರಿಹಾರಕ ಶುಭಕರ ।
ಶಿವಸುತ ವೈರಿಭಯಂಕರ । ಸವಿಮೋದಕ ಸುಕರ ॥
ಭವಭಯವರ್ಜಿತ ಕಮಲೋ । ದ್ಭವಮುಖ್ಯಾದ್ಯಮರಾರ್ಚಿತ ।
ಕವಿತೆಗೆ ಪಾಲಿಸು ನಿರ್ವಿ । ಘ್ನವ ಸಜ್ಜನನಮಿತ ॥
ಜಯಜಯ ಜಯಜಯತು ॥ 3 ॥

ಶಿರಿಪುರ ಯಲಗೇಶ್ವರಸುತ । ಶರಧಿಯ ತಟದಲಿ ನೆಲೆಸುತ ।
ಶರಣೆಂದವರನು ಪೊರೆಯುತ । ಅರುತಿಹೆ ನೀ ಸತತ ॥
ಕರದೊಳು ಪಾಶಾಂಕುಶವರ । ಪರಶುಸುಶೋಭಿತ ಶುಭಕರ ।
ಎರಗುವೆನೀ ಕವಿತೆಯ ಮಿಗೆ । ಮೆರೆಸೈ ಹರಕುವರ ॥
ಜಯಜಯ ಜಯಜಯತು ॥ 4 ॥

॥ ಭಾಮಿನಿ ॥

ಗಿರಿಜೆ ಶಿವ ವಾಣೀಶ ಕಮಲೋ ।
ದರ ರಮೆಯರಡಿಗೆರಗಿ ಮಾರುತ ।
ತರಳ ಸುರಪಾದ್ಯಮರರಿಂಗಭಿನಮಿಸಿ ಭೂತಳದ ॥
ವರಕವಿಗಳನು ನುತಿಸಿ ಗುರುಹಿರಿ ।
ಯರ ನೆನೆದು ಪಿತಮಾತೆಯರ ಶುಭ ।
ಚರಣಕೆರಗುತ ಪೇಳ್ವೆನೀ ಸತ್ಕಥೆಯ ವಿಸ್ತರದಿ ॥ 5 ॥

॥ **ರಾಗ ಸೌರಾಷ್ಟ್ರ – ತ್ರಿವುಡೆತಾಳ** ॥

ವರ ಧರಾಮಂಡಲದೊಳಗೆ ಶಿವ ।
ಪುರವೆನಿಪ ರಾಜ್ಯವನು ಧರ್ಮದಿ ।
ಪೊರೆಯುತಿರೆ ಶಿವವರ್ಮನೆಂದೆನಿ ।
ಪರಸನಂದು ॥ 6 ॥

ಭೂವರನಿಗರ್ಧಾಂಗಿ ನಯನಾ ।
ದೇವಿಯೆನಿಪತಿರೂಪ ಗುಣಸಂ ।
ಭಾವೆ ಪತಿಸೇವಾಪರಾಯಣೆ ।
ಯಾ ವನಿತೆಗೆ ॥ 7 ॥

ಪುತ್ರನಾದನು ತೇಜವರ್ಮನು ।
ನಿತ್ಯ ರವಿಶಶಿಯಂತೆ ಬೆಳಗುತ ।
ಹತ್ತುವರುಷಗಳಾಗೆ ಮಿಗೆ ಸಲ ।
ಹುತ್ತಲಿರ್ದ ॥ 8 ॥

॥ **ಭಾಮಿನಿ** ॥

ಇಂತು ಸುಖದಿಂದಾಳ್ವ ಧರಣೀ ।
ಕಾಂತಗೋರ್ವನು ದುಷ್ಟದುರ್ಮತಿ ।
ಮಂತ್ರಿಯಾದ ಸುಬುದ್ಧಿ ನಾಮವಿರೋಧಗುಣಯುತನು ॥
ತಂತ್ರದಿಂದೀ ರಾಜ್ಯವನು ಭೂ ।
ಕಾಂತನನು ಮರ್ದಿಸುತ ಬಾಳುವ ।
ಹಂತವಾಲೋಚಿಸುತ ಭೂಪಗೆ ಹಿತದೊಳಿರುತಿರ್ದ ॥ 9 ॥

॥ **ಕಂದಪದ್ಯ** ॥

ಇಂತಾ ಸಚಿವನ ದುರ್ಮನ ।
ವಂ ತಿಳಿಯದೆ ವಸುಧಾಪತಿಯಾಪ್ತನ ತೆರದಿಂ ।
ತಾಂ ತಿಳಿದಿರಲೊಂದಿನ ನಿಜ ।
ಕಾಂತಾಮಣಿ ಬಂದೆರಗುತಲೆಂದಳ್ ಪತಿಗಂ ॥ 10 ॥

॥ **ರಾಗ ಕಲ್ಯಾಣಿ – ಅಷ್ಟತಾಳ** ॥

ಹರಣದೊಲ್ಲಭ ಲಾಲಿಸು । ಮತ್ತ್ರಿಯ ಪೇಳ್ವು ।
ದರಿತು ಮನದಿ ಗ್ರಹಿಸು ॥
ಧರೆಯ ಪಾಲಿಸುತಿಲ್ಲೀ । ವರೆಗೆ ಸದ್ಧರ್ಮದಿ ।
ದೊರೆಯೆನಿಸಿಹೆ ಸತ್ಯ । ಭರಿತಸದ್ಗುಣದಲಿ ॥ 11 ॥

ಎಲ್ಲ ಸೇವಕರೊಡನೆ । ನಂಬಿಗೆ ಒಳ್ಳಿ ।
ತಲ್ಲ ಬರಿದೆ ಸುಮ್ಮನೆ ॥
ಬಲ್ಲವರಿಗೆ ಪೇಳ್ವ । ಆಲ್ಲ ನೀ ಮನದೊಳ ।
ಗೆಲ್ಲ ವಿಚಾರಿಸಿ । ಮೆಲ್ಲನರಿಯೆ ಲೇಸು ॥ 12 ॥

ತವ ಮಂತ್ರಿಯಹ ಸುಬುದ್ಧಿ । ಎಷ್ಟಕು ನಂಬು ।
ವವನಲ್ಲಧಿಕ ದುರ್ಬುದ್ಧಿ ॥
ಭುವನೇಶ ನಿನಗೆ ಮೋ । ಸವ ಗೈದು ಗೆಲಿದಾಳು ।
ವವನಿಯ ವಶಮಾಳ್ವ । ಹವಣಿನೊಳಿಹನಂತೆ ॥ 13 ॥

॥ **ವಾರ್ಧಕ** ॥

ತರುಣಿಮಣಿ ಕೇಳು ನೀ ಬರಿದೆ ಸಚಿವನ ದೂರಿ ।
ಹೊರಿಸದಿರು ಅಪವಾದವರಿತಿರ್ಪೆ ನಾನೆಲ್ಲ ।
ಪರಿಯನತಿಸಾಮರ್ಥ್ಯನಹನು ರಾಜ್ಯಾಡಳಿತ ಕೌಶಲ್ಯಕಲೆನಿಪುಣನು ॥
ಪರಮವಿಕ್ರಮಿ ಸುಗುಣಿಯರಿಯದನ್ಯರು ಪೇಳ್ದ ।
ಸರಸಚಾಡಿಯ ನುಡಿಗೆ ಮರುಳಹನು ನಾನಲ್ಲ ।
ಸರಸಿಜಾಂಬಕಿ ಧೈರ್ಯಗೆಡದಿರೆನೆ ಮನಕೊಪ್ಪದಿರಲು ಕಾಮಿನಿ ದುಗುಡದಿ ॥ 14 ॥

॥ **ಭಾಮಿನಿ** ॥

ಎಂತು ಧರಣೀಶ್ವರನ ಮನದೊಳು ।
ನಿಂತ ವಿಶ್ವಾಸವನು ಕಳೆವೆ ಕು ।
ತಂತ್ರಿಯೊಂದಿನ ಪತಿಯನೇಂಗೈದಪನೊಯೆಂದೆನುತ ॥
ಕಾಂತೆಯನುದಿನ ತನ್ನ ಮನದೊಳು ।
ಚಿಂತಿಸುತ ಜಾಗ್ರತೆಯೊಳಿರೆ ಭೂ ।
ಕಾಂತನೆಡೆಗೊಂದಿವಸ ವನಪಾಲಕರು ಬಂದೆರಗಿ ॥ 15 ॥

॥ **ರಾಗ ಲಾವಣಿ – ಏಕತಾಳ** ॥

ದೊರೆಯೆ ಪರಾಕು ಬುದ್ಧಿ ।
ಅರುಹಲ್ಬೈತಂದೆವ್ ಸುದ್ದಿ ।
ಕಿರುಕುಳ್ಕೊಡ್ತೈತೆ ಮಿಗವಿಂಡು ।
ಹೊಲನೋಳ್ ಮುಂಕೊಂಡು ॥ 16 ॥

ಹುಲಿ ಕೈಡಿ ಸಿಂಗ ಸರಬ ।
ಮೊಲ ಮಂಗ ಹಂದಿ ಕಿರಬ ।
ಬಲುಜೋರು ಸೊಕ್ಕಿಲ್ಬೈದಾವೆ ।
ಮೆರೆದಾಡ್ತೈದಾವೆ ॥ 17 ॥

ಎಡ್ಯದವ್ಕೊಡ್ವ ಲೂಟಿ ।
ತಡ್ಯದೈತಂದು ಬ್ಯಾಟಿ ।
ಒಡ್ಯರಾಡ್ಕೊಂಡು ಬರ್ದಿದ್ರೆ ।
ನಮ್ಗಿಲ್ಲ ನಿದ್ರೆ ॥ 18 ॥

॥ ರಾಗ ಭೈರವಿ – ಏಕತಾಳ ॥

ಎದ್ದೇಳಿರಿ ಭಯಬಿಡಿರಿ । ನಾ ।
ಇದ್ದೆವು ಧೈರ್ಯಗೆಡದಿರಿ ॥
ಸದ್ದಡಗಿಸಿ ಮೃಗಕುಲವ । ಸುಖ ।
ಹೊದ್ದಿಪೆ ಕೂಡಿಸಿ ಬಲವ ॥ 19 ॥

ಬೇಟೆಯನಾಡದೆ ದಿನವು । ಬಲು ।
ದಾಟಿ ತವಕಿಸಿದೆ ಮನವು ॥
ಮೀಟಹ ಬಲಗಳಕೂಡಿ । ಮೃಗ ।
ದಾಟ ನಿಲಿಪೆ ಹೊಯ್ದಾಡಿ ॥ 20 ॥

ಬರಹೇಳಿರೊ ಮಾರ್ಬಲವ । ಪಡೆ ।
ವೆರಸಿ ಶಬರಸಂಕುಲವ ॥
ನೆರಹಿರೆನುತ ಮಂತ್ರಿಯನು । ಕರೆ ।
ತರಲಟ್ಟಿದ ಚಾರರನು ॥ 21 ॥

॥ ರಾಗ ಸೌರಾಷ್ಟ್ರ – ತ್ರಿವುಡೆತಾಳ ॥

ಇತ್ತ ಮಂತ್ರಿ ಸುಬುದ್ಧಿ ತನ್ನಯ ।
ಚಿತ್ತದೊಳು ಯೋಚಿಸುತಲೆಂತೀ ।
ಧಾತ್ರಿಯಧಿಪತಿಯಹೆ ಕೃತಾಂತನಿ ।
ಗಿತ್ತು ನೃಪನ ॥ 22 ॥

ಕಾಣೆನೀವರೆಗವನಿಪತಿಗನು ।
ಮಾನವೆನ್ನೊಳು ನಂಬಿಕೆಯೊಳಿಹ ।
ಹಾನಿಗೈಯ್ಯಲದೆಂತು ಯತ್ನವ ।
ದೇನ ಗೈವೆ ॥ 23 ॥

ಹಿತದೊಳಿರ್ದವನಂತೆ ನಟಿಸುತ ।
ಜೊತೆಯೊಳೋರ್ವನೆ ಪೋದ ಸಮಯದಿ ।
ಹತಿಸುತವನೀಪತಿಯನಾಳುವೆ ।
ಕ್ಷಿತಿಯನೆನುತ ॥ 24 ॥

ಇಂತು ಕಾಲನಿರೀಕ್ಷಣೆಯೊಳು ಕು ।
ತಂತ್ರವೆಣಿಸುತ ಸಚಿವನಿರೆ ಭೂ ।
ಕಾಂತನಾಜ್ಞೆಯ ತಿಳುಹೆ ಚಾರರು ।
ಸಂತಸದಲಿ ॥ 25 ॥

ಪೊರಟು ಬಂದಾಕ್ಷಣದಿ ಭೂಪನ ।
ಚರಣಕಾನತನಾಗಿ ಕರೆಸಿದ ।
ಪರಿಯದೇನಾರಿಂದ ತೊಂದರೆ ।
ದೊರೆಕಿತೆನಲು ॥ 26 ॥

॥ **ರಾಗ ಸುರುಟಿ – ಏಕತಾಳ** ॥

ಸಚಿವಾಗ್ರಣಿ ಕೇಳು । ನಿನ್ನೊಳು ।
ವಚಿಸುವೆನೆದ್ದೇಳು ॥
ಪ್ರಚುರನೆ ವನಮೃಗ । ನಿಚಯದುಪದ್ರವ ।
ಖಚಿತದಿ ಬಂದೀ । ಗೊರೆದರು ಚಾರರು ॥ 27 ॥

ಅದರಿಂ ಮಾರ್ಬಲವ । ಕೂಡುತ ।
ಸದೆದು ಮೃಗವ ಬರುವ ॥
ಹದನೆಣಿಸುತ ಕರೆ । ಸಿದೆನೆನ್ನಯ ಜೊತೆ ।
ಗೊದಗುತಲೀರ್ವರು । ಮುದದೊಳು ಪೋಗುವ ॥ 28 ॥

ಮೃಗಬೇಟೆಯನಾಡಿ । ಬಲುದಿನ ।
ವಗಲಿದುದ್ದೈ ನೋಡಿ ॥
ಬಗೆಯರಿದೆಮ್ಮಯ ಕೈರಾತಕಸೈ ।
ನ್ಯಗಳನು ಬರಹೇಳೆನೆ ಮುದತಾಳುತ ॥ 29 ॥

॥ **ಭಾಮಿನಿ** ॥

ಬಹಳದಿನದಿಂ ಮನದಿ ಬಯಸೀ ।
ದಿರ್ಘಹಸುಯೋಗವು ತಾನೆ ಘಟಿಸಿಹು ।
ದಹಹ ಸಂತಸವಾಯ್ತೆನುತ ಸಚಿವೇಂದ್ರನುತ್ಸಹದಿ ॥
ಕುಹಕಬುಧ್ಧಿಯ ನೆನೆವುತಿದರಲಿ ।
ವಿಹಿತ ಮರೆಯುತನಾಗಿ ಶಬರನಿ ।
ವಹಕೆ ಬರಹೇಳಲ್ಕೆ ಬಂದವರೆರಗುತುಸುರಿದರು ॥ 30 ॥

॥ **ರಾಗ ಆರ್ಯಸವಾಯಿ – ಏಕತಾಳ** ॥

ಒಡೆಯರಿಗೊಂದಿಪೆ ಕರೆಸಿದಕೆಮ್ಮಯ ।
ಹುಡುಗ ಸಿಪಾಯ್ ಬಲಕೂಡುತಲಿ ॥
ದಡಬಡ ಪೊರಟೈತಂದೆವು ಬೇಟೆಗೆ ।
ತಡೆಯದೆ ಕೊಡಿಸಪ್ಪಣೆ ಬೇಗ್ಮ್ಯಾ ॥ 31 ॥

ಸಣ್ಣಬಲೆಯ ಹೆಬ್ಬಲೆಗಳನೆಮ್ಮಯ ।
ಕುನ್ನಿಗೊಡ್ಡುಗಳ ಕೂಡ್ಕೊಳುತ ॥
ತಿನ್ನುವ ಗಮಕದಿ ಬಂದೆವು ಮಿಗಗಳ ।
ಸನ್ನಹದೊಳಗಾಯುಧ ಸಹಿತ ॥ 32 ॥

ಗಂಡಿಗಂಡಿಯೊಳು ಕುಂತು ಮಿಗಂಗಳ ।
ಹಿಂಡುಹಿಂಡುಗಳನೆಬ್ಬಟ್ಟಿ ॥
ಗುಂಡುಸಲಾಕಿಯೊಳಿರಿವುತ ಕೊಲುವೆವು ।
ತಂಡವ ಕೂಡುತ ಬೆನ್ನಟ್ಟಿ ॥ 33 ॥

॥ **ಭಾಮಿನಿ** ॥

ಬಂದ ಶಬರರ ಮನ್ನಿಸುತಲವ ।
ನೀಂದ್ರ ಮಾರ್ಬಲಗೂಡಿ ಸನ್ನಹ ।
ದಿಂದ ಮಂತ್ರಿಸುಬುದ್ಧಿಯೊಡಗೂಡುತಲಿ ಕಾನನಕೆ ॥
ಚೆಂದದಿಂ ಪೊರಮಡಲರಿತು ಪೂ ।
ರ್ಣೇಂದುಮುಖಿ ನಯನಾವತಿಯು ನಡೆ ।
ತಂದು ಪತಿಯಡಿಗೆರಗಿ ಪೇಳ್ದಳು ಮನದೊಳಿಹ ಭಯವ ॥ 34 ॥

॥ **ರಾಗ ಸಾವೇರಿ – ಆದಿತಾಳ** ॥

ಕಾಮಸನ್ನಿಭ ಲಾಲಿಸು । ಮನ್ಮನದಿಷ್ಟ ।
ಪ್ರೇಮದಿಂದಲಿ ಪಾಲಿಸು ॥
ಕ್ಷೇಮವಲ್ಲಿಂದು ನೀನು । ಬೇಟೆಗೆ ಪೋಗು ।
ವಾ ಮನ ಲೇಸಲ್ಲಿನ್ನು ॥ 35 ॥

ಹಲವು ದುಃಶಕುನಗಳು । ಸೂಚಿಸುತಿವೆ ।
ಛಲಬೇಡವಿಂದು ತಾಳು ॥
ಲಲನೆಯಾದೆನ್ನನಿಂತು । ಕಷ್ಟಕೆಗುರಿ ।
ಗೊಳಿಸಿ ಪೋಗುವೆಯದೆಂತು ॥ 36 ॥

ಎಡಗಣ್ಣು ಅದುರುತಿದೆ । ಪ್ರಾಣೇಶ ಮ ।
ತ್ತೆಡಭುಜ ಕುಣಿಯುತಿದೆ ॥
ತಡೆದೊಂದು ದಿನ ನಾಳೆಗೆ । ಪೋಗಲು ಬಹು ।
ದಡವಿಯ ಮೃಗಬೇಟೆಗೆ ॥ 37 ॥

॥ **ರಾಗ ಮಾರವಿ – ಏಕತಾಳ** ॥

ಮಡದೀಮಣಿ ಕೇಳೇತಕೆ ನೀ ಭಯ ।
ಪಡುವೆಯ ಮೃಗಬೇಟೆ ॥
ಪೊಡವಿಪರಿಂಗದು ಪೊಸತಲ್ಲವು ಮನ ।
ಕಿಡದಿರು ಸಂಶಯವ ॥ 38 ॥

ನರದೌರ್ಬಲ್ಯದೊಳಾಗುವದಂಗ ।
ಸ್ಫುರಣವು ಕೇಳೆಲೆಗೆ ॥
ಬರಿದದನರಿಯದೆ ದುಃಶಕುನವಿದೆಂ ।
ದರೆ ನಂಬಿಕೆ ಹೇಗೆ ॥ 39 ॥

ತಿಳಿದೆನು ತವಮನದೊಲವನು ಮಂತ್ರಿಯ।
ಸಲೆ ಜೊತೆಗೂಡುತಲಿ ॥
ಹೊಲಕ್ಕೈದುವೆನೆಂದಳುಕದಿರೆನ್ನಯ ।
ಬಲುಹನರಿಯೆ ಧುರದಿ ॥ 40 ॥

॥ **ಭಾಮಿನಿ** ॥

ಕಾಮಿನೀಮಣಿ ಕೇಳು ಹಲವನು ।
ನೀ ಮನದೊಳೆಣಿಸದಿರು ಮಂತ್ರಿಯ ।
ಕಾಮುಕತ್ವವ ನಂಬಲಾರೆ ವೃಥಾಪವಾದವನು ॥
ಭೀಮಬಲನೆನ್ನುವನು ಕೆಣಕುವ ।
ಡಾ ಮನುಜನಿನ್ನೆಷ್ಟರವ ಬರಿ ।
ದೇ ಮರುಗಬೇಡೆಂದು ಸಂತೈಸುತ್ತ ಹೊರವಂಟ ॥ 41 ॥

॥ **ರಾಗ ಮುಖಾರಿ – ಏಕತಾಳ** ॥

ಬೇಟೆಯಾಡುತ್ತಲೈದ ಭೂಪ । ಬಲು ಸುಪ್ರತಾಪ ।
ಬೇಟೆಯಾಡುತ್ತಲೈದ ಭೂಪ ॥ ಪ ॥

ಮೀಟಾಗಿಹ ಬಲು । ಕೂಟವ ಕೂಡುತ ।
ಘೋಟಕವೇರಿ ಮ । ಹಾಟವಿಯೊಳಗೆ ॥ 42 ॥

ಚತುರ ಸಚಿವನನು । ಜೊತೆಗೂಡುತ ಮೃಗ ।
ವಿತತಿಯ ಸವರುತ । ಖತಿಯೊಳು ಮುಂದಕೆ ॥ 43 ॥

ಆಡುತ ಮೃಗಗಳ । ನೋಡುತ ಶಬರರು ।
ಕೂಡುತ ಕಡಿದೀ । ಡಾಡುತ ಭರದಿ ॥ 44 ॥

॥ **ವಾರ್ಧಕ** ॥

ಈ ರೀತಿಯೊಳು ಬೇಟೆಯಾಡುತ್ತೈತರೆ ಮುಂದೆ ।
ಘೋರ ಭಲ್ಲೂಕ ಮೊದಲಡ್ಡವಿಸೆ ಭೂಮಿಪತಿ ।
ಏರಿ ತುರಗವನದರ ಬೆನ್ನಟ್ಟುತ್ತೈದಿದಂ ಮಂತ್ರಿಸಹ ಮುಂದೊತ್ತುತ ॥
ಭೂರಿಸೇನೆಯ ತೊರೆಯುತೀರ್ವರೇ ಬೆಂಬತ್ತಿ ।
ಸಾರಿ ಕೆಡಹಲ್ ಭೂಮಿಪಾಲನಾ ಕರಡಿಯಂ ।
ಧೀರ ಭಳಿಭಳಿರೆಂದು ಪೊಗಳಿದಂ ಸಚಿವನಾ ಭೂಪನ ಪರಾಕ್ರಮುವನು ॥45॥

॥ **ಸಾಂಗತ್ಯ – ರೂಪಕತಾಳ** ॥

ಭೂಮಿಪಾಲಕನಿಂತು ಸಚಿವನಾಡಿದ ನುಡಿ ।
ಗಾ ಮಹೋತ್ಸಾಹದೊಳುಬ್ಬಿ ॥
ಪ್ರೇಮದೊಳಿಂತೆಂದನೆನಿತೊಂದು ದಣಿಸಿದು ।
ದೀ ಮಹಾಮೃಗವೆನ್ನನಮುಮ ॥ 46 ॥

ವಿಪರೀತ ಬಾಯಾರಿಕೆಯಲಿ ನಾ ದಣಿದಿಹೆ ।
ನಪರೂಪವಿಂದಿಲ್ಲಿ ಜಲವು ॥
ತಪನಜ್ವಾಲೆಗಳಿಂದ ತನು ಬೇವುತಿದೆ ಸೇನೆ ।
ವಿಫಲವಾಯ್ತಿಲ್ಲೀಗ ಬರದೆ ॥ 47 ॥

ಜಲವಾಹಾರಗಳೆಲ್ಲ ಉಳಿದಿದೆ ಸೇನೆಯೊಳ್ ।
ಫಲವೇನೀಗಿಲ್ಲರದದಕೆ ॥
ಸಲಿಲವೆಲ್ಲಿದೆ ನೋಡಿ ಫಳಿಲನೈತಾರೆನೆ ।
ತಿಳಿದೆಂದ ಸಚಿವನಾಕ್ಷಣಕೆ ॥ 48 ॥

॥ **ಭಾಮಿನಿ** ॥

ಧಾರಿಣಿಪನಿದಕಂಜದಿರು ಬಾ ।
ಯಾರಿ ಬಳಲುವದೇಕೆ ತಿಳಿವೆನು ।
ನೀರಿರುವ ತಾಣವನೆನುತ ಮರವೇರಿ ಸನಿಹದಲಿ ॥
ಹಾರುತಿಹ ಖಗವಿಂಡು ನೋಡುತ ।
ಸಾರಿ ಬಳಿಕಾಯೆಡೆಯೊಳಗೆ ಕಾ ।
ಸಾರವಿರೆ ಬಂದರಸಗೊರೆಯುತಲುಭಯರೊಂದಾಗಿ ॥ 49 ॥

॥ ಕಂದಪದ್ಯ ॥

ತುರಗವನೇರುತ ನಡೆದಾ ।
ಸರಸಿಯ ಬಳಿಸಾರ್ದು ಜಲವನೀಂಟುತಲಾಗಳ್ ।
ಪರಿಹರಿಸಲು ದೇಹಶ್ರಮ ।
ನೆರಳಾಶ್ರಯಿಸುತಲೊರೆದಂ ಸಚಿವನೊಳರಸಂ ॥ 50 ॥

॥ ರಾಗ ಭೈರವಿ – ಝಂಪೆತಾಳ ॥

ಬಾರಯ್ಯ ಮಂತ್ರಿ ಬಿಸಿ । ಲೇರಿಹುದು ತರುವಿನಡಿ ।
ಸೇರಿ ವಿಶ್ರಾಂತಿಪಡೆ । ದೂರಿಗೈದುವುದು ॥ 51 ॥

ಅನಿತರೊಳಗೆಮ್ಮ ಬಲ । ಸನಿಹದೊಳು ಬರಬಹುದು ।
ಎನೆ ಕೇಳಿ ಮಂತ್ರಿ ನುಡಿ । ದನು ಭೂಪಗಂದು ॥ 52 ॥

ಜೀಯ ನಿಮಗತಿಶಯದೊ । ಳಾಯಾಸವಿಹುದದಕೆ ।
ಹಾಯಾಗಿ ನಿದ್ರಿಸಿರಿ । ಕಾಯುವೆನು ನಾನು ॥ 53 ॥

ಎನೆ ಭೂಪನದಕೊಪ್ಪಿ । ಘನದಿ ನಿದ್ರಿಸುತಿರಲು ।
ಮನದೊಳಗೆ ಸಚಿವೇಂದ್ರ । ನೆನೆದ ಕುಹಕವನು ॥ 54 ॥

॥ ರಾಗ ಮುಖಾರಿ – ಏಕತಾಳ ॥

ಭಳಿರೆ ಕೈಗೂಡಿತು ಬಲುದಿನ ಬಯಕೆ । ಸಮಯವ ನೋಡಲಿಕೆ ॥
ಸಿಲುಕದಿನ್ನಿಂಥ ಕಾಲವಿದಕೆ ॥
ಇಳೆಯಾಧಿಪ ನಿದ್ರಿಸುತಿಹ ಸನಿಹದಿ ।
ಸುಳಿವಿಲ್ಲವು ಜನ ಘೋರಾರಣ್ಯವು ॥ 55 ॥

ನಿದ್ದೆಯೊಳಿರ್ಪ ಭೂಮಿಪತಿಯ । ಎಚ್ಚರಿಸುವ ಮೊದಲೆ ।
ಸದ್ದಿಲ್ಲದಂತೆ ಗೈವೆ ಯುಕುತಿಯ ॥
ಮದ್ದಿದೆಯೆನ್ನೊಡನೆಚ್ಚರದಪ್ಪಿಸಿ ।
ಹೊದ್ದಿಸುತಂತಕ । ನಿದ್ದೆಡೆಗಟ್ಟಲು ॥ 56 ॥

ಎಂದಿಗು ಕುರುಹುದೋರದಂತೆ । ನಾನಿವನನು ಕೊಲ್ಲುತ ।
ಹೊಂದಿ ರಾಜ್ಯವನಾಳುವಂತೆ ॥
ಸಂದೊದಗಿಹುದಿದ । ನಿಂದಿಗೆ ಬಿಟ್ಟರೆ ।
ಮುಂದಕೆ ದೊರಕದಿ । ದೊಂದೇ ಸಮಯವು ॥ 57 ॥

॥ **ವಾರ್ಧಕ** ॥

ಎಂದಾ ಸಚಿವ ಭೂಪನೆದೆಯನೇರುತ ಮುಷ್ಟಿ ।
ಯಿಂ ಧರಣಿಪನ ಗಳವನೌಕುತಿರಲವನಿಪತಿ ।
ಇಂದಿದೇನೆನುತ ಮಿಡುಕಲ್ಕವನ ಕೊರಳೊತ್ತುತೇಳದಂತೆಡಗೆಡಹುತ ॥
ಮಂದಮತಿಯೌಷಧದಿ ಭೂಮಿಪಗೆ ಮೂರ್ಛೆಯಂ ।
ಹೊಂದಿಸುತಲೊಯ್ದು ಮಳಲೊಳು ಗುಂಡಿಯಂ ತೋಡು ।
ತಂದದರೊಳವನಿಪನ ಮಲಗಿಸುತ ಮಣ್ಮುಚ್ಚಿ ತಿರುಗಿದಂ ಹಯವೇರುತ ॥58॥

॥ **ರಾಗ ಪಂತುವರಾಳಿ – ಮಟ್ಟೆತಾಳ** ॥

ಆಯಿತೆನ್ನ ಕಾರ್ಯ ಹರಿ ಸ । ಹಾಯಗೈದನು ॥
ರಾಯನೆನಿಸಿ ಮೆರೆವಡದಕು । ಪಾಯಗೈವೆನು ॥ 59 ॥

ಅರಸನನ್ನು ಘೋರಸಿಂಹ । ತರಿದುದೆನ್ನುತ ॥
ಹರಹಿ ವಾರ್ತೆ ಧರೆಯನಾಳ್ವ । ತೆರನ ಗೈವೆ ತಾ ॥ 60 ॥

ಎಂದು ನೆನೆಯುತ್ತೈದುತಿರಲು । ಮುಂದೆ ಮುಂದಕೆ ॥
ಮಂದಮತಿಯು ದುರಭಿಲಾಷೆ । ಯಿಂದ ನಗರಕೆ ॥ 61 ॥

॥ **ಸಾಂಗತ್ಯ – ರೂಪಕತಾಳ** ॥

ಕಾಡಿನೊಳಿತ್ತ ಕೈರಾತಸಮೂಹವು ।
ಆಡಿ ಬೇಟೆಯ ರಾಜನಿರವ ॥
ನೋಡದೆ ವೇಳೆಯಾಯ್ತೆನುತರಸುತ್ತಲೆ ।
ಕೂಡಿ ಮಾರ್ಬಲಸಹ ಪುಡುಕಿ ॥ 62 ॥

ಎತ್ತಲೋ ಮೃಗವ ಬೆಂಬತ್ತಿ ಮಾರ್ಗವದಪ್ಪಿ ।
ತೆತ್ತಲೈದನೊ ಮಂತ್ರಿ ಸಹಿತ ॥
ಗೊತ್ತರಿಯದೆನುತ್ತ ಸುತ್ತುತ್ತೈತರೆ ಕಾಡೊ ।
ಳಿತ್ತಲಮಾತ್ಯ ಗೋಚರಿಸೆ ॥ 63 ॥

ಅರಸನೆಲ್ಲಿಹನೋರ್ವ ಮರಳಿದುದೆಲ್ಲಿಂದ ।
ಅರುಹೆನೆ ಸಚಿವನಾಕ್ಷಣದಿ ॥
ಮರುಕವ ನಟಿಸುತ್ತಲೊರೆದ ನಂಬಿಗೆಯಹ ।
ತೆರದಿ ಕಪಟವ ನಿರ್ಧರಿಸಿ ॥ 64 ॥

॥ **ರಾಗ ನೀಲಾಂಬರಿ – ರೂಪಕತಾಳ** ॥

ಕೇಳಿರಿ ಧರಣಿಪಗೊದಗಿದ ।
ಗೋಳನು ಪೇಳುವಡೆನ್ನಯ ।

ನಾಲಗೆ ತಡವರಿಪುದು ಕೈ ।
ಕಾಲಿದು ನಡುಗುವುದು ॥ 65 ॥

ಕರಡಿಯ ಬೆಂಬತ್ತುತ ನೃಪ ।
ತೆರಳಲು ಬೆಂಗಡೆ ಪೋದೆನು ।
ವರ ಕೇಸರಿಯಡ್ಡೈಸುತ ।
ಬರಲರಸನ ಪಿಡಿದು ॥ 66 ॥

ಥಟ್ಟನೆ ಕೊಂಡೊಯ್ಯಲು ಬೆ ।
ನ್ನಟ್ಟಿದೆ ಬಿಡಿಸಲಿಕರಸನ ।
ನಟ್ಟಡವಿಯೊಳೆತ್ತೈದಿತೊ ।
ಗುಟ್ಟರಿಯದೆ ಬಂದೆ ॥ 67 ॥

ಇಂತಹ ಧಾರ್ಮಿಕ ಧರಣಿಪ ।
ನಂ ತಾ ಮರೆದೆಂತಿರ್ಪೆನು ।
ಗೊಂತರಿಯೆನು ಮುಂದಕೆ ಭೂ ।
ಕಾಂತೆಗೆ ಗತಿ ಯಾರು ॥ 68 ॥

ಎಂದಾ ಮಂತ್ರಿಯು ನಂಬಿಕೆ ।
ಹೊಂದುವ ತೆರದಲಿ ಗೋಳಿಡ ।
ಲಂದವರೆಲ್ಲರು ಹಲುಬುತ ।
ಬಂದರು ಪುರವರಕೆ ॥ 69 ॥

॥ **ರಾಗ ಭೈರವಿ – ಝಂಪೆತಾಳ** ॥

ಪಟ್ಟಣಕೆ ಬಂದೆಲ್ಲ । ರೊಟ್ಟಾಗಿ ಜನಪತಿಗೆ ।
ನಟ್ಟಡವಿಯೊಳಗಾದ । ಗುಟ್ಟನರುಹಿಸಲು ॥ 70 ॥

ಕೇಳಿ ಪುರಜನರೆಲ್ಲ । ಗೋಳಿಡುತ್ತಿರೆ ಮಂತ್ರಿ ।
ತಾಳಿ ಸೈರಣೆ ಮುಂದೆ । ಪೇಳಿ ಫಲವೇನು ॥ 71 ॥

ಮುಂದೀ ಧರಿತ್ರಿಯನು । ಚಂದದಿಂದಾಳುವ ನ ।
ರೇಂದ್ರನಾರಿಹನಣುಗ । ನಿಂದು ಸಣ್ಣವನು ॥ 72 ॥

ಅದರಿಂದ ನಾನೆ ಸ । ದ್ಯದಿ ರಾಜ್ಯವಾಳುವೆನು ।
ಅಧಿಕಾರವೆನಗಿರಲಿ । ಬೆದರದಿರಿ ನೀವು ॥ 73 ॥

ಎಂದೊಡಂಬಡಿಸಿ ಧರ । ಣೀಂದ್ರನಾಸನವೇರಿ ।
ಮಂದಹಾಸದಿ ಚರರೊ । ಳೆಂದನು ಸುಬುದ್ಧಿ ॥ 74 ॥

ಹೊಡೆಸಿರ್ಪೆ ಡಂಗುರವ । ತಡೆಯದೀಕ್ಷಣ ರಾಜ್ಯ ।
ಕೊಡೆಯ ನಾನೆನುತ ಚರ । ರೊಡನೆ ನೇಮಿಸಿದ ॥ 75 ॥

॥ **ಭಾಮಿನಿ** ॥

ಇಂತು ಮಂತ್ರಿ ಸುಬುದ್ಧಿ ತನ್ನ ಕು ।
ತಂತ್ರವನು ಹೊರಗೆಡಹದವನೀ ।
ಕಾಂತನೆನಿಸುತ ಘನಮದೋನ್ಮತದಿಂದಲಿರುತಿರಲು ॥
ಕಾಂತೆ ನಯನಾವತಿಯು ಗೃಹದೊಳು ।
ಕಾಂತನಡವಿಗೆ ಪೋದವನು ಬರ ।
ದೆಂತು ತಡೆದನೆನುತ್ತಲಿರೆ ಚರನೊರ್ವ ಬಂದೆರಗಿ ॥ 76 ॥

॥ **ರಾಗ ಸಾವೇರಿ – ಅಷ್ಟತಾಳ** ॥

ಲಾಲಿಸೆನ್ನೊಡತಿ ನೀನು । ಬಂದಿಹ ಕಷ್ಟ ।
ಕೇಳಲಾರದೆ ಬಂದೆನು ॥
ನಾಲಿಗೆ ತಡವರಿಸುವುದಿಂಥ ದುರ್ವಾರ್ತೆ ।
ಪೇಳಲಂಜಿಕೆಯಪ್ಪುದು ॥ ಮುಂದಪ್ಪುದು ॥ 77 ॥

ಒಡೆಯರೀ ದಿನ ಕಾಡಿಗೆ ॥ ಪೋಗಿರಲು ಘೋ ।
ರಡವಿಯೊಳ್ ಮೃಗಬೇಟೆಗೆ ॥
ಒಡನೊಂದು ಸಿಂಹ ಬಂ । ದಡಗಟ್ಟುತರಸನ ।
ಬಿಡದೆ ಕೊಂಡೊಯ್ದುತಂತೆ ॥ ಕಾಡೊಳು ಮುಂತೆ ॥ 78 ॥

ಜೊತೆಗೈದ ಮಂತ್ರೀಶನು । ಬೆನ್ನಟ್ಟುತ ।
ಖತಿಯೊಳು ಸಿಂಹವನು ॥
ಹತಿಸಲಾರದೆ ಪೋದ । ಗತಿಯರಿಯದೆ ಪಿಂತೆ ।
ವ್ಯಥಿಸುತ್ತ ಬಲಸಹಿತ ॥ ಬಂದವನಿತ್ತ ॥ 79 ॥

ಮುಂದಿನ್ನು ಧರೆಯಾಳುವ । ವಿಕ್ರಮಿಯಿಲ್ಲ ।
ಎಂದೇರಿ ವಿಷ್ಟರವ ॥
ಇಂದಿನಿಂದೆನ್ನಾಜ್ಞೆ । ಯೆಂದು ಡಂಗುರ ಹೊಯ್ಸಿ ।
ಚೆಂದದೊಳಿಹ ಸಚಿವ ॥ ಹೀಗಾದುದವ್ವಾ ॥ 80 ॥

॥ **ಕಂದಪದ್ಯ** ॥

ಚರನೆಂದಾ ದುರ್ವಾರ್ತೆಯ ।
ತರುಣೀಮಣಿ ಕೇಳ್ದು ತಕ್ಷಣದಿ ಕೆಡೆದಿಳೆಯೊಳ್ ॥
ಪೊರಳುತ ಮೂರ್ಛಿಸುತೆಚ್ಚರಿ ।
ತುರುಘನತರಶೋಕದಿಂದೆ ಹಾಯೆನುತೊರೆದಳ್ ॥ 81 ॥

॥ ರಾಗ ಆನಂದಭೈರವಿ – ಏಕತಾಳ ॥

ಹಾ ಪ್ರಿಯಾ ಇಂತಗಲುತೆನ್ನ ।
ಸುಪ್ರತಾಪದಿಂದ ವನಕೆ ।
ಪೋದೆಯಾ । ಸಿಂಹ । ಕಾದೆಯಾ ॥ ೮೨ ॥

ಪೇಳ್ದನಾ ದುಃಶಕುನವದನು ।
ಕೇಳ್ದು ನರದೌರ್ಬಲ್ಯವೆಂದು ।
ನಿಂದಿಸಿ । ಪೋದೆ । ಹೊಂದಿಸಿ ॥ ೮೩ ॥

ದುರ್ಗತಿ ಬಂದೊಗಿತಿಂತು ।
ನಿರ್ಗತಿಕಳಾಗುತೆಂತು ।
ಬಾಳಲಿ । ಹೇಗೆ । ತಾಳಲಿ ॥ ೮4 ॥

ಬಾಲಗಿನ್ನು ಸಣ್ಣಪ್ರಾಯ ।
ಕೇಳುವರಿನ್ನಿಲ್ಲ ಬಾಯ ।
ಹೊಯ್ದೆಯಾ । ಕೊರಳ । ಕೊಯ್ದೆಯಾ ॥ ೮5 ॥

ಪಾಪಿ ಮಂತ್ರಿ ಮನದಿ ಬಯಸಿ ।
ದರ್ಾ ಫಲಕ್ಕೈಗೂಡಿತವನ ।
ಯೋಗವು । ಪುಣ್ಯ । ಭಾಗವು ॥ ೮6 ॥

॥ ಭಾಮಿನಿ ॥

ದೂರಲಾರೊಡನೆನ್ನ ದುರ್ವಿಧಿ ।
ಈರಸೆಯೊಳಿನ್ನೆಷ್ಟು ಕಷ್ಟವು ।
ಸೇರಲಿಹುದೋ ಹರನೆ ಬಲ್ಲನೆನುತ್ತ ಹಲುಬುತಲಿ ॥
ನಾರಿಮಣಿಯಿರಲೀಚೆಯೊಳು ಗಂ ।
ಭೀರದೊಳು ಸಚಿವೇಂದ್ರ ಕುಳಿತಾ ।
ನೀರಜಾಕ್ಷಿಯ ಮೇಲೆ ದುರ್ಮನವೆಳೆಸುತಿಂತೆಂದ ॥ ೮7 ॥

॥ ರಾಗ ಸೌರಾಷ್ಟ್ರ – ತ್ರಿವುಡೆತಾಳ ॥

ಭಳಿರೆ ಎನ್ನ ಸಮಾನರಾರಿಹ ।
ರಿಳೆಯೊಳಾನೇ ಭಾಗ್ಯವಂತನು ।
ಫಲಿಸಿತೆನ್ನಯಭೀಷ್ಟ ಸಿಲುಕಿದು ।
ದಿಳೆಯು ಸುಖದಿ ॥ ೮೮ ॥

ಪಟ್ಟವೇರಿದ ಮೇಲೆ ರಾಜನ ।
ಪಟ್ಟದರಸಿಯನಾಳದಿರ್ದರೆ ।

ಇಷ್ಟು ದೊರಕಿದಕೇನು ಸಫಲತೆ ।
ಗೊಟ್ಟುದಾಯ್ತು ॥ 89 ॥

ಪೋಗಿ ಮಾತಾಡಿಸುತವಳ ಮನ ।
ಹೇಗದಾದರು ಒಲಿಸಿ ರಮಿಸುವೆ ।
ನೀಗ ತೆರಳುವೆನೆನುತ ಪೊರಟು ಸ ।
ರಾಗದಿಂದ ॥ 90 ॥

ಬಂದು ಸಜ್ಜಾಲಯಕೆ ಮಂಚದಿ ।
ಕಂದಿದಾನನದಿಂದ ದುಃಖಿಸು ।
ತಿಂದುಮುಖಿ ಮಲಗಿರಲು ನುಡಿಸಿದ ।
ನಂದು ಮುದದಿ ॥ 91 ॥

॥ ರಾಗ ಶಂಕರಾಭರಣ – ಅಷ್ಟತಾಳ ॥

(ಧಾಟಿ: ಮಾತನಾಡೋ ಮಮಪ್ರಾಣನಾಥ– ಎಂಬಂತೆ)

ಮೋಹನಾಂಗಿ ಮರುಗುವುದೇನೇ ।
ಬಾಹನೆ ಮಡಿದಿರ್ದ ಪತಿ ಹಂಸಯಾನೆ ।
ದುಃಖಿಪೆ ಬರಿದೇನೇ । ಸೈ । ರಿಸು ಶುಕಗಾನೆ ॥ 92 ॥

ವಿಧಿಲಿಖಿತವ ಮೀರಲದಕಾರಿಗಹುದೆ ।
ಸದನದೊಳಿರ್ದರು ಬಿಡದದು ಮುಗುದೆ ।
ವ್ಯ । ರ್ಥದಿ ಮರುಗುವುದೆ । ಸಾ । ಕಿದು ಬಿಡು ಬರಿದೆ ॥ 93 ॥

ಇದನರಿತೆಲ್ಲ ದುಗುಡವ ನೀ ಬಿಟ್ಟು ।
ಮುದದಿಂದ ಸುಖದ ಬಾಳುವೆಗೆಡೆಗೊಟ್ಟು ।
ಬಾ । ಳಲಿಕೊಂದು ಗುಟ್ಟು । ಪೇ । ಳುವೆ ಮನಸಿಟ್ಟು ॥ 94 ॥

ಗತಿಯಿಲ್ಲದಿಳೆಗೆ ಭೂ । ಪತಿಯು ನಾನಾದೆ ।
ಪತಿ ನಿನಗಿಲ್ಲದನಾಥೆ ನೀನಾದೆ ॥
ನೋ । ಡುವರಿಲ್ಲ ಬಾಧೆ । ನಾ । ನಿದೊ ಪೇಳ್ವೆ ಬೋಧೆ ॥ 95 ॥

ಎಂದು ಮಂತ್ರಿಯು ಪೇಳು । ವಂದವ ತಿಳಿದು ।
ಚಂದಿರಮುಖಿ ಶೋಕವನ್ನು ಹಿಂದುಳಿದು ।
ಮಂ । ಚವ ಮೆಲ್ಲನಿಳಿದು । ಪೇ । ಳ್ದಳು ಲಜ್ಜೆಗಳೆದು ॥ 96 ॥

॥ **ರಾಗ ಪಂತುವರಾಳಿ – ಮಟ್ಟೆತಾಳ** ॥

ಸಾಕು ಮಂತ್ರಿ ಬಲ್ಲೆ ನಿನ್ನ । ಕಾಕುಬೋಧೆಯ ॥
ನೀ ಕುಟಿಲದಿ ಪತಿಯ ಜೊತೆಯೊ । ಳೇಕೆ ಪೋದೆಯ ॥ 97 ॥

ಸಿಂಹವೆಂಬ ನೆವನದಿಂದ । ಲೆನ್ನ ಪತಿಯನು ॥
ಗಂಹರದಲಿ ಕೊಂದು ವಶವ । ಗೈದೆ ಕ್ಷಿತಿಯನು ॥ 98 ॥

ಗತಿಯದಿಲ್ಲವೆಂದು ಎನಗೆ । ಹಿತವ ಪೇಳ್ವೆಯ ॥
ಮತಿಯ ಮರೆತು ಕೆಡಿಸಲಾರೆ । ಎನ್ನ ಬಾಳ್ವೆಯ ॥ 99 ॥

॥ **ರಾಗ ಸುರುಟಿ – ಏಕತಾಳ** ॥

ಸುಮನೋಹರೆ ಕೇಳೆ । ಮನದೊಳು । ಭ್ರಮಿಸದೆ ಗುಣಶೀಲೆ ॥
ಮಮತೆಯನಿಡು ಅನುಮಾನಿಸದೆನ್ನಲಿ ।
ಕ್ಷಮೆಯರಸನು ಹಿತವಿರೆ ಕೊಲೆಗೈವೆನೆ ॥ 100 ॥

ಅರಸನಳಿದನೆನುವ । ಕೊರಗಿನೊ । ಳೊರೆವೆಯರಿಯದನುವ ॥
ಸರಸಿಜಮುಖಿ ಬೇ । ಸರಿಸೆನು ತವನುಡಿ ।
ಚಿರುಸಾದರು ಸೈ । ರಿಸಿ ನಿನಗೊರೆವೆನು ॥ 101 ॥

ಹಿತವಾದವ ಪೇಳ್ವೆ । ಎನ್ನಯ । ಜೊತೆಗೂಡುತ ಬಾಳ್ವೆ ॥
ಸತತದಿ ಸುಖಗೊಳಿ । ಸುತ ಮನದೊಳಗಿಹ ।
ವ್ಯಥೆಯ ತ್ಯಜಿಸಿ ಜೀ । ವಿತ ಮುದಗೊಳಿಸೆಲೆ ॥ 102 ॥

॥ **ಸಾಂಗತ್ಯ – ರೂಪಕತಾಳ** ॥

ಬರಿದೆನ್ನನೇಕೆ ಪೀಡಿಪೆ ಸಚಿವೇಂದ್ರನೆ ।
ತರವಲ್ಲ ತೆರಳು ಪಿಂತಿರುಗಿ ॥
ದುರಹಂಕಾರದೊಳೆನ್ನ ಗೋಳುಗುಟ್ಟಿಸದಿರು ।
ಕರಮುಗಿದೊರೆವೆ ದಮ್ಮಯ್ಯಾ ॥ 103 ॥

ಏನನೆಂದರು ನಿನ್ನ ಬಿಡುವವನಲ್ಲ ದು ।
ಮ್ಮಾನವ ಬಿಡು ಕಂಜನೇತ್ರೆ ॥
ನೀನೆನ್ನ ವಶದಿ ಸಿಕ್ಕಿಹೆ ತಪ್ಪಲೆಡೆಯನು ।
ಕಾಣೆನೆನ್ನನು ಪೊಂದಿ ಸುಖಿಸು ॥ 104 ॥

ಎನಲಂಜುತಂಗನೆಯೆನಿತಾದಡೀತನೆ ।
ನ್ನನು ಬಿಡನೆಂದು ಪಿಂತಿರುಗೆ ॥
ಕನಲಿ ಬಲಾತ್ಕಾರದಿಂದಡ್ಡಗಟ್ಟುತ ।
ಘನಮದೋನ್ಮತದಿಂದಲವನು ॥ 105 ॥

ಬಿಡೆಬಿಡೆ ಮುಂದಡಿ ಇಡದಿರೆಂದಡಹಾಯ್ದು ।
ಮುಡಿಗೆ ಕೈಯಿಕ್ಕಿ ಭೂಮಿಯಲಿ ॥
ಕೆಡಹಲು ಮರುಗಿ ಗೋಳಾಡುತೆಡೆಗಾಣದೆ ।
ಮಡದಿಯೊರೆದಳಿಂತು ಹಲುಬಿ ॥ 106 ॥

॥ **ಭಾಮಿನಿ** ॥

ವೀರನೆನ್ನೊಡನಿನಿತು ನಿಷ್ಠುರ ।
ದೋರಿದೆಯ ನೀನರಿಯದವನೆ ಮ ।
ನೋರಮಣನಳಿದಿರ್ದ ದುಃಖದೊಳಿರ್ಪೆನೆಂಟುದಿನ ॥
ಸೈರಿಸೆನುತರುಹಲ್ಕೆ ಮನದಿ ವಿ ।
ಚಾರಿಸುತ ನಿಜವೆಂದು ಸಚಿವನು ।
ನಾರಿಯನು ಬಿಟ್ಟೆಂದನಧಿಕ ಕಠೋರದುಕ್ತಿಯಲಿ ॥ 107 ॥

॥ **ರಾಗ ಸೌರಾಷ್ಟ್ರ – ತ್ರಿವುಡೆತಾಳ** ॥

ತರುಣಿ ಕೇಳೀಗೆಂದ ನುಡಿ ಮನ ।
ವರಿಕೆಯಾದುದು ಆಡಿದವಧಿಯ ।
ವರೆಗೆ ಬಿಡುವೆನು ತಪ್ಪಿದರೆ ನಿ ।
ಷ್ಠುರಣದಿಂದ ॥ 108 ॥

ತೋರುವೀ ಖಡುಗದೊಳು ನಿನ್ನ ಕು ।
ಮಾರಸಹ ದಿಗುಬಲಿಯ ಕೊಡುವೆನು ।
ಮೀರದಿಹುದೆನ್ನಾಜ್ಞೆಯೆನುತ ಕ ।
ಠೋರ ನುಡಿದು ॥ 109 ॥

ತಿರುಗಿದನು ಸಚಿವೇಂದ್ರನಿತ್ತಲು ।
ತರುಣಿಯತಿದುಗುಡವನು ತಾಳುತ ।
ಹರಹರೆನ್ನಯ ವಿಧಿಯೆನುತ ಮನ ।
ಮರುಗುತಂದು ॥ 110 ॥

॥ **ರಾಗ ನೀಲಾಂಬರಿ – ರೂಪಕತಾಳ** ॥

ಹರಹರ ಮುಂದೇಂಗೈವೆನು ।
ದುರುಳನು ಬಿಡನೆಂದಿಗು ದಿಟ ।
ಮರುಗುತ ಮುಂದಿನ ಮಾರ್ಗವ ।
ನರಸದೆ ತಾನಿರಲು ॥ 111 ॥

ತರಳನನಿಟ್ಟರೆ ಮುಂದಕೆ ।
ಧರೆಯೊಡೆತನಕಡೆರೆನ್ನುತ ।
ತರಿಯದೆ ಬಿಡನಣುಗನ ನಿ ।
ಷ್ಠುರದಲಿ ಸತ್ಯವಿದು ॥ 112 ॥

ವಲ್ಲಭನಳಿದಿರೆ ತರಳನ ।
ಕೊಲ್ಲಿಸುತೆನ್ನಯ ದೇಹವ ।
ಖುಲ್ಲನಿಗೊಪ್ಪಿಸಿ ಬಾಳುವ ।
ಆಲ್ಲದನರಿತೀಗ ॥ 113 ॥

ಎಲ್ಲಿಗೆ ಪೋಗಲಿ ಕಾಯುವ ।
ರೆಲ್ಲಿಹರರಿಯೆನನಾಥೆಯ ।
ಆಲ್ಲವೆ ಕರುಣೆಯು ಬಾರದೆ ।
ಘುಲ್ಲಶರಾಂತಕನೆ ॥ 114 ॥

ಬೆದರುತಲರಮನೆಯೊಳಗಿ ।
ರ್ಪುದರಿಂದಾ ಜನರರಿ ।
ಯದತೆರದಿಂದಣುಗ ಸಮೇ ।
ತದಿ ವಿಪಿನಕೆ ಪೋಗಿ ॥ 115 ॥

ಹುದುಗಿಹುದುತ್ತಮ ಮುಂದಕೆ ।
ವಿಧಿ ಗೈದಂತಹುದೆನ್ನುತ ।
ಸುದತಿಯು ಮನದಲಿ ನಿರ್ಧರಿ ।
ಸಿದಳತಿಧೈರ್ಯದಲಿ ॥ 116 ॥

॥ **ಸಾಂಗತ್ಯ - ರೂಪಕತಾಳ** ॥

ಇನಿತಾ ಕಾಮಿನಿ ತನ್ನ ಮನದಿ ನಿಶ್ಚಯ ಗೈದು ।
ತನಯಗೆಚ್ಚರವಾಗದಂತೆ ॥
ಘನನಿದ್ರೆಯೌಷಧಗೊಟ್ಟಣುಗನನೆತ್ತಿ ।
ಜನರರಿಯದ ತೆರದಿಂದೆ ॥ 117 ॥

ನಡುರಾತ್ರಿಯೊಳಗೋರ್ವಳೇ ಪೊರವಂಟೂರ ।
ಬಿಡುತಡವಿಯ ಸೇರುತಲ್ಲಿ ॥
ಕಡುಕ್ರೂರಮೃಗಗಳ ಧ್ವನಿಗಂಜಿ ಧೈರ್ಯವ ।
ಬಿಡದೆ ಮುಂದರಿದಳಂದಳುತ ॥ 118 ॥

ಮುಂದೆ ಮುಂದಕೆ ಕಾಡೊಳೈದುತಿರಲು ರವಿ ।
ಯಂದುದಿಸಲು ಬಸವವಳಿದು ॥
ಹೊಂದಿ ಮೂರ್ಛೆಯನೊಂದು ಋಷಿಯಾಶ್ರಮದ ಬಳಿ ।
ಸಂದು ಬಿದ್ದಳು ಬಾಲಸಹಿತ ॥ 119 ॥

॥ **ಭಾಮಿನಿ** ॥

ಇನಿತು ಕಾಮಿನಿಯಣುಗ ಸಹಿತಲಿ ।
ಘನತರಾಯಾಸದಲಿ ಬೀಳಲು ।
ಮುನಿಪನೈತಂದೇನಿದೇನೆಂದೆನುತ ಕರುಣದಲಿ ॥
ವನಿತೆಯನು ಮಾತಾಡಿಸಲು ನುಡಿ ।
ವನಿತು ಶಕ್ತಿಗಳುಡುಗಿರಲು ನಿಜ ।
ಮನೆಗೆ ಕರೆತಂದುಪಚರಿಸಿ ಸಾವರಿಸುತಿಂತೆಂದ ॥ 120 ॥

॥ **ರಾಗ ಯಮುನಾಕಲ್ಯಾಣಿ – ಅಷ್ಟತಾಳ** ॥

ಯಾರಮ್ಮ । ನೀನು । ಯಾರಮ್ಮಾ ॥ ಪ ॥
ಯಾರಮ್ಮಾ ನೀನಿಂತು ಘೋರಾಯಸದೊಳು ।
ಸಾರಿದೆ ನಿಶಿಯೊಳ್ ಕಾಂತಾರಮಧ್ಯದೊಳು ॥ ಅ. ಪ ॥

ದೊರೆಯರಸಿಯ ತೆರನಿರುವೆ ನೋಡಲಿಕೆ ।
ತರಳನನೊಡಗೊಂಡೀ ತೆರದಿ ಬರಲಿಕೆ ॥
ಪಿರಿದು ಸಂಕಷ್ಟವೇನಾರಿಂದ ಬಂತು ।
ಅರುಹಮ್ಮ ಬೆದರದಿರೆನ್ನೊಡನಿಂತು ॥ 121 ॥

ಮುನಿಪನೆನಗೆ ದೀರ್ಘಜಟಿಯೆಂಬ ಪೆಸರು ।
ಅನುಮಾನಗೊಳದಿರು ಧೈರ್ಯದಿಂದುಸುರು ॥
ತನುವಿನಾಯಾಸವ ಮರೆತು ಸ್ವೈರಣೆಯ ।
ಅನುಕರಿಸುತ ಪೇಳು ಮನದ ಧೋರಣೆಯ ॥ 122 ॥

ತರಳನು ನಿದ್ದೆಯೊಳಿಹನನು ಪೊತ್ತು ।
ಇರುಳೊಳು ಬರುವಂತೇನೊದಗಿತಾಪತ್ತು ॥
ತರಳೆ ಪೇಳಂಜದಿರೆನಲತ್ಯಾದರದಿ ।
ಎರಗುತೆಂದಳು ಬಂದೆಡರನು ವಿಸ್ತರದಿ ॥ 123 ॥

॥ **ರಾಗ ಮಧುಮಾಧವಿ – ಏಕತಾಳ** ॥

ಚಿತ್ತವಿಸ್ಯೆ ಮುನಿಪೋತ್ತಮ ನೀನು ।
ಬಿತ್ತರಿಸುವೆನಾದ ವೃತ್ತಾಂತಗಳನು ॥

ಪೃಥ್ವಿಪ ಶಿವವರ್ಮನೆನ್ನಯ ಪತಿಯು ।
ಸತ್ಯದಿಂದಿರೆ ಮಂತ್ರಿಯೋರ್ವ ದುರ್ಮತಿಯು ॥ 124 ॥

ಬೇಟೆಯ ನೆವದಿಂದಲೊಯ್ದೆನ್ನರಸನ ।
ಕೌಟಿಲ್ಯದಿಂ ಸಿಂಹ ಕೊಂಡೊಯ್ದ ನೆವನ ॥
ಆಟವ ಹೂಡಿಯೆನ್ನರಸನ ಕೊಂದು ।
ಪೀಠವನೇರಿ ತಾನೇ ರಾಜನೆಂದು ॥ 125 ॥

ದುರಹಂಕಾರದೊಳೆನ್ನ ಬಯಸಿ ಬಾಲಕನ ।
ಕೊರಳರಿವೆನ್ನದೊಳಿರಲಂಜಿ ಸುತನ ॥
ಇರುಳೊಳಾರರಿಯದಂದದಿ ಕರೆತಂದೆ ।
ತರುಣಿ ಎನ್ನಭಿಮಾನ ಕಾಯೊ ನೀ ತಂದೆ ॥ 126 ॥

॥ **ಭಾಮಿನಿ** ॥

ದಾರಿಗಾಣದನಾಥೆ ನಿಮ್ಮಡಿ ।
ಸೇರಿದೆನು ಸುಕುಮಾರ ಸಹಿತೆಮು ।
ಗಾರು ದಿಕ್ಕಿಲ್ಲದೆ ತವಾಶ್ರಮ ಹೊಂದಿಹೆವು ಮುಂದೆ ॥
ಭೂರಿ ಕರುಣದಿ ಹಸುಳೆ ಪ್ರಬಲತೆ ।
ಗೇರುವನಕೆಮ್ಮನು ಸಲಹಿ ಕೃಪೆ ।
ದೋರಬೇಕೆಂದೆರಗೆ ಸಂತೈಸುತ್ತ ಮುನಿನುಡಿದ ॥ 127 ॥

॥ **ರಾಗ ಬೇಗಡೆ - ಅಷ್ಟತಾಳ** ॥ **(ಏನಿದೂ ನಿಮ್ಮಲ್ಲಿ ಸಂವಾದ ಎಂಬಂತೆ)**

ಏಳು ಭಯಗೊಳಬೇಡ ನೀನಮ್ಮಾ । ಧೈರ್ಯವನು ಮನದೊಳು ।
ತಾಳು ಶ್ರೀಹರಿ ಕಾಯುವನು ನಿಮ್ಮ ॥
ಖೂಳ ಮಂತ್ರಿಯು ನಿಮ್ಮ ಹುಡುಕಿಸಿ ।
ಗೋಳುಗೊಡದಂದದಿ ಕೆಲವುದಿನ ।
ತಾಳಿಯಾಶ್ರಮದಿಂದ ಹೊರಗಡೆ ।
ಚೀಳದಿರಿ ಮುಂದೆಲ್ಲ ಪೇಳುವೆ ॥ 128 ॥

ಅತುಳಬಲಯುತನಹನು ತವಸುತನು । ಭಯಬೇಡವೀತಗೆ ।
ಹಿತದಿ ಕಲಿಸುವೆ ಸಕಲವಿದ್ಯೆಯನು ॥
ಕೃತಕ ಮಂತ್ರಿಯ ಹತಿಸಿ ತನ್ನಯ ।
ಪಿತನ ರಾಜ್ಯವನಾಳ್ವ ಮುಂದಕೆ ।
ವ್ಯಥಿಸದಿರು ಸೌಭಾಗ್ಯಯುತೆ ಗ್ರಹ ।
ಗತಿಯು ಕೆಲದಿನವಿಹುದು ಸೈರಿಸು ॥ 129 ॥

ಮುಂದಖಿಳಸೌಭಾಗ್ಯಸಂಪದವು । ತಾನಾಗಿ ದೊರಕುವು ।
ಬಿಂದುಮುಖಿ ಬಿಡು ಮನದಿ ಸಂಶಯವು ॥
ಎಂದೊಡಂಬಡಿಸಲ್ಕಣುಗ ಸಹಿ ।
ತಂದು ಮುನಿಯಾಶ್ರಮದೊಳಗೆ ಸುಖ ।
ದಿಂದಿರಲು ಬಳಿಕಿತ್ತಮಾತ್ಯನಿ ।
ಗೊಂದಿಸುತ ಭಯದಿಂದ ಚಾರನು ॥ 130 ॥

॥ **ರಾಗ ಕಾಪಿ – ಅಷ್ಟತಾಳ** ॥

ಕರುಣವಿಟ್ಟಾಲಿಸು ಜೀಯಾ । ಪೇಳ ।
ಲರಿದು ಮೋಸಗಳಾದುದಿದಕೇನುಪಾಯ ॥ ಪ ॥
ಅರಮನೆಯನು ಕಾಯುತಿರಲು । ನಮ ।
ಗರಿವಾಗದಂತೆ ವಂಚಿಸಿ ನಿನ್ನಿನಿರುಳು ॥
ಅರಸನರ್ಧಾಂಗಿ ಬಾಲಕನ । ಕೂಡಿ ।
ಪೊರಟೆತ್ತೈದಿದಳೆಂದು ಕಾಣೆವೀ ಹದನ ॥ 131 ॥

॥ **ರಾಗ ಮಾರವಿ – ಏಕತಾಳ** ॥

ಚಾರಕನೆಂದುದ ಕೇಳುತ ನೇತ್ರದಿ ।
ಕಾರುತ ಕೆಂಗಿಡಿಯ ॥
ಕೂರಸಿಯನು ಪಿಡಿದಾರುಭಟಿಸಿ ಖತಿ ।
ಯೇರುತಲಿಂತೆಂದ ॥ 132 ॥

ಹೊಡೆಯಿರಿವನ ಬಾಯ್ಬಡಿಕನ ವಂಚಿಸಿ ।
ಮಡದಿಯ ಹೊರಬಿಟ್ಟು ॥
ಕಡು ಸಂಭಾವಿತನಂದದಿ ಪೇಳ್ವೆಯ ।
ನಡೆ ಬಲ್ಲೆನು ಗುಟ್ಟು ॥ 133 ॥

ನಿನ್ನಂದದ ವಂಚಕರನು ಕಾವಲಿ ।
ಗಿನ್ನಿಡೆ ಭರವಸದಿ ॥
ಎನ್ನನು ಸಹ ಮುಂದೇಂ ಗೈವಿರೊ ಬಿಡೆ ।
ನೆನ್ನುತ ಖಡುಗದಲಿ ॥ 134 ॥

ತುಂಡರಿದಾತನ ಕೋಪದೊಳರಮನೆ ।
ಹೆಂಡಿರನೆಲ್ಲರನು ॥
ಕಂಡೋಡಿಸಿ ದಿಗ್‌ಭ್ರಮೆಯೊಳು ಯೋಚನೆ ।
ಗೊಂಡೆಣಿಸುತಲಿರ್ದ ॥ 135 ॥

॥ **ರಾಗ ತುಜಾವಂತು – ಮಟ್ಟೆತಾಳ** ॥

ಮೋಸವಾಯಿತು । ಬಿಟ್ಟು । ಮೋಸವಾಯಿತು ॥ ಪ ॥

ಮೋಸವಾಯಿತಂದು ಸತಿಯ ।
ಘಾಸಿಮಾಡದಣುಗಸಹಿತ ।
ಹೇಸಿ ಮಡದಿಯಾಹಳೆಂಬ ।
ಆಸೆಯಿಂದಲವಧಿಗೊಟ್ಟು ॥ 136 ॥

ಅಡಗಿಕೊಂಡರಿನ್ನಣುಗನ ।
ಹುಡುಕಿಕೊಲ್ಲದಿರಲು ಮುಂದೆ ।
ಪೊಡವಿಯೊಡೆತನಕ್ಕೆ ಕೇಡು ।
ಗೊಡದೆಬಿಡನು ಎಡೆಯನರಸಿ ॥ 137 ॥

ಏರಲಿಲ್ಲವಿನ್ನು ಪ್ರಾಯ ।
ವೇರುವನಕ ಬಿಟ್ಟರವನ ।
ವೈರಿಯಾಗಿ ಕೊನೆಗೆ ಕೇಡ ।
ತಾರದಿರನು ಬಿಡದೆ ಸೇಡ ॥ 138 ॥

॥ **ಭಾಮಿನಿ** ॥

ಎಂದು ಮನದೊಳು ಹಲವನೆಣಿಸುತ ।
ಲಂದು ಸಚಿವನು ಮನದಿ ಭಯವನು ।
ಹೊಂದಿ ಚಾರರ ಕರೆದು ದೇಶಗಳೆಲ್ಲ ಸಂಚರಿಸಿ ॥
ಸಂದುಗೊಂದುಗಳರಸಿ ಬಾಲನ ।
ತಂದು ಒಪ್ಪಿಸಿರೆನುತ ನೇಮಿಸಿ ।
ಮುಂದಿನಾಗಮವೆಣಿಸುತಿರುತಿರ್ದನು ನಿರಂತರದಿ ॥ 139 ॥

॥ **ರಾಗ ಕಾಂಭೋದಿ – ಝಂಪೆತಾಳ** ॥

ಇತ್ತ ಕಾನನದಿ ಮುನಿ । ಪೋತ್ತಮನ ಸೇವೆಯೊಳ ।
ಗರ್ತಿಯಿಂ ಸಕಲವಿದ್ಯೆಗಳ ॥
ನಿತ್ಯ ಕಲಿಯುತಲಿ ನರ । ಪಾತ್ಮಜಗೆ ಹದಿನೆಂಟು ।
ವತ್ಸರಗಳಾಗಲೊಂದಿನದಿ ॥ 140 ॥

ಅರಿತು ತನ್ನೊಳಗೆ ನಿಜ । ವರಿಯಲೆರಗುತ ಮಾತೆ ।
ಗರುಹಿದನು ಜನನಿ ಕೇಳವ್ವಾ ॥
ಪುರವ ಬಿಟ್ಟಿಲ್ಲಿ ಬಂ । ದಿರಲೇನು ತೊಡರು ಪಿತ ।
ನಿರವನಾನರಿಯೆವೀವರೆಗೆ ॥ 141 ॥

ಪಟ್ಟಣದೊಳಿಹನೊ ನಿನ್ನನು ಕೋಪದೊಳು ಕಾಡಿ ।
ಗಟ್ಟಿದನೊ ತಿಳಿಯೆನೀವರೆಗೆ ॥
ಸಿಟ್ಟೇನು ಪಿತಗೆ ಸರಿಗೊಳಿಪೆನೆನೆ ಸುತನಪ್ಪಿ ।
ಗುಟ್ಟನೆಂದಳು ಸುತನಿಗಳುತ ॥ 142 ॥

॥ **ರಾಗ ಸೌರಾಷ್ಟ್ರ – ಏಕತಾಳ** ॥

ಕಂದ ಕೇಳೆಮಗಿಂತು । ಬಂದಾಪತ್ತನು ಪೇಳ ।
ಲಿಂದೇನಹುದು ನಿನ್ನ । ತಂದೆಯೊಂದಿನದಿ ॥
ಮಂದಿ ಸಹಿತ ಬೇಟೆ । ಗೆಂದು ಮಂತ್ರಿಯ ಜೊತೆ ।
ಯಿಂದಡವಿಗೆ ಪೋಗ । ಲಂದು ಮೋಸದಲಿ ॥ 143 ॥

ದುಷ್ಟ ಸಚಿವ ರಾಜ । ಪಟ್ಟವೇರುವ ಮನ ।
ವಿಟ್ಟರಸನ ಕೊಂದು । ನಟ್ಟಡವಿಯಲಿ ॥
ಕೆಟ್ಟ ಕೇಸರಿಯಮೇ । ಲಿಟ್ಟಪವಾದವ ।
ಪಟ್ಟಣಕೈದೆಮ್ಮ । ವಿಷ್ಟರವೇರಿ ॥ 144 ॥

ದುರುಳನೆನ್ನೊಳು ಮೋಹ । ವಿರಿಸಿ ಪೀಡಿಸೆ ತಿರ ।
ಸ್ಕರಿಸುತಾರರಿಯದ । ತೆರದಿ ನೀ ಸಹಿತ ॥
ಪುರದೊಳಿರಲು ಕೊಲ್ಲ । ದಿರನೆಂದಿಲ್ಲಿಗೆ ಬಂದೆ ।
ವರ ಮುನಿಪನು ನಮ್ಮ । ಪೊರೆದನೀವರೆಗೆ ॥ 145 ॥

॥ **ಭಾಮಿನಿ** ॥

ಕುವರ ಕೇಳೀವರೆಗೆ ನೀ ಚಿ ।
ಕ್ಕವನು ನಿನಗಿದನರುಹಿ ಫಲವಿ ।
ಲ್ಲವಗಡಿಸಿದಾಪತ್ತಿಗತಿಧೈರ್ಯವನೆ ಮುಂದಿರಿಸಿ ॥
ದಿವಸಗಳೆವುತಲಿರ್ದೆ ಮುನಿಪುಂ ।
ಗವನ ನುಡಿಯನ್ನೊದಗಿಬಹ ಕಾ ।
ಲವ ನಿರೀಕ್ಷಿಪೆನೆನಲು ಕಿಡಿಗೆದರುತ್ತಲಿಂತೆಂದ ॥ 146 ॥

॥ **ರಾಗ ಭೈರವಿ – ಏಕತಾಳ** ॥

ಬಿಡು ಬಿಡು ಶೋಕವ ಜನನಿ । ಮನ ।
ಕಿಡದಿರು ಬೇಸರವನು ನೀ ॥
ಕೆಡುಕನು ಮಜ್ಜನಕನನು । ಕೊಂ ।
ದಿಡುಕಿದನೇ ದುರ್ಮದನು ॥ 147 ॥

ಹಿತಶತ್ರುತ್ವವ ಬಳಸಿ । ದು ।
ರ್ಮತಿ ರಾಜ್ಯಕೆ ಮನವೆಳಸಿ ॥
ಪಿತನೇರಿದ ವಿಷ್ಟರವ । ಏ ।
ರ್ವತಿಕಾಮುಕನೆಷ್ಟರವ ॥ 148 ॥

ಪಟ್ಟವನೇರಿದ ಮದದಿ । ಮನ ।
ಸಿಟ್ಟನೆ ಜನನಿಗೆ ಸದೆದೀ ॥
ದುಷ್ಟನದಟ ನಿಲಿಸದಿರೆ । ನಾ ।
ಪುಟ್ಟಿಯೆ ಫಲವೇನರರೆ ॥ 149 ॥

ಕೊಡಿಸಪ್ಪಣೆಯನು ತನಗೆ । ಆ ।
ದಡಿಗನ ತೀರಿಸಿ ಕೊನೆಗೆ ॥
ಅಡರುತ ಪೀಠವ ಪಿತನ । ಹಗೆ ।
ಯಡಗಿಪೆನೆನೆ ನಿಜಸುತನ ॥ 150 ॥

ಮನದುದ್ರೇಕವ ಕಂಡು । ನೃಪ ।
ವನಿತೆ ಮನದಿ ಮುದಗೊಂಡು ॥
ತನಯನನಪ್ಪುತ ಸಮಯ । ಅ ।
ಲ್ಲೆನುತೆಂದಳು ಸ್ಥೈರಣೆಯ ॥ 151 ॥

॥ ರಾಗ ನವರೋಜು - ಏಕತಾಳ ॥

ಸೈರಿಸು ಸೈರಿಸು ಮಗನೆ । ಸುವಿ ।
ಚಾರದೊಳೀ ಕಾರ್ಯವನೆ ।
ಪೂರೈಸುವುದೊಳಿತವಸರಗೊಳದಿರು ।
ಸೇರಿದೆ ಬಲವಧಿಕಾರದೊಳವನಿಗೆ ॥ 152 ॥

ಥಟ್ಟನೆ ಪೋಗುವಡರಿದು । ಛಲ ।
ಗಟ್ಟುತ ನೀ ಮುಂದರಿದು ॥
ದುಷ್ಟನ ಕೆಣಕುತಲೋರ್ವನೆ ಪೋದರೆ ।
ಕಷ್ಟವು ಸೈರಿಸು ಕಾಲನಿರೀಕ್ಷಿಸು ॥ 153 ॥

ಬರುತಿದೆ ಸದ್ಯದಿ ಕಾಲ । ನೀ ।
ನರಿತು ವಿಚಾರಿಸು ಬಾಲ ॥
ದುರುಳನ ಕೊಲುವೊಡುಪಾಯದಿ ಮಾರ್ಬಲ ।
ವೆರಸುವಡಲ್ಲಿಯವರೆಗಾಲೋಚಿಸು ॥ 154 ॥

॥ **ಭಾಮಿನಿ** ॥

ಕಂದ ಕೇಳ್ಳೈ ಪಿಂದೆ ಮುನಿವರ ।
ನೆಂದ ವಚನಗಳಹುದು ನಿನ್ನಿಂ ।
ಪೊಂದುವನು ಮೃತಿ ದುರುಳ ನಿನ್ನಯ ಪಿತನ ದೊರೆತನವು ॥
ಮುಂದೆ ದೊರಕುವುದನಕ ಸೈರಿಸು ।
ದೆಂದೊರೆದ ನುಡಿಯಂತೆ ತಾಳಿಕೊ ।
ಯೆಂದೊಡಂಬಡಿಸಲ್ಕೆ ಸಮಯ ನಿರೀಕ್ಷಿಸುತಲಿರ್ದ ॥ 155 ॥

॥ **ಕಂದಪದ್ಯ** ॥

ಇತ್ತಲು ಸಚಿವನ ಚಾರರು ।
ಸುತ್ತುತ ಗಿರಿವನದೇಶದೊಳಣುಗನ ಸುಳಿವಂ ॥
ಗೊತ್ತರಿಯದೆ ಬಂದೆರಗುತ ।
ಚಿತ್ತರಿಸಿದರೆಲ್ಲವಮಾತ್ಯನೊಳತಿಭಯದಿಂ ॥ 156 ॥

॥ **ರಾಗ ಮುಖಾರಿ – ಏಕತಾಳ** ॥

ಪೇಳ್ವುದ ಕೇಳು ಚಿತ್ತವಿಟ್ಟು । ಕರುಣದಿ ದಯವಿಟ್ಟು ।
ತಾಳಬಾರದು ಮನದಿ ಸಿಟ್ಟು ॥
ಬಾಲನ ಮಾತೆಯ ಸಹಿತಲಿ ಗಿರಿವನ ।
ಮೂಲೆಮೂಲೆಗಳನರಸಿದರೆಲ್ಲಿಯು ।
ಪೇಳಲಂಜುವೆವು ನೋಡಿದರಿಲ್ಲವು ।
ಪಾಲಿಪುದೆನುತಲಿ ಕಾಲಿಗೆರಗಿದರು ॥ 157 ॥

॥ **ರಾಗ ಕೇದಾರಗೌಳ – ಝಂಪೆತಾಳ** ॥

ಚಾರರೆಂದುದ ಕೇಳುತ । ಮನದೊಳಗೆ ।
ಭೂರಿ ಕ್ರೋಧವ ತಾಳುತ ॥
ಸಾರಿರೆನ್ನಿದಿರು ನಿಲದೆ । ಬಾಲನ ವಿ ।
ಚಾರವನು ಕಂಡರುಹದೆ ॥ 158 ॥

ವ್ಯರ್ಥವಾಯಿತು ನಿಮ್ಮನು । ಕಳುಹಿದು ನಿ ।
ರರ್ಥ ಮೊದಲೇ ಬಲ್ಲೆನು ॥
ಸ್ವಾರ್ಥದಿಂದಾನೆ ಹುಡುಕಿ । ತಹೆನೆನುತ ।
ಧೂರ್ತ ಪೊರವಂಟ ಮಿಡುಕಿ ॥ 159 ॥

ಕೇರಿಕೇರಿಯೊಳರಸುತ । ಮನೆಮನೆಯ ।
ಸೂರೆಮಾಡುತ ಬೆರಸುತ ॥

ಊರೊಳೆಲ್ಲಿಯು ಕಾಣದೆ । ಮನದಿ ಭಯ ।
ವೇರಿ ತಿರುಗಿದ ಮಾಣದೆ ॥ 160 ॥

॥ **ಭಾಮಿನಿ** ॥

ಇಂತು ಸುಳಿವರಿಯದಿರೆ ಭಯದೊಳು ।
ಭ್ರಾಂತರಂದದಿ ತಿರುಗಿ ನಿಶಿಯೊಳ ।
ದೆಂತು ನೃಪನೈತಂದು ಪೀಡಿಪನೆಂದು ಭ್ರಮೆಗೊಳುತ ॥
ಚಿಂತಿಸುತ್ತಿರಲವನ ಕಣ್ಣಿಗೆ ।
ನಿಂತು ಭೀಕರರೂಪದೊಳಗಿದಿ ।
ರಾಂತು ಬೆನ್ನಟ್ಟುತ್ತ ಬಂದಂತಾಗೆ ಭಯಗೊಳುತ ॥ 161 ॥

॥ **ರಾಗ ಮಾರವಿ – ಏಕತಾಳ** ॥

ಈ ತೆರದೊಳಗಾ । ಭೂತಾಕಾರವು ।
ಪಾತಕಿಯನು ಬೆ । ನ್ನಾತುಬರುತಲಿರೆ ।
ಕಾತರಿಸುತ ನಿ । ಶ್ಚೇತನನಾಗಿ ಮು ।
ಹಾತಿಭಯದಿ ದು । ರ್ನೀತನು ನಡುಗಿ ।
ಬಿಡುತಿರ್ದ ॥ 162 ॥

ಹರಹರ ಮಡುಹಿದೆನರಸನನ್ಮಾತಕೆ ।
ಬೆರಸುತ ಪ್ರೇತವು । ಇರಗೊಡದೆನುತಲಿ ।
ತಿರುಗುತ ವೀಕ್ಷಿಸು । ತರಮನೆಗೈದಲು ।
ಮರೆಯಾದುದು ಭೀಕರತೆಯಾ ಕ್ಷಣದಿ ।
ಏನಾನೆಂಬೆ ॥ 163 ॥

॥ **ವಾರ್ಧಕ** ॥

ಮನದ ಭೀತಿಯೊಳು ತಿರುತಿರುಗಿಬಹುದೆಂದೆನುತ ।
ಜನಪನಂಜಿಕೆಯೊಳಗೆ ಬೊಂಬಾಳದೀವಿಗೆಯ ।
ನಿನದುದಯ ತನಕವಿರಿಸುತಲಿನಜ್ವಾಲೆಯಲಿ ಘನನಿದ್ರೆಯಂ ತ್ಯಜಿಸುತ ॥
ಜನನಿ ಸುತರಿನ್ನೆತ್ತಲಡಗಿಹರೊ ತನಗಿನ್ನು ।
ತನಯನಿಂ ಕೇಡೆಂದಿಗೈತಹುದೊ ತಿಳಿಯೆನೆನು ।
ತನುದಿನದಿ ನೆನೆಯುತ್ತ ಜಾಗ್ರತೆಯೊಳಿರುತಿರ್ದ ಜನಪನಣುಗನ ಭೀತಿಗೆ ॥ 164 ॥

॥ **ರಾಗ ಮಾರವಿ – ಏಕತಾಳ** ॥

ಇತ್ತಲರಣ್ಯದಿ । ಪೃಥ್ವೀಶನನ ಸುತ ।
ನಿತ್ಯದ ತೆರನಂತೆ ॥

ಸುತ್ತುತ ವನ ಮುನಿ । ಪೋತ್ತಮನಿಂಗೆ ಸ ।
ಮಿತ್ತು ಕುಶವ ತರಲು ॥ 165 ॥

ತಿರುಗುತ ಮಾರ್ಗವ । ತೊರೆಯುತ ಬಿಸಿಲಿನ ।
ಉರಿಯೊಳು ಬಸವಳಿದು ॥
ಪಿರಿದಾಯಾಸದೊ । ಳರಸುತ ಜಲವನು ।
ತೆರಳಿದ ಮುಂದರಿದು ॥ 166 ॥

ದೂರದ ಗಿರಿಯನು । ಸೇರುತದರ ಬಳಿ ।
ನೀರಿರುವುದ ಕಂಡು ॥
ಸಾರುತ ಕೈಕಾಲ್ । ಮೋರೆದೊಳೆದು ತೃಷೆ ।
ತೀರಿಸಿ ಮುದಗೊಂಡು ॥ 167 ॥

ಕುಳಿತಿರಲೊಂದೆಸೆಯೊಳು ಬೆಂಗಡೆಯೊಳು ।
ಚಲಿಸಿದ ತೆರನಾಗೆ ॥
ಫಳಿಲನಿದೇನೆಂದಿರೆ ಗೋಚರಿಸಿತು ।
ಚೆಲುವ ಹಯವು ಕಣ್ಗೆ ॥ 168 ॥

ಕಂಡಾ ವಾಜಿಯ ನೃಪಸುತ ವಿಸ್ಮಯ ।
ಗೊಂಡಿದು ಪಳಗಿದೊಲು ॥
ಕಂಡಂತಿದೆ ಹೇಗಿಲ್ಲಿಗೆ ಬಂತೀ ।
ಗೊಂಡಾರಣ್ಯದಲಿ ॥ 169 ॥

॥ **ಭಾಮಿನಿ** ॥

ಆರದೆಲ್ಲೆಂದರಿಯೆ ತುರಗವಿ ।
ದಾರು ತಂದಡವಿಯಲಿ ಬಿಟ್ಟ ಸ ।
ವಾರನಾರಿರಬಹುದು ಕರುಣಾರಹಿತನಲ್ಲದಡೆ ॥
ಆರೊ ತುರಗವಿದೇರಿ ಬರುತಿರೆ ।
ಕ್ರೂರಮೃಗಕಾಹಾರವಾದರೊ ।
ವಾರುಹವಿದೊಂದೆಂತು ಜೀವಿಸಿತೀಯರಣ್ಯದಲಿ ॥ 170 ॥

॥ **ವಾರ್ಧಕ** ॥

ಎಂದೆಣಿಸುತಿರಲವನ ಸನಿಹಕ್ಕೈತಂದು ಸೇರ ।
ಗಂದುಡುಕುತೆಳೆಯಲೇಕೆಂದು ವಿಸ್ಮಯಗೊಳುತ ।
ಲಂದದರ ಜೊತೆಯೊಳ್ಕೈತರಲಾ ಸರೋವರದ ತಡಿಯೊಳಿರುತಿಹ ಮಳಲನು ॥

ಚೆಂದದಿಂ ಚರಣದಲಿ ಕೆದರುತಿರಲಚ್ಚರಿಯೊ ।
ಆಂದಿದೇನೆಂದರಿಯದವನಿಪಾತ್ಮಜ ಕಯ್ಯೊ ।
ಆಂದು ಮಳಲಂ ತೆಗೆಯುತಿರಲು ಘಮಘಮಿಸುವ ಸುಗಂಧಕಂ ಬೆರಗಾಗುತ ॥ 171 ॥

॥ **ರಾಗ ಕಾಂಭೋಜಿ – ಝಂಪೆತಾಳ** ॥

ಮಳಲೊಳೀ ಪರಿ ಸುಗಂಧವದೆಲ್ಲಿ ನೋಡಲಿದ ।
ರೊಳಗೇನೊ ನೋಡಬೇಕೆನುತ ॥
ಇಳೆಯರಸನಾತ್ಮಜನು ತೆಗೆಯುತಿರಲಾಳದೊಳು ।
ಮಲಗಿದಂತಿರಲೊರ್ವ ನರನು ॥ 172 ॥

ಪರಿಕಿಸಲು ನಿದ್ದೆಗೈದವನಂತೆ ತೋರುತಿದೆ ॥
ಅರಿವೆನೆಂದೆನುತ ಹೊರದೆಗೆದು ॥
ನಿರುಕಿಸಲು ಜನಕನೆಂದರಿತು ಪಿಂದಕೆ ಮಾತೆ ।
ಯೊರೆದುದನು ನೆನೆದು ವಿಸ್ಮಯದಿ ॥ 173 ॥

ಏನಿದಚ್ಚರಿ ಇನಿತು ವರುಷ ಪರಿಯಂತವೇನ್ ।
ಹಾನಿಯಾಗದೆ ನಿದ್ರೆಯಿಂದ ॥
ತಾನೆ ಮಲಗಿದ ತೆರನೊಳಿಹ ಜೀವವಿರುವಂತೆ ।
ಕಾಣುತಿಹುದೆನುತ ಭ್ರಮೆಯಿಂದ ॥ 174 ॥

ಹಾ ಪಿತನೆ ಎದ್ದೇಳು ನಿನ್ನಸುತನ್ನೆತಂದೆ ।
ಕೋಪವೆನ್ನೊಡನೇತಕೆನುತ ॥
ಪಾಪಿ ಮಂತ್ರಿಯ ಮೋಸಕಂಜದಿರು ದುರುಳನನು ।
ನಾ ಪೆಸರನಡಗಿಸುವೆನೇಳು ॥ 175 ॥

ಎನುತ ನಾನಾವಿಧದಿ ಕರೆದು ಮೆಯ್ಯಲುಗಿಸಲು ।
ಜನಪನಲ್ಲಾಡದಿರುತಿರಲು ॥
ತನುವ ತಾನಗಲಿರ್ಪನೆಂದೆನುತ ನಿರ್ಧರಿಸಿ ।
ನೆನೆನೆನೆದು ಮನದಿ ಹಲುಬಿದನು ॥ 176 ॥

॥ **ರಾಗ ನೀಲಾಂಬರಿ – ಏಕತಾಳ** ॥

ಪಿತನಿಗೆಲ್ಲಿಂದ ಬಂತು । ದುರ್ಮರಣ ದು ।
ರ್ಮತಿ ಪಾಪಿಗೈದನಿಂತು ॥
ಅತಿಯಾಸೆಯಿಂದಲಾಳಿದ । ರಾಜನಿಗಿಂಥ ।
ಗತಿಯ ತಂದನೆ ದುರ್ಮದ ॥ 177 ॥

ಸಾಕಿದಶ್ವವಿದಾದರೂ । ತನ್ನೊಡೆಯನ ।
ನೀ ಕಾಡೊಳಗೆ ಬಿಟ್ಟರೂ ॥
ತಾ ಕಾದುಕೊಂಡಿರ್ಪುದು । ಇಂಥ ಸದ್ಗುಣ ।
ಮೂಕಪ್ರಾಣಿಯೊಳಿರ್ಪುದು ॥ 178 ॥

ಅದಕಿಂತ ಕಡೆಯಾದನು । ಸ್ವಾರ್ಥಕೋಸುಗ ।
ಸದೆದೆನ್ನ ತಾತನನು ॥
ಹೃದಯವಿಲ್ಲದ ದುರ್ಮತಿ । ದುಷ್ಟನಿಗೆಂದು ।
ಒದಗಿ ಬಹುದೊ ದುರ್ಗತಿ ॥ 179 ॥

॥ **ಭಾಮಿನಿ** ॥

ಎಂದು ಮನದೊಳು ಹಲವನೆಣಿಸುತ ।
ಅಂದು ಕೆಡದುಳಿದಿರ್ದ ದೇಹವಿ ।
ದೆಂದಿಗಾದರು ಬದುಕುವೆತ್ನವ ಗೈಯ್ಯಲೆಡೆಯಿಹುದು ॥
ಎಂದೆನುತಲಾ ಕುದುರೆ ಸಹಿತಲಿ ।
ತಂದೆಯನು ಪೊತ್ತಾಶ್ರಮದ ಬಳಿ ।
ತಂದು ಮಲಗಿಸಿ ಜನನಿಯೆಡೆಗೈತಂದು ಪೇಳಿದನು ॥ 180 ॥

॥ **ರಾಗ ಶಂಕರಾಭರಣ – ತ್ರಿವುಡೆತಾಳ** ॥

ಲಾಲಿಸೆನ್ನಯ ಜನನಿ ಸದ್ಗುಣ ।
ಶೀಲೆ ಮನದೊಳು ಮುದವನು ॥
ತಾಳು ಕಾಡಿನೊಳಿಂದು ಚರಿಸುತ ।
ಮೇಲೆ ನಾನು ॥ 181 ॥

ತೆರಳುತಿರೆ ಬಾಯಾರಿ ಮುಂದಕೆ ।
ಸರಸಿಯೊಂದನು ಕಾಣುತ ॥
ಪರಿಹರಿಸುತಾಯಾಸ ಕುಳಿತಿರೆ ।
ತುರಗವೊಂದು ॥ 182 ॥

ಬಂದು ಎನ್ನಯ ಸೆರಗ ಪಿಡಿದೆಳೆ ।
ದೊಂದು ಸರಸಿಯ ತಡಿಯೊಳು ॥
ನಿಂದು ಕಾಲಿಂದಿಳೆಯ ಕೆದರಲಿ ।
ಕಂದು ತಾನು ॥ 183 ॥

ಅಚ್ಚರಿಯ ತಳೆದಂದು ತೆಗೆದಾ ।
ಹೆಚ್ಚು ಮಳಲನು ನೋಡಲು ॥

ಸ್ವಚ್ಚದೇಹವು ಮಲಗಿದಂತೆ ಸ್ವ ।
ಇಚ್ಛೆಯಿಂದ ॥ 184 ॥

ಇರಲು ಕೆಡದಿರೆ ದೇಹವದರನು ।
ಪರಿಕಿಸಲು ಪಿತನೆನುತಲಿ ॥
ಅರಿತು ಗುರುತದಿ ತಂದೆ ನೋಡೆನು ।
ತೆರಗಲಂದು ॥ 185 ॥

॥ **ಕಂದಪದ್ಯ** ॥
ಕಂದನ ನುಡಿಗೇಳ್ದಚ್ಚರಿ ।
ಯಿಂದಂ ಪತಿಯಂ ನೋಡುವ ತವಕದಿ ತರುಣೀ ॥
ಬಂದೀಕ್ಷಿಸುತಾ ದೇಹವ ।
ನಂದಿಳೆಯೊಳ್ ಕೆಡೆದಳುತ್ತ ತಾನಿಂತೆಂದಳ್ ॥ 186 ॥

॥ **ರಾಗ ನೀಲಾಂಬರಿ – ಆದಿತಾಳ** ॥
ಪತಿಯೆ ಹಾಯೆನ್ನನಗಲೀ ವನಕೆ ।
ಹಿತದಿ ಮಂತ್ರಿಯೊಡನೆ ॥
ಕೃತಕವರಿಯದ್ಯೆದಿ ವ್ಯರ್ಥ ।
ಹತನಾದೆಯ್ಯೆ ಅಕಟಾ ॥ 187 ॥

ನುಡಿದೆ ಮೊದಲೆ ನಂಬಿಗೆಯನು ।
ಇಡದೆ ಮಂತ್ರಿಯೊಡನೆ ॥
ನಡೆವುದೊಳಿತೆಂದು ಕೇಳ ।
ದೊಡನೆನ್ನ ವಂಚಿಸಿದೆ ॥ 188 ॥

ಗತಿ ಯಾರಿನ್ನು ತನಗೆ ಮುದ್ದು ।
ಸುತನ ಕೇಳ್ವರಾರು ॥
ಪೃಥಿವಿಯು ದುರ್ಮತಿಗಾಯ್ತು ನಿ ।
ರ್ಗತಿಕಳಾದೆ ಶಿವನೆ ॥ 189 ॥

॥ **ಭಾಮಿನಿ** ॥
ಹಾ ವಿಧಿಯೆ ನಿರ್ದಯದೊಳಗೆ ಮ ।
ಜ್ಜೀವಿತೇಶನನೊಯ್ದು ಹರಿಯುವ ।
ನಾವೆಯನು ನಡುನೀರೊಳಧ್ದಿದ ತೆರದೊಳೆಸಗಿದೆಯ ॥
ಆವುದೆನ್ನಪರಾಧವೆನುತಲಿ ।
ಭಾವಕಿಯು ಗೋಳಿಡುತಿರಲು ಕೇ ।
ಳ್ದಾ ವನಿತೆಯೆಡೆಗ್ಯೆದಿ ಮುನಿವರನೆಂದ ಸ್ಯೆರಣೆಯ ॥ 190 ॥

॥ ರಾಗ ಜಂಜೂಟಿ – ಅಷ್ಟತಾಳ ॥

ಕೇಳವ್ವ ಮರುಗದಿರಿನ್ನು । ಧೈರ್ಯ ।
ತಾಳಿಕೊ ಪೇಳುವುದನ್ನು ॥
ಲಾಲಿಸೀ ದೇಹವು ಗೈದೀರ್ದ ಪುಣ್ಯವ ।
ಮೇಲಿಹುದು ದುಷ್ಟಾತ್ಮನಲ್ಲ ವಿ ।
ಶಾಲೆ ನೀ ಸೌಭಾಗ್ಯಶಾಲಿನಿ ॥ 191 ॥

ಇಷ್ಟು ವತ್ಸರ ಪರಿಯಂತ । ದೇಹ ।
ಕೆಟ್ಟು ಹೋಗದೆ ಉಳಿದಂಥಾ ॥
ಗುಟ್ಟರಿಯಲು ಮುಂದೆ ಸೃಷ್ಟಿಪಾಲನು ಜೀವ ।
ಬಿಟ್ಟುದಿಲ್ಲವು ಕೆಲದಿನಕೆ ತ ।
ನ್ನಷ್ಟಕೇ ಸರಿಯಹುದು ನಂಬಿಕೊ ॥ 192 ॥

ಕಾಲವಿರುವುದಲ್ಲೀ ತನಕ । ಪರ್ಣ ।
ಶಾಲೆಯಲ್ಲಿಡು ದೇಹವನಕ ॥
ಬಾಲನೀತನು ಧೈರ್ಯಶಾಲಿ ಮುಂದೀತನ ।
ಮೂಲಕವೆ ಜೀವಿಸುವ ತವಪತಿ ।
ಯಾಲಯದಿ ನೀ ಸೌಖ್ಯದಿಂದಿರು ॥ 193 ॥

॥ ವಾರ್ಧಕ ॥

ಎಂದಾ ಸರೋಜಾಕ್ಷಿಯನ್ನೊಡಂಬಡಿಸಿ ಬಳಿ ।
ಕಂದು ತದ್ದೇಹಮಂ ತನ್ನಾಶ್ರಮದೊಳು ಬೇ ।
ರೊಂದು ಕಡೆಯೊಳಗಿರಿಸಿ ಕದವಿಕ್ಕಿ ಭದ್ರತೆಯೊಳಿಟ್ಟು ಮಾತಾಪಿತರಿಗೆ ॥
ಮುಂದೆ ಸದ್ಯದಿ ಬಂದ ಕಷ್ಟ ಪರಿಹಾರವಹು ।
ದಂದು ಪರಿಯಂತ ಸಾವಿತ್ರಿವ್ರತಮಂ ಗೈವು ।
ದೆಂದು ನಯನಾವತಿಗೆ ಮುನಿಪನುಪದೇಶಿಸಲ್ಕಂತೆಸಗುತಿರೆ ನಿತ್ಯದಿ ॥ 194 ॥

॥ ರಾಗ ಸೌರಾಷ್ಟ್ರ ತ್ರಿವುಡೆತಾಳ ॥

ಇತ್ತಲೀ ತೆರನಿರಲು ಬಳಿಕ ನೋ ।
ಡತ್ತಲಾ ಮಾಯಾಪ್ರದೇಶದಿ ।
ಧೂರ್ತ ದಾನವ ದುರ್ಮದಾಖ್ಯನು ।
ಅರ್ತಿಯಿಂದ ॥ 195 ॥

ಕಾಳಿಕಾದೇವಿಯನು ನಿತ್ಯವು ।
ವೇಳೆದಪ್ಪದೆ ಸೇವಿಸುತ ತ ।

ನ್ಮೂಲಕವೆ ಸಾಧಿಸುತ ವಿವಿಧನು ।
ಕೂಲತೆಗಳ ॥ 196 ॥

ಮಂತ್ರ ಮಾಯಾವಿದ್ಯೆಗಳಲಿ ಕೃ ।
ತಾಂತನಂಜಿಕೆಯಿಲ್ಲದಂತೆ ಸ್ವ ।
ತಂತ್ರದಿಂದಿರುರ್ದ ಖಳನು ಮ ।
ಹಾಂತ ಮದದಿ ॥ 197 ॥

ಒಂದು ದಿನವಾಲೋಚಿಸುತ ತನ ।
ಗಿಂದು ಪರಿಯಂತರವು ದೇವಿಯ ।
ಹೊಂದಿ ಸಿದ್ಧಿಯ ಪಡೆದರಿಹುದಿ ।
ನ್ನೊಂದು ಮನವು ॥ 198 ॥

ಮೂರು ಲೋಕವ ಜೈಸಿ ಧರೆಯಲಿ ।
ಯಾರು ಸರಿಯಿಲ್ಲೆನಿಸಿ ಘನಗಂ ।
ಭೀರದಿಂದಾಳ್ವನಿತು ಮನ ನಿ ।
ರ್ಧಾರವಿಹುದು ॥ 199 ॥

॥ **ಕಂದಪದ್ಯ** ॥

ಅದಕೋಸುಗ ಶ್ರೀದೇವಿಯ ।
ಸದನಕೆ ತೆರಳುತ ಪೂಜಿಸಿ ಮನದಿಷ್ಟವನುಂ ॥
ಮುದದೊಳು ಬೇಡುತ ಪೇಳ್ದಂ ।
ದದಿ ಗೈವೆನೆನುತ ಪೊರಟಂ ದೇಗುಲದೆಡೆಗಂ ॥ 200 ॥

॥ **ರಾಗ ಕಾಂಭೋಽದಿ – ಝುಂಪೆತಾಳ** ॥

ಬಂದು ಶ್ರೀಕಾಳಿಕಾಂಬಿಕೆಯ ಪೂಜಿಸಿ ಭಕ್ತಿ ।
ಯಿಂದ ಬಲವಂದು ವಂದಿಸುತ ॥
ನಿಂದು ಕರಗಳ ಮುಗಿಯುತಂದು ಬೇಡಿದನು ಮನ ।
ದಿಂದೊಗೆದಭೀಷ್ಟ ಸಲಿಸೆನುತ ॥ 201 ॥

ದೇವಿ ನಿನಗಿನಿತು ದಿನ ಸೇವೆಗೈದುದಕೆನಗೆ ।
ನೀವೊಲಿದಭೀಷ್ಟ ಕರುಣಿಸಿದೆ ॥
ಪಾವನಳೆ ತನಗೆ ಮೂರ್ಲೋಕವನು ಜಯಸಿ ಪ್ರ ।
ಭಾವದಿಂದಾಳ್ವ ತೆರದಿಂದ ॥ 202 ॥

ಕರುಣಿಸಿದಡನುದಿನದಿ ಮರೆಯದೇ ನಿನಗಿಷ್ಟ ।
ವಿರುವ ಹರಕೆಗಳ ಕೋಽರಿದರು ॥

ತರಿಸಿ ಕೊಡಿಸುವೆನೆನುತಲೆರಗಲಾಕ್ಷಣದೊಳಂ ।
ಬರವಾಣಿಯೊರೆದುದಿಂತೆಂದು ॥ 203 ॥

॥ **ವಾರ್ಧಕ** ॥

ವತ್ಸ ಕೇಳ್ಳೆ ನಿನ್ನ ಭಕ್ತಿಗೊಲಿದಿರ್ಪೆ ಮನ ।
ಕುತ್ಸಾಹವಾದುದಿಲ್ಲೆಂದುತ್ತರಕೆ ಪೋಗಿ ।
ಮತ್ತೆ ಪೂರ್ವಕೆ ತಿರುಗಿ ಶತಯೋಜನಗಳಳಿಯೆ ಬ್ರಹ್ಮದೇಶವು ತೋರ್ಪುದು ॥
ಮತ್ತಲ್ಲಿಗರಸು ಬ್ರಹ್ಮವ್ರತನಿಗೇಕೈಕ ।
ಪುತ್ರಿ ಭೂಮಿಕೆಯೆಂಬಳವಳಿಂಗೆ ಪದಿನಾರು ।
ವತ್ಸರಂ ತುಂಬಲಾಕೆಯನೆನಗೆ ಬಲಿಗೊಟ್ಟರರ್ತಿ ಕೈಗೂಡಿಸುವೆನು ॥ 204 ॥

॥ **ರಾಗ ಭೈರವಿ – ಏಕತಾಳ** ॥

ಎಂದಾ ಮಾತನು ಕೇಳಿ । ಖಳ ।
ನಂದುತ್ಸಾಹವ ತಾಳಿ ॥
ತಂದೀವೆನು ನೃಪಸುತೆಯ । ಬಲಿ ।
ಗೆಂದೆಣಿಸುತ ದುರ್ವ್ಯಥೆಯ ॥ 205 ॥

ಸಾಧಿಸುತಾ ಕಾರ್ಯವನು । ದೊರೆ ।
ಯಾದಪೆ ಮೂರ್ಲೋಕವನು ॥
ಮೋದದೊಳಾಳುವೆನೆನುತ । ಹರು ।
ಷೋದಯದಿಂ ಪೊರಟನು ತಾ ॥ 206 ॥

ಈ ರೂಪದಿ ನಾ ಪೋಗೆ । ಕೈ ।
ಸೇರದು ಕಾರ್ಯವದಾಗೆ ॥
ಬೇರೊಂದಾಕೃತಿ ಧರಿಸಿ । ಮಾ ।
ಯಾರೂಪವನನುಕರಿಸಿ ॥ 207 ॥

ಜನಪನ ವಿಶ್ವಾಸದೊಳು । ಅರ ।
ಮನೆಯೊಳಗಿರೆ ಮೋಸದೊಳು ॥
ವನಿತೆಯ ತಹೆನೆಂದೆನುತ । ಪೊರ ।
ಟನು ನಿಜವನು ಮರೆಯಿಸುತ ॥ 208 ॥

॥ **ಭಾಮಿನಿ** ॥

ಇಂತು ದೈತ್ಯನು ಮನದಿ ನಿಶ್ಚಯ ।
ವಾಂತು ವೇಷವ ಮರೆಸಿ ಜ್ಯೋತಿಷಿ ।
ಯಂತೆ ರೂಪವ ಧರಿಸುತ್ತೈದಿದ ತತ್ಪುರಾಂತಿಕಕೆ ॥

ಮುಂತೆ ಬರುತಿರಲತ್ತಲಾ ನರ ।
ಕಾಂತ ಬ್ರಹ್ಮವ್ರತನು ಮಂತ್ರಿಯೊ ।
ಆಂತು ಕುಳಿತಾಲೋಚಿಸುತ್ತಿಂತೆಂದ ಮನದಿರವ ॥ 209 ॥

॥ ರಾಗ ಕೇದಾರಗೌಳ – ಝುಂಪೆತಾಳ ॥

ಕೇಳು ಸಚಿವಶಿರೋಮಣಿ । ನಿನ್ನೊಡನೆ ।
ಪೇಳುವುದ ಸದ್ಗುಣಮಣಿ ॥
ಬಾಲೆ ಭೂಮಿಕೆಗೆ ಪ್ರಾಯ । ಏರುತಿದೆ ।
ಮೇಲೆ ಪರಿಣಯಕುಪಾಯ ॥ 210 ॥

ಕಾಣದೆಲ್ಲಿಯು ನೋಡಲು । ವರನನೆಣೆ ।
ಗಾಣೆ ಜೊತೆ ಸರಿಗೂಡಲು ॥
ಕ್ಷೋಣಿಪಾಲರೊಳು ನಿನ್ನ । ಮನದೊಳಿರೆ ।
ಮೇಣರುಹು ತಿಳಿದು ಮುನ್ನಾ ॥ 211 ॥

ರೂಪು ಗುಣ ಯವ್ವನದಲಿ । ಸುತೆಗೆ ಸರಿ ।
ಯಾಪನನು ಭೂತಳದಲಿ ॥
ನೀ ಪರಾಂಬರಿಸುತೆನಗೆ । ತಿಳುಹೆನಲು ।
ಭೂಪನೊಡನೆಂದನು ಮಿಗೆ ॥ 212 ॥

॥ ರಾಗ ಕೇದಾರಗೌಳ – ಅಷ್ಟತಾಳ ॥

ಧರಣಿಪಾಗ್ರಣಿ ನಿನ್ನ ನುಡಿಯಹುದಾದರೊಂ ।
ದೊರೆವೆ ನಿನ್ನಣುಗೆಗೀಗ ॥
ಬರಲಿಲ್ಲ ಷೋಡಶಾಬ್ದವು ಸನಿಹದೊಳಿದೆ ।
ಯರುಹುವೆನದರೊಳಗೆ ॥ 213 ॥

ಲಗ್ನಯೋಗವು ಬರುವನಕ ಯತ್ನಿಸಿದರೆ ।
ವಿಘ್ನವಲ್ಲದೆ ಮುಂದಕೆ ॥
ಭಗ್ನವಾಗುವುದೆಣಿಸಿದ ಕಾರ್ಯವದಕೆ ನಿ ।
ರ್ವಿಘ್ನವಾಗದು ನಿಶ್ಚಯ ॥ 214 ॥

ಆದರೂ ನಮ್ಮ ಕೈಲಾದ ಯತ್ನವ ಮಾಡು ।
ತೀ ಧರೆಯೊಳು ಪುಡುಕಿ ॥
ಸಾಧಿಸುವುದು ಧರ್ಮವದರಂತೆ ಗೈವೆ ದೈ ।
ವಾಧೀನದಂತಹುದು ॥ 215 ॥

ತನುಜೆಯ ಜನನಕಾಲವ ಗುಣಿಸುತ ಫಲ ।
ವನು ತಿಳಿದದರಂದದಿ ॥
ಅನುವರಿಸಲು ಸುಲಭವದೆನಲೊಪ್ಪಿ ಮುಂ ।
ದೆಣಿಸುತಿರಲು ಚಾರನು ॥ 216 ॥

ಬಂದು ಭೂಮಿಪನಡಿಗೆರಗುತ ಹೊರಬಾಗಿ ।
ಲಂದೋರ್ವ ಜ್ಯೋತಿಷ್ಕನು ॥
ಬಂದಿಹನೆನೆ ಶುಭವೆಂದೆಣಿಸುತ ಬರ ।
ಲೆಂದರುಹಲು ಬಂದನು ॥ 217 ॥

॥ **ಕಂದಪದ್ಯ** ॥

ಬಂದಾ ಜ್ಯೋತಿಷ್ಕನ ಕರೆ ।
ತಂದಾಸನವಿತ್ತು ಮುದದೊಳುಪಚರಿಸುತ್ತಂ ॥
ಅಂದಾ ಭೂಮಿಪ ನೀವೆ ।
ಲ್ಲಿಂದೀಕಡೆ ಬಂದಿಹುದೆನಲೊರೆದಂ ನಗುತಂ ॥ 218 ॥

॥ **ರಾಗ ಬೇಗಡೆ – ಅಷ್ಟತಾಳ** ॥

ಭಳಿರೆ ಭೂಮಿಪಕುಲಶಿರೋಮಣಿಯೆ । ಮೆಚ್ಚಿದೆನು ನಿನ್ನಯ ।
ಬಲುತರಾತಿಥ್ಯಕ್ಕೆ ಗುಣಮಣಿಯೆ ॥
ಇಳೆಯೊಳಗೆ ನಿನ್ನಂಥ ಧಾರ್ಮಿಕ ।
ಬಲುಪರಾಕ್ರಮಿ ಸದ್ಗುಣಾನ್ವಿತ ।
ಕುಲಜರಾಳ್ವಿಕೆಯೊಳಗೆ ಸಿಗರೆಂ ।
ಬುಲುಹು ತುಂಬಿದೆ ಜಗದೊಳೆಲ್ಲವು ॥ 219 ॥

ದೇಶ ದೇಶವ ತಿರುಗಿ ನೋಡಿದೆನು । ತವಕೀರ್ತಿಲತೆಯು ।
ಲ್ಲಾಸದಿಂ ಹೆಚ್ಚಿಹುದು ಕೇಳ್ ನೀನು ॥
ಆ ಶುಭಾಂಗಿ ಇರಾವತೀನದಿ ।
ಈ ಸುರಾಜ್ಯವನಾವರಿಸುತೀ ।
ದೇಶವತಿ ಸಂಪತ್ಸಮೃದ್ಧಿಯು ।
ವಾಸಿಸುವ ಜನರೇಸು ಧನ್ಯರೊ ॥ 220 ॥

ಈಸು ನಿನ್ನ ವಿಶಾಲಕೀರ್ತಿಯನು । ಕಣ್ಣಾರೆ ನೋಳ್ಪಭಿ ।
ಲಾಷೆಯಿಂದೈತಂದು ರಾಜ್ಯವನು ॥
ಬೇಸರಿಲ್ಲದೆ ಸಂಚರಿಸಿ ಸಂ ।
ತೋಷಗೊಂಡೈತಂದೆನೀಗವ ।

ನೀಶ ತವ ದರ್ಶನದಿ ಮನಕು ।
ಲ್ಲಾಸವಾದುದು ನೃಪಯಶೋನಿಧಿ ॥ 221 ॥

॥ **ಭಾಮಿನಿ** ॥

ಈ ತೆರದಿ ಭೂಮೀಶನನು ವಿಪ ।
ರೀತ ಪೊಗಳಲು ಹಿಗ್ಗುತವನೀ ।
ನಾಥನೆಂದನು ಧನ್ಯ ತಮ್ಮಾಗಮದಿ ಮದ್ಗೃಹವು ॥
ಪೂತವಾದುದು ಬಂದ ಕಾರಿಯ ।
ವೇತರದು ತನ್ನಿಂದೇನು ಕೃತಿಯೆಂ ।
ದಾತನಡಿಗೆರಗಲ್ಕೆ ಪಿಡಿದೆತ್ತುತ್ತಲಿಂತೆಂದ ॥ 222 ॥

॥ **ರಾಗ ಜಂಜೂಟಿ – ಅಷ್ಟತಾಳ** ॥

ವಸುಧೆಪಾಲಕ ಲಾಲಿಸಯ್ಯಾ । ಬಂದ ।
ವಿಷಯವನೊರೆವೆ ಕೇಳಯ್ಯಾ ॥
ಪೆಸರು ಗುಣಾಢ್ಯನೆಂ । ದುಸುರುವರೆನಗೆ ಜ್ಯೋ ।
ತಿಷದಿ ಬಲ್ಲಿದನೆನೆಸಿ ರಾಜ್ಯವ ।
ಸಸಿನೆ ತಿರುಗುತ ಬಂದೆನಿಲ್ಲಿಗೆ ॥ 223 ॥

ವಿವಿಧ ದೇಶಗಳೆಲ್ಲ ತೊಳಲಿ । ಜನ ।
ನಿವಹ ಮೆಚ್ಚಿಸಿ ತನುಬಳಲಿ ॥
ತವ ರಾಜ್ಯದೊಳು ಕೆಲ । ದಿವಸ ವಿಶ್ರಾಂತಿಗೊಂ ।
ಡವನಿಪತಿ ನಿನ್ನಾಶ್ರಯವ ಪೊಂ ।
ದುವ ಮನದೊಳಿಂದಿಲ್ಲಿಗೈದಿದೆ ॥ 224 ॥

ಎನಲೊಪ್ಪಿ ಭೂಮಿಪಾಲಕನು । ಇದ ।
ಕನುಮಾನಗೊಳದಾಶ್ರಯವನು ॥
ಘನತೆಯಿಂ ಪಡೆಯಿರೆನ್ನರಮನೆಯೊಳಗತಿ ।
ಸನಿಹದೊಳು ಸುಖದಿಂದ ನೀವಿರು ।
ವನುಗೊಳಿಪೆನೆನೆ ಮನದಿ ಹಿಗ್ಗುತ ॥ 225 ॥

॥ **ವಾರ್ಧಕ** ॥

ಲೇಸಾದುದವನಿಪಾಲಕನೆನ್ನ ಮನಸಿನಭಿ ।
ಲಾಷೆ ಕೈಗೂಡಿತಿನ್ನೆನಿತು ಸದ್ಧರ್ಮವಾ ।
ರಾಶಿಯೋ ಸತ್ಕೀರ್ತಿಯುತನೆನುತ ಪೊಗಳೆ ಕೇಳ್ದಾ ನರಾಧಿಪನೆಂದನು ॥
ಆಸೆಯೊಂದಿಹುದೆನ್ನ ಸುತೆಯೋರ್ವಳಿಹಳವಳಿ ।

ಗೇಸು ವತ್ಸರದಿ ವೈವಾಹವಹುದಿದ ಜನ್ಮ ।
ರಾಶಿಯಂ ಗುಣಿಸುತ ಫಲಾಫಲವನರುಹಿರೆನೆ ಜನ್ಮಪತ್ರಿಕೆ ತರಿಸುತ ॥ 226 ॥

॥ **ಕಂದಪದ್ಯ** ॥

ಗುಣಿಸುತ ಶೋಧಿಸಿ ಲಗ್ನವ ।
ಮನದೊಳ್ ಬೆಚ್ಚುತಲಚ್ಚರಿಗೊಳುತಿರೆ ಭಯದಿಂ ॥
ಜನಪತಿಯನುಮಾನಿಸಿ ನಿಜ ।
ವನು ಮಾಜದೆ ತಿಳುಹೆನೆ ನಗುತರಸನೊಳೊರೆದಂ ॥ 227 ॥

॥ **ರಾಗ ಕಾಪಿ – ಅಷ್ಟತಾಳ** ॥

ಅವಧರಿಸಯ್ಯ ರಾಜೇಂದ್ರ । ನಿನ್ನ ।
ಕುವರಿಯ ಭಾಗ್ಯಕಾರಣೆ ಗುಣಸಾಂದ್ರ ॥ ಪ ॥

ಇಷ್ಟು ದೇಶವ ತಿರುಗಿದರೂ । ತನ ।
ಗಿಷ್ಟು ಯೋಗ್ಯತೆಯುಳ್ಳ ಜನರಾರೂ ಸಿಗರು ॥
ಗುಟ್ಟಲ್ಲವದಕೆ ಯೋಚಿಸುತ । ಭ್ರಮೆ ।
ವಟ್ಟೆನಲ್ಲದೆ ಬೇರೆಣಿಸದಿರು ಸತತ ॥ 228 ॥

ವರುಷವಾಯಿತು ಹದಿನೈದು । ದಾಟಿ ।
ಬರುತಿದೆ ಸದ್ಯ ಷೋಡಶಪ್ರಾಯವಾಯ್ದು ॥
ಧರಣೀಶ ಕೇಳಷ್ಟರೊಳಗೆ । ಯೋಗ್ಯ ।
ವರನೊದಗುವನಾಕಸ್ಮಿಕದಿ ತನ್ನೊಳಗೆ ॥ 229 ॥

ಅದಕೇನು ಯೋಚನೆ ಬೇಡ । ಮುಂದೆ ।
ಒದಗುವುದಿಷ್ಟಾರ್ಥಸಿದ್ಧಿಯು ನೋಡಾ ॥
ಸುದತಿ ದೀರ್ಘಾಯುಷಿಯಾಗಿ । ಭಾಗ್ಯ ।
ನಿಧಿಯೆನಿಸುತ ಕೀರ್ತಿತಹಳ್ಳೈ ಲೇಸಾಗಿ ॥ 230 ॥

॥ **ರಾಗ ಕಾಂಭೋದಿ – ಝಂಪೆತಾಳ** ॥

ಜೋಯಿಸನ ನುಡಿಗೇಳಿ ರಾಯ ಸಂತಸ ತಾಳಿ ।
ಮಾಯಕವನರಿಯದಾದರದಿ ॥
ಪ್ರೀಯನೆನಿಸುತಲಿ ತನ್ನರಮನೆಯ ಸನಿಹದಲ ।
ಪಾಯವಿಲ್ಲದೆ ಬಿಡದಿ ಗೈದು ॥ 231 ॥

ಕರವ ಮುಗಿದೆಂದ ನೀವರಮನೆಯೊಳೆಲ್ಲ ಕಡೆ ।
ಚರಿಸಲೆಡರಿಲ್ಲದಂದದಲಿ ॥

ಕರುಣಿಸಿಹೆನಾಜ್ಞೆ ನೀವಿರುವನಕ ಸಭೆಗೈದಿ ।
ಹರುಷಗೊಳಿಸುತಲಿಹುದು ಮನವ ॥ 232 ॥

ಎನಲುಬ್ಬಿ ಮನದಿಷ್ಟ ತನಗಿನಿತು ಸುಲಭದೊಳ ।
ಗನುವರಿಸಲಿದುಭಾಗ್ಯವೆನುತ ॥
ನೆನೆದು ಕುಹಕವ ತೋರ್ಪಡಿಸದೆ ಸುಖದೊಳಗಿರ್ದ ।
ಎಣಿಸುತನುಕೂಲ ಸಮಯವನು ॥ 233 ॥

॥ **ರಾಗ ಮಧುಮಾಧವಿ – ತ್ರಿವುಡೆತಾಳ** ॥

ಒಂದು ದಿನ ನೃಪನಣುಗ ಭೂಮಿಕೆ ।
ಹೊಂದಿರುವ ಬೇಸರಿಕೆ ಕಳೆಯುವ ।
ಡೆಂದು ಸಖಿಯರ ಕರೆದು ಪೇಳಿದ ।
ಳಂದು ಮನದೊಳಗಿರ್ಪುದ ॥ 234 ॥

ಸಖಿಯರಿರ ನೀವ್ ಕೇಳಿ ವನದಲಿ ।
ಸುಖದಿ ಚರಿಸುತ ವಾರಿಕೇಳಿಯ ।
ಮುಖದಿ ಬೇಸರ ಕಳೆವ ಮನವಿಹು ।
ದಕೆ ಪೊರಡಿ ನೀವೆನ್ನಲು ॥ 235 ॥

ಉಡುಗಣಾಧಿಪವದನೆಯಾಡಿದ ।
ನುಡಿಗೆ ಗೆಳತಿಯರೆಲ್ಲ ಸಂತಸ ।
ವಡೆದು ಪೊರಟರು ಮನ್ಮಥನ ಪೆ ।
ರ್ಬಡೆ ಸಹಿತ ಜಲಕೇಳಿಗೆ ॥ 236 ॥

॥ **ರಾಗ ಪಂತುವರಾಳಿ – ಮಟ್ಟೆತಾಳ** ॥

ಬಂದರಂದು ವಾರಿಕೇಳಿ । ಗೆಂದು ಸತಿಯರು ॥
ಮಂದಹಾಸದಿಂದ ನಗುತ । ಲಿಂದುಮುಖಿಯರು ॥ 237 ॥

ಸರಸಿಯೆಡೆಯ ಸಾರಿಜಲವ । ನೆರಚಿಕೊಳ್ಳುತ ॥
ತರತರದ ವಿನೋದದಿಂದ । ಸರಸವಾಡುತ ॥ 238 ॥

ಮಿಂದು ತಡಿಯ ಸಾರಿ ವಸನ । ವಂ ಧರಿಸುತಲಿ ॥
ನಂದನದಲಿ ಚರಿಸಿ ಪುಷ್ಪ । ಸಂಗ್ರಹಿಸುತಲಿ ॥ 239 ॥

॥ **ವಾರ್ಧಕ** ॥

ಈ ರೀತಿಯಿಂದ ಸಖಿಯರ ಕೂಡಿ ಭೂಮಿಕೆಯು ।
ಚಾರು ಸುಮಗಳ ಸಂಗ್ರಹಿಸುತ ಸಂಚರಿಸುತ್ತ ।
ಲೇರಿದುತ್ಸಾಹದಿಂದಿರಲಿತ್ತ ಕಪಟಜೋಯಿಸನಿದರ ಪರಿಯರಿಯುತ ॥

ಭೂರಿತೋಷದೊಳದೇ ಸಮಯವೆಂದೆನುತಲಿದ ।
ಮೀರಿದರೆ ಸುಲಭವಿಲ್ಲೆನುತ ನಿಶ್ಚಯಿಸಿ ಬಳಿ ।
ಕಾ ರಸಾಧಿಪನಣುಗೆಯೆಡೆಗೆ ನಡೆತಂದವಳ ನುಡಿಸಿದಂ ಮನವೊಲಿಸುತ ॥ 240 ॥

॥ ರಾಗ ಭೈರವಿ – ಝಂಪೆತಾಳ ॥

ಬಾರೆ ಭೂಮೀಶನ ಕು । ಮಾರಿ ನಿನ್ನನು ನೋಡಿ ।
ಭೂರಿ ತೋಷವಿದಾಯ್ತು । ಯಾರು ಸರಿ ನಿನಗೆ ॥ 241 ॥

ನಿನ್ನ ಪಿತನಿಂದರಿತೆ । ಮೊನ್ನೆ ತವ ಜನನಫಲ ।
ವನ್ನೋಡಿ ಹಿತವಾಯ್ತು । ಕನ್ನಿಕಾಮಣಿಯೆ ॥ 242 ॥

ಬಾರಿಲ್ಲಿ ನಿನ್ನಕೈ । ತೋರಿಸೊಮ್ಮೆಗೆ ನೋಳ್ಪೆ ।
ಚಾರು ಸಾಮುದ್ರಿಕ ವಿ । ಚಾರವನೆ ಕೇಳ್ದು ॥ 243 ॥

ನಿಜವೆನುತ ನೆರೆನಂಬಿ । ಭುಜಗವೇಣಿಯು ಕರಾಂ ।
ಬುಜವ ನೀಡಲು ಪಿಡಿದು । ಕುಜನ ತಕ್ಷಣದಿ ॥ 244 ॥

ಘೋರರೂಪವ ತೋರಿ । ಭೋರುಗುಡಿಸುತಲೆತ್ತಿ ।
ಹಾರಿದನು ನಭಕೆ ಮದ । ವೇರಿದುತ್ಸಹದಿ ॥ 245 ॥

ಎತ್ತಿಗೊಂಡಬ್ಬರಕೆ । ಮತ್ತಕಾಶಿನಿ ಮೂರ್ಛೆ ।
ವೆತ್ತಿರಲು ಚೀರೆ ಖಳ । ನತ್ತ ಗಮಿಸಿದನು ॥ 246 ॥

॥ ರಾಗ ಭೈರವಿ – ಏಕತಾಳ ॥

ಇತ್ತಲುಪವನದಿ ಖಳನು । ಸತಿ ।
ಯೆತ್ತಿಕೊಂಡೊಯ್ಯಲಳಲನು ॥
ಮತ್ತಕಾಶಿನಿಯರು ನೋಡಿ । ಭಯ ।
ವೆತ್ತೋಡುತಲೊಡಗೂಡಿ ॥ 247 ॥

ಬೆದರುತ ಸುತ್ತಲು ನೋಡಿ । ಹೂ ।
ವೆದೆಯೊಳಗಳುಕುತಲೋಡಿ ॥
ಸುದತಿಯ ಕದ್ದೊಯ್ದೆಮಗೆ ॥ ಮುಂ ।
ದೆದುರಾಹನೊ ಎಂದು ಮಿಗೆ ॥ 248 ॥

ನಡುಗುತಲಳುಕುತ ಬಂದು । ಧರೆ ।
ಯೊಡೆಯನ ಮುಂಗಡೆ ನಿಂದು ॥
ಬಿಡಲಾರದೆಬಾಯ್ ಅಳುತ । ನುಡಿ ।
ತಡವರಿಸುತಲೆಂದರು ತಾ ॥ 249 ॥

॥ **ರಾಗ ಸಾವೇರಿ – ಅಷ್ಟತಾಳ** ॥

ಅವನೀಶ ಲಾಲಿಸಯ್ಯಾ । ಬಂದಿಹ ಮಹಾ ।
ಅವಗಡ ಪೇಳ್ವೆ ಜೀಯಾ ॥
ವಿವರಿಸಲರಿದು ನಿನ್ನಣುಗೆಯ ಜೊತೆಯೊಳೀ ।
ದಿವಸ ನಾವ್ ಜಲಕೇಳಿಗೆ ॥ ಪೋಗಿರೆ ಮಿಗೆ ॥ 250 ॥

ಸರಸದಿ ಜಲವಿಳಿದು । ಕೇಳಿಯನಾಡಿ ।
ತಿರುಗಿ ಪಥವ ಪಿಡಿದು ॥
ಬರುತಿರೆ ಪುಷ್ಪಸಂಗ್ರಹಣೆ ಗೈಯುತ ಜೋಯಿ ।
ಸರ ತೆರ ಸೇದಾರ್ತನು । ಬಂದೀತನು ॥ 251 ॥

ಸಾಮುದ್ರಿಕವ ನೋಡಲು । ಕೈದೋರೆನೆ ।
ಭೂಮಿಕೆ ಕೈನೀಡಲು ॥
ಆ ಮಹಾಘೋರ ರೂಪದೊಳವಳನು ಎತ್ತಿ ।
ವ್ಯೋಮಮಾರ್ಗದಿ ಪೋದನು । ಕೊಂಡೊಯ್ದನು ॥ 252 ॥

॥ **ಕಂದಪದ್ಯ** ॥

ತರುಣಿಯರೆಂದುದ ಕೇಳುತ ।
ಧರೆಯಧಿಪತಿ ಹಾಯೆನುತೊರಗಲು ಮೂರ್ಛೆಯೊಳಂ ॥
ನಿರುಕಿಸಿ ಸಭೆ ಭಯದಿಂದ ।
ಚ್ಚರಿಗೊಳುತಿರಲೆಚ್ಚರಿತಳಲಿದನಾ ಭೂಪಂ ॥ 253 ॥

॥ **ರಾಗ ನೀಲಾಂಬರಿ – ರೂಪಕತಾಳ** ॥

ಅಕಟಕಟೆನ್ನಣುಗೆಯ ಮದ ।
ಮುಖನೊಯ್ದನೆ ಕುಟಿಲೋಕ್ತಿಯೊ ।
ಳಕುಟಿಲನಾಗಿಯೆ ತಾನೇ ।
ತಕೆ ನಂಬಿದೆ ಖಳನ ॥ 254 ॥

ಪ್ರಕಟಿಸದೆನ್ನನು ಮೋಸದಿ ।
ಸುಖದೊಳು ಸೇರುತ ಜ್ಯೋತಿ ।
ಷ್ಯಕನೆಂದೆನ್ನನು ವಂಚಿಸಿ ।
ಸುಕುಮಾರಿಯನೊಯ್ದ ॥ 255 ॥

ತನುಜೆಯ ಜನನವ ಗುಣಿಸುತ ।
ಅನುಮಾನಕ್ಕೆಡೆದೋರದೆ ।
ಘನತೆಯೊಳುಬ್ಬಿಸುತೆನ್ನಯ ।
ಮನಸೂರೆಯ ಗೈದು ॥ 256 ॥

ದನುಜನು ಕದ್ದೆಲ್ಲೊಯ್ದನೊ ।
ತನುಜೆಯ ಮರೆತೆಂತೀರ್ಪೆನು ।
ಅಣುಗೆಯ ಬಿಡಿಸುವರಾರೆಂ ।
ದೆನುತಲಿ ಚಿಂತೆಯಲಿ ॥ 257 ॥

ಗತಿಯನು ಮುಂದೆಣಿಸದೆ ಬರಿ ।
ವ್ಯಥಿಸುತ ಕುಳಿತರೆ ಬರುವಳೆ ।
ದಿತಿಜನಪುರವೆಲ್ಲಿಯೊ ತಿಳಿ ।
ದತುಳಪರಾಕ್ರಮದಿ ॥ 258 ॥

ಹತಿಸುತ ದುರುಳನ ಬಿಡಿಸುತ ।
ಸುತೆಯನು ತಾರದೆ ಮನ್ನನ ।
ಹಿತವಿರದೆನಲುರೆ ಸಂತೈ ।
ಸುತ ಮಂತ್ರಿಯು ನುಡಿದ ॥ 259 ॥

॥ **ರಾಗ ಭೈರವಿ – ಏಕತಾಳ** ॥

ಯಾಕಳಲುವೆ ಭೂಮೀಶ । ಬಿಡು ।
ಶೋಕವ ಕಾಯುವನೀಶ ॥
ಈ ಕುವರಿಯ ಕುಟಿಲದಲಿ । ಒ ।
ಯ್ದಾ ಖಳನಾವೆಡೆ ಇರಲಿ ॥ 260 ॥

ಹುಡುಕಿಸಿ ಚರರಿಂದವನ । ಪೆ ।
ರ್ಬಡೆಗೂಡುತ ದಾನವನ ॥
ಮಡುಹಿ ಕುವರಿಯನು ತಂದು । ನಿ ।
ನ್ನಡಿಗೊಪ್ಪಿಸುವೆನು ಬಂದು ॥ 261 ॥

ಎನುತಲಿ ಧೈರ್ಯವನರುಹಿ । ಸಚಿ ।
ವನು ಚರರನು ಮಿಗೆ ಕಳುಹಿ ॥
ಜನಪನ ಸಂತವಿಸುತ್ತ । ಸುತೆ ।
ಯನು ನೆನೆವುತಲಿರಲಿತ್ತ ॥ 262 ॥

॥ **ಭಾಮಿನಿ** ॥

ಧಾರಿಣಿಪನಿಂತಿರಲಿಕತ್ತಲು ।
ಘೋರರಕ್ಕಸನಂಬರದ ಪಥ ।
ಸಾರಿ ಪೊತ್ತೈತಂದು ಕಾಳಿಯ ಗುಡಿಯ ಸನಿಹದಲಿ ॥

ಸೇರಿ ದೇವಿಯ ಮುಂದಿಳುಹಿ ಹದಿ ।
ನಾರು ವತ್ಸರ ತುಂಬುವನಕವೆ ।
ಸೈರಿಸುತ ನಿನಗರ್ಪಿಸುವೆನೆಂದೆರಗಿ ಕೈಮುಗಿದ ॥ 263 ॥

॥ **ಕಂದಪದ್ಯ** ॥
ಅನಿತರೊಳೆಚ್ಚರುಗೊಳುತಾ ।
ವನಿತಾಮಣಿ ನಾಲ್ದೆಸೆಯಂ ನೋಡುತ ಭಯದಿಂ ॥
ಜನರಾರಿಲ್ಲದೆ ಏಕಾಂ ।
ಗಿನಿಯಹೆ ಸೆರೆಸಿಕ್ಕಿದೆನೆನುತಳಲುತಲೆಂದಳ್ ॥ 264 ॥

॥ **ರಾಗ ಸಾವೇರಿ – ಆದಿತಾಳ** ॥
ಹರಹರಾ ದುರುಳನೆನ್ನ । ಮೋಸದಿ ಕದ್ದು ।
ತರಲಾರು ಪೊರೆವರೆನ್ನ ॥
ಮೊರೆಹೊಗಲಾರಿಗಿನ್ನು । ದುರ್ಭಾಗ್ಯಳಾಗಿ ।
ಧರೆಯೊಳಿನ್ನೆಂತು ಬಾಳ್ವೆನು ॥ 265 ॥

ಏತಕೆ ಜಲಕೇಳಿಗೆ । ಬಂದೆನೊ ಜೊತೆ ।
ಗಾತಿಯರೊಡನೆ ಹೀಗೆ ॥
ಮಾತಾಪಿತರ ಮರೆತು । ಇದ್ದವಳಲ್ಲ ।
ಈ ತನಕವು ಬೆರೆತು ॥ 266 ॥

ಗೋಳಿಡೆ ದಯತೋರ್ಪನೆ । ಪಾತಕಿಯೆನ್ನ ।
ಹಾಳುಗೈಯದೆ ಇರ್ಪನೆ ॥
ಬಾಳಲಾರೆನು ಸರ್ವಥಾ । ದುಷ್ಟನ ಸೇರಿ ।
ಕೀಳಾದರೇನು ವೃಥಾ ॥ 267 ॥

॥ **ರಾಗ ಸುರುಟಿ – ಏಕತಾಳ** ॥
ಕನ್ಯಾಮಣಿಕೇಳೆ । ದುಃಖದಿ ।
ಬನ್ನಬಡದಿರೇಳೆ ॥
ನಿನ್ನೊಳು ಮನವೆನಗಿಲ್ಲವು ಜನ್ಮವ ।
ಉನ್ನತಗೊಳಿಸಲು ನಿನ್ನನು ತಂದಿಹೆ ॥ 268 ॥

ದೇವಿಯ ಸನ್ನಿಧಿಗೆ । ನಿನ್ನನು ।
ಭಾವಿಸಿ ನರಬಲಿಗೆ ॥
ನಾವರ್ಪಿಸಿ ಸಿದ್ಧಿಯಗೊಳೆ ತಂದೆನು ।
ಭಾವಿಸದನ್ಯಥ । ಜೀವವ ಬಿಡದಿರು ॥ 269 ॥

ವರುಷವು ಹದಿನಾರು । ತುಂಬುವ ।
ಪರಿಯಂತರಕಾರೂ ॥
ಬರದಂದದಿ ಕಾವಲಿಗಿಹೆ ನಿನ್ನನು ।
ಮರುಗುತ ಬೊಬ್ಬಿಡೆ ಕೇಳುವರಿಲ್ಲವೆ ॥ 270 ॥

॥ **ಭಾಮಿನಿ** ॥

ತರಳೆ ನಿನಗಿಲ್ಲಿರಲು ಜೀವನ ।
ತೊರೆಯಲೆಡೆಯಿಲ್ಲದಕೆ ಮಾಯಾ ।
ಪುರಿಯೆನಿಪುದೆನಿತಾದಡೆನ್ನಿಂ ತಪ್ಪಲಸದಳವು ॥
ಅರಿತುಕೊಳ್ಳೆನೆ ಭಯದಿ ನಡುಗುತ ।
ಅರಲು ರವಿಯುದಯಿಸಲು ಫಲಗಳ ।
ತರಿಸಿ ತಿನಲಿತ್ತವಳ ಮಲಗಿಸಿ ಮೂರ್ಛೆಗೈಸಿರಲು ॥ 271 ॥

॥ **ಕಂದಪದ್ಯ** ॥

ಎಚ್ಚರವಾಗದ ತೆರದೊಳ ।
ಗುಚ್ಚರಿಸುತ ಮಂತ್ರದ ಕೋಲಂ ಶಿರದೆಡೆಗಂ ॥
ಬಚ್ಚಿಡುತಲಿ ಪ್ರತಿದಿನ ತಾ ।
ನೆಚ್ಚರೊಳಿರೆ ಬಳಿಕಿತ್ತಲು ನಡೆದುದ ಪೇಳ್ವೆಂ ॥ 272 ॥

॥ **ರಾಗ ಸೌರಾಷ್ಟ್ರ - ತ್ರಿವುಡೆತಾಳ** ॥

ಒಂದು ದಿನ ಮೃಗಬೇಟೆಗೆನ್ನುತ ।
ಲಂದು ಪೊರಟಾ ತೇಜವರ್ಮನು ।
ಕಂದಮೂಲಗಳರಸಿ ಹಸಿವೆಗ ।
ಆಂದ ಬಳಲಿ ॥ 273 ॥

ದೂರದೂರದೊಳರಸುತ್ತೈತರೆ ।
ದಾರಿದಪ್ಪುತ ಕಾಳಿಕಾಲಯ ।
ಸೇರುತಚ್ಚರಿಗೊಂಡನೀ ಕಾಂ ।
ತಾರದೊಳಗೆ ॥ 274 ॥

ದೇಗುಲವಕಟ್ಟಿಸಿದರಾರಿದ ।
ನೀಗ ಜನಸಂಚಾರವಿಲ್ಲದ ।
ಜಾಗದೊಳಗೆಂದೆನುತ ವಿಸ್ಮಿತ ।
ನಾಗುತಂದು ॥ 275 ॥

ಒಳಪೊಗುತ ನೋಡಲ್ಕೆ ದೇಗುಲ ।
ದೊಳಗಡೆಯೊಳೊಂದೆಡೆ ಕುಮಾರಿಯು ।
ಮಲಗಿರಲು ಮಂಚದೊಳಗಚ್ಚರಿ ।
ಗೊಳುತಲಂದು ॥ 276 ॥

ಆರಿವಳು ಈ ಘೋರವಿಪಿನದಿ ।
ಸಾರಿ ನಿರ್ಭಯದಿಂದ ನಿದ್ರಿಪ ।
ನಾರಿ ಯಾರಿರಬಹುದು ರಾಜಕು ।
ಮಾರಿಯಂತೆ ॥ 277 ॥

ರಾಜಲಕ್ಷಣಭೂಷಿತಾಂಗಿ ಸ ।
ರೋಜವದನೆ ಸುಮಂಗಲಾನ್ವಿತೆ ।
ಸೋಜಿಗವಿದೆಂದೆನುತಲೆಣಿಸುತ ।
ತೇಜವರ್ಮ ॥ 278 ॥

॥ **ಭಾಮಿನಿ** ॥

ನಿದ್ದಿಸುವ ಬಾಲಕಿಯ ಸನಿಹಕೆ ।
ಸದ್ದುಗೊಡದ್ಯೆತಂದು ಕರೆಯಲು ।
ಮುದ್ದು ಕುವರಿಯು ಹಲವು ಯತ್ನದೊಳೇಳದಿರೆ ಕಂಡು ॥
ಹೊದ್ದಿದಚ್ಚರಿಯಿಂದ ಶಿರದೆಡೆ ।
ಗಿದ್ದ ದಂಡವನೆತ್ತೆ ಕಣ್ತೆರೆ ।
ದೆದ್ದು ಕುಳಿತತಿವಿಸ್ಮಯದೊಳಿಂತೆಂದಳವನೊಡನೆ ॥ 279 ॥

॥ **ಸಾಂಗತ್ಯ - ರೂಪಕತಾಳ** ॥

ಯಾರಯ್ಯ ನೀನಿಲ್ಲಿಗೇತಕ್ಕೈತಂದಿಹೆ ।
ಘೋರ ರಕ್ಕಸವಾಸ ಸ್ಥಳಕೆ ॥
ಸಾರಿಲ್ಲ ನಿಲದಿರು ಕಂಡರೆಂದಿಗು ನಿನ್ನ ।
ತೀರಿಸದುಳಿಯನ್ನೈ ತೆರಳು ॥ 280 ॥

॥ **ರಾಗ ಸುರುಟಿ - ಏಕತಾಳ** ॥

ಕಂಜವದನೆ ಕೇಳೆ । ಎನಗಾ ।
ರಂಜಿಕೆ ಇಲ್ಲೇಳೆ ॥
ಭಂಜಿಪೆ ದುರುಳನ । ನಂಜಿಕೆ ಬಿಡು ಖಳ ।
ನಂ ಜವಗಟ್ಟುವೆ । ಕುಂಜರಗಾಮಿನಿ ॥ 281 ॥

॥ **ಸಾಂಗತ್ಯ – ರೂಪಕತಾಳ** ॥

ಲೇಸಾದುದೈ ನಿನ್ನ ಧೈರ್ಯಸಾಹಸ ನೋಡಿ ।
ತೋಷಗೊಂಡೆನು ನಿನಗಾವ ॥
ದೇಶವಾರಾತ್ಮಸಂಭವ ನೀನೀಗಿಂಥ ಪ್ರ ।
ದೇಶಕ್ಕೈದಿಹ ಕಾರ್ಯವೇನು ॥ 282 ॥

॥ **ರಾಗ ಸುರುಟಿ – ಏಕತಾಳ** ॥

ಹರಿಣಾಂಬಕಿಯೆನ್ನ । ಪಿತ ಶಿವ ।
ಪುರಪತಿ ಶಿವವರ್ಮ ॥
ತೆರಳುತ ಬೇಟೆಗೆ । ಚರಿಸುತ ಮಾರ್ಗವ ।
ತೊರೆದೈತಂದೆನು । ತರುಣಿ ನೀನಾರೆಲೆ ॥ 283 ॥

॥ **ಸಾಂಗತ್ಯ – ರೂಪಕತಾಳ** ॥

ವೀರ ಕೇಳ್ಕೆ ಬ್ರಹ್ಮದೇಶದರಸನ ಕು ।
ಮಾರಿ ಮತ್ಪಿತ ಬ್ರಹ್ಮವ್ರತನು ॥
ಈ ರಕ್ಕಸನು ಮೋಸದೊಳು ಕದ್ದುತಂದೆನ್ನ ।
ನೀ ರೀತಿ ಸೆರೆಯೊಳಿಟ್ಟಿಹನು ॥ 284 ॥

॥ **ರಾಗ ಸುರುಟಿ – ಏಕತಾಳ** ॥

ಶರಜವದನೆ ನಿನ್ನ । ಏತಕೆ ।
ಸೆರೆಗಿರಿಸಿಹ ಮುನ್ನ ॥
ಅರುಹು ನಿಜವ ಭಯ । ವಿರಿಸದಿರೆಲೆ ತವ ।
ಸೆರೆಯನು ಬಿಡಿಸುವೆ । ತೊರೆಯಂಜಿಕೆಯನು ॥ 285 ॥

॥ **ವಾರ್ಧಕ** ॥

ನವಮೋಹನಾಂಗ ಲಾಲಿಸು ನಿನ್ನ ನುಡಿ ಮನಕೆ ।
ಸವಿಯಾದುದೆನಗೆ ಪದಿನಾರು ವತ್ಸರ ತುಂಬೆ ।
ದಿವಸ ಪದಿನಾರಿಹುದು ತುಂಬಿದಾಕ್ಷಣವೆನ್ನನೀ ಕಾಳಿಕಾದೇವಿಗೆ ॥
ತವಕದಿಂ ಬಲಿಗೊಟ್ಟು ದೇವಿಯಿಂ ಪಡೆವನಿ ।
ಷ್ಟವ ತಂದು ಸೆರೆಯೊಳಿಟ್ಟಿಹನಧಿಕ ಮಾಯಾವಿ ।
ಯವನೊಳವನರಿಯದವನಂ ಕೊಲ್ಲಲಸದಳವೆನಲು ಕೇಳ್ದು ನಗುತೆಂದನು ॥ 286 ॥

॥ **ರಾಗ ಸೌರಾಷ್ಟ್ರ – ತ್ರಿವುಡೆತಾಳ** ॥

ಯಾಕೆ ಭಯ ಬಿಡು ಮನದ ಸಂಶಯ ।
ವೀ ಕರಾಳನ ಗೆಲಿದು ನಿನ್ನನು ।

ಜೋಕೆಯಲಿ ಸೆರೆಬಿಡಿಸುವೆನು ಬಿಡು ।
ವ್ಯಾಕುಲವನು ॥ 287 ॥

ದುರುಳನಾತನ ಮನವೊಲಿಸಿ ಒಳ ।
ವರಿತು ಗೆಲುವಡುಪಾಯವನು ತಿಳಿ ।
ದರುಹು ಮುಂದಣ ಕಾರ್ಯವೆನ್ನದು ।
ಹರಿಣನೇತ್ರೆ ॥ 288 ॥

ಎಂದು ಮಾತಾಡುತ್ತಲಿರೆ ರವಿ ।
ಯಂದು ಪಶ್ಚಿಮಕಿಳಿಯೆ ಶಶಿಮುಖಿ ।
ಮುಂದಕಡಗಿರು ರಕ್ಕಸನು ಬಹ ।
ನೆಂದು ತಿಳುಹೆ ॥ 289 ॥

ಕೇಳಿ ಭಯಗೊಳದೆಂದ ನಡುಗೆನು ।
ವೇಳೆಯರಿತಾತನನು ಕೊಲ್ಲುವೆ ।
ತಾಳು ಧೈರ್ಯವನೆನಲು ನುಡಿದಳು ।
ಲೋಲನಯನೆ ॥ 290 ॥

ಛಲವಗೊಳದಿರು ನಿನ್ನ ನೋಡಲು ।
ಕಲಹವಲ್ಲದೆ ಒಳವನರುಹನು ।
ತಿಳಿಯೆನಲು ನಿಜವೆನುತಲಡಗಲು ।
ಬಳಿಕಲತ್ತ ॥ 291 ॥

॥ **ಕಂದಪದ್ಯ** ॥

ತರಳೆಯು ಕಂಗಳ ಮುಚ್ಚುತ ।
ಲೊರಗಿರೆ ನಿದ್ರಿಸಿದಂದದೊಳರಿಯದ ತೆರದಿಂ ॥
ದುರುಳನು ಸನಿಹಕೆ ತಾ ಬಂ ।
ದರವಿಂದಾಕ್ಷಿಯನೆಚ್ಚರಗೊಳಿಸುತ ನುಡಿದಂ ॥ 292 ॥

॥ **ರಾಗ ಕೇದಾರಗೌಳ – ಅಷ್ಟತಾಳ** ॥

ಬಾಲಕಿ ಕೇಳು ಎದ್ದೇಳು ತಂದಿಹೆ ಕಂದ ।
ಮೂಲವ ತಿಂದು ನೀನು ॥
ಬೀಳುಗೊಳಿಸು ಹಸಿವೆಯನೆಂದು ಕೊಡಲು ಕಂ ।
ಡಾ ಲತಾಂಗಿಯು ಪೇಳ್ದಳು ॥ 293 ॥

ದಿನನಿತ್ಯವೆನ್ನನೆಚ್ಚರದಪ್ಪಿಸುತ ಪೋಗಿ ।
ಮನ ಬಂದಂತೈತರಲು ॥

ತನಗಿನ್ನು ಗತಿಯಾರು ನಿನ್ನ ಪ್ರಾಣದ ಭಯ ।
ವೆನಗೆನಲಿಂತೆಂದನು ॥ 294 ॥

ತರಳಾಕ್ಷಿ ಕೇಳೆನ್ನೊಳಿನಿತು ನಿನಗೆ ಮೋಹ ।
ವಿರಲಂಜಿಕೆಯದೇತಕೆ ॥
ಪರರಿಂದ ಮರಣವಿಲ್ಲತಿರಹಸ್ಯದೊಳಿಹು ।
ದರಿಯೆ ನೀನೆನಲೆಂದಳು ॥ 295 ॥

ಅಂಥಾ ರಹಸ್ಯವೇನೆನ್ನೊಳರುಹೆ ನಿನ ।
ಗೆಂತು ಮೋಸವದಾಗದು ॥
ಎಂತಾದರೆನ್ನ ಜೀವವು ನಿನ್ನೊಳಿರೆ ಭಯ ।
ವೆಂತು ಪೇಳೆನಲೆಂದನು ॥ 296 ॥

ಕೇಳಾದರೆನ್ನ ಪ್ರಾಣವು ಜುಟ್ಟಿನೊಳಗಿದೆ ।
ಮೂಲ ಕತ್ತರಿಸಿದರೆ ॥
ಬಾಳುವೆ ತೀರಿತಲ್ಲದೆ ಗೆಲಲರಿಯದು ।
ಮೇಲಾವ ಪಥಗಳಿಲ್ಲ ॥ 297 ॥

॥ **ಭಾಮಿನಿ** ॥

ಇದನು ನಿನ್ನೊಳು ಮಾತ್ರವರುಹಿದೆ ।
ಸುದತಿ ಕೇಳಿದನರಿಯರನ್ಯರು ।
ಬೆದರಬೇಡೆಂದವಳ ಸಂತೈಸುತ್ತ ರಕ್ಕಸನು ॥
ಮುದದಿ ಪವಡಿಸಿ ನಿಶಿಗಳೆದು ರವಿ ।
ಯುದಯದಲಿ ದಿನದಂತೆ ಮಲಗಿಸಿ ।
ವಿಧುಮುಖಿಯ ಶಿರದೆಡೆಗೆ ದಂಡವನಿತ್ತು ತೆರಳಿದನು ॥ 298 ॥

॥ **ರಾಗ ಕಾಂಭೋದಿ – ಝಂಪೆತಾಳ** ॥

ಆ ವೇಳೆಯೊಳಗಡಗಿದಾ ವಸುಧೆಪತಿಯಣುಗ ।
ನಾ ವನಿತೆಯೆಡೆಗಾಗಿ ಬಂದು ॥
ಭಾವಕಿಯ ಶಿರದೆಡೆಯೊಳಿರುವ ದಂಡವ ತೆಗೆಯ ।
ಲಾ ವನಜಮುಖಿಯು ಕಣ್ದೆರೆದು ॥ 299 ॥

ನೋಡಿ ಧರಣಿಪ ಸುತನ ಕೂಡೆ ನಗುತೆಂದಳೆಲೆ ।
ರೂಢಿಪಾತ್ಮಜನೆ ಸುಲಭದಲಿ ॥
ಮೂಢನ ರಹಸ್ಯ ಕೈಗೂಡಿತಂಜದಿರಿನ್ನು ।
ನೋಡಿ ತಿಳುಹುವೆನಂತರವನು ॥ 300 ॥

ದುರುಳನ ಶಿಖಾಮೂಲವರಿಯಲದರೊಳಗವನ ।
ಹರಣ ಮತ್ತಖಿಳ ಶಕ್ತಿಗಳು ॥
ಹರಿವುದಿದರೊಳವರಿತೆ ನೀನು ಸಮಯವ ಸಾಧಿ ।
ಸಿರುತ ಗೆಲು ಖಳನನೆಂದೆನಲು ॥ 301 ॥

ಭಳಿರೆ ಶಹಭಾಸು ಖಳನೊಳವೆನಿತು ಸುಲಭದಲಿ ।
ತಿಳಿದೆಯತಿಜಾಣೆಯಹುದೆನುತ ॥
ನಳಿನಮುಖಿಯೊಡನೆಂದ ಖಳನಿಂದು ಬರೆ ನಿಶಿಯೊ ।
ಳಳುಕದೆಸಗುವೆ ಯತ್ನವೆನುತ ॥ 302 ॥

ನೀರಜಾಂಬಕಿಯ ಮುನ್ನಿನ ತೆರದಿ ಮಲಗಿಸುತ ।
ಚಾರು ದಂಡವ ಶಿರಸಿನೆಡೆಗೆ ॥
ಸೇರಿಸುತಲಡಗೆ ರವಿ ಜಾರೆ ರಕ್ಕಸನು ಬಂ ।
ದೋರಂತೆ ನಿತ್ಯದಂದದಲಿ ॥ 303 ॥

॥ **ವಾರ್ಧಕ** ॥

ಎಚ್ಚರಿಸುತಬುಜಾಕ್ಷಿಯಂ ತಂದ ತಿನಿಸುಗಳ ।
ಬಿಚ್ಚಿ ಹಸಿವಡಗಿಸುತಲೊಂದೆಡೆಯ ಸೇರಿ ಮನ ।
ಸ್ವಚ್ಛದಿಂದೊರಗಿರಲ್ ಗಾಢನಿದ್ರೆಯ ಸಮಯವರಿತಾ ನೃಪಾತ್ಮಭವನು ॥
ಎಚ್ಚರಾಗದ ತೆರದೊಳೈತಂದು ಖಡ್ಗದಿಂ ।
ಕೆಚ್ಚೆದೆಯೊಳವನ ಶಿಖೆಯನ್ನರಿಯೆ ನಿಮಿಷದೊಳ ।
ಗೆಚ್ಚರಾಗುತಲೆದ್ದು ಖಳನು ತಡವರಿಸಿ ಶಿರವಂ ಮೋಸವೆಂದರಿಯುತ ॥304॥

॥ **ರಾಗ ಘಂಟಾರವ – ಅಷ್ಟತಾಳ** ॥

ಏನಿದೆನ್ನನು ವಂಚಿಸಿ ಗುಟ್ಟರಿ ।
ದೀ ನಿತಂಬಿನಿ ಇನಿತು ಮೋಸದಿ ।
ಹಾನಿಗೈದಳೆ ಭಾಪುರೆ ॥ 305 ॥

ಮೋಸದಿಂದರಿದೆನ್ನನುಪಾಯದಿ ।
ಘಾಸಿಮಾಡುತಲಡಗೆ ಬಿಡುವೆನೆ ।
ಭಾಸುರಾಂಗಿಯೆ ನಿನ್ನನು ॥ 306 ॥

ಎಂದು ಕೋಪದಿ ಪಿಡಿದೆಳೆಯಲು ಬಾಲೆ ।
ಯಂದು ಗೋಳಿಡೆ ತೇಜವರ್ಮನು ।
ಬಂದು ತಡೆದಿಂತೆಂದನು ॥ 307 ॥

ತನಗಿನ್ನು ಗತಿಯಾರು ನಿನ್ನ ಪ್ರಾಣದ ಭಯ ।
ವೆನಗೆನಲಂತೆಂದನು ॥ 294 ॥

ತರಳಾಕ್ಷಿ ಕೇಳೆನ್ನೊಳಿನಿತು ನಿನಗೆ ಮೋಹ ।
ವಿರಲಂಜಿಕೆಯದೇತಕೆ ॥
ಪರರಿಂದ ಮರಣವಿಲ್ಲತಿರಹಸ್ಯದೊಳಿಹು ।
ದರಿಯೆ ನೀನೆನಲೆಂದಳು ॥ 295 ॥

ಅಂಥಾ ರಹಸ್ಯವೇನೆನ್ನೊಳರುಹೆ ನಿನ ।
ಗೆಂತು ಮೋಸವದಾಗದು ॥
ಎಂತಾದರೆನ್ನ ಜೀವವು ನಿನ್ನೊಳಿರೆ ಭಯ ।
ವೆಂತು ಪೇಳೆನಲೆಂದನು ॥ 296 ॥

ಕೇಳಾದರೆನ್ನ ಪ್ರಾಣವು ಜುಟ್ಟಿನೊಳಗಿದೆ ।
ಮೂಲ ಕತ್ತರಿಸಿದರೆ ॥
ಬಾಳುವೆ ತೀರಿತಲ್ಲದೆ ಗೆಲಲರಿಯದು ।
ಮೇಲಾವ ಪಥಗಳಿಲ್ಲ ॥ 297 ॥

॥ **ಭಾಮಿನಿ** ॥

ಇದನು ನಿನ್ನೊಳು ಮಾತ್ರವರುಹಿದೆ ।
ಸುದತಿ ಕೇಳಿದನರಿಯರನ್ಯರು ।
ಬೆದರಬೇಡೆಂದವಳ ಸಂತೈಸುತ್ತ ರಕ್ಕಸನು ॥
ಮುದದಿ ಪವಡಿಸಿ ನಿಶಿಗಳೆದು ರವಿ ।
ಯುದಯದಲಿ ದಿನದಂತೆ ಮಲಗಿಸಿ ।
ವಿಧುಮುಖಿಯ ಶಿರದೆಡೆಗೆ ದಂಡವನಿತ್ತು ತೆರಳಿದನು ॥ 298 ॥

॥ **ರಾಗ ಕಾಂಭೋದಿ – ಝಂಪೆತಾಳ** ॥

ಆ ವೇಳೆಯೊಳಗಡಗಿದಾ ವಸುಧೆಪತಿಯಣುಗ ।
ನಾ ವನಿತೆಯೆಡೆಗಾಗಿ ಬಂದು ॥
ಭಾವಕಿಯ ಶಿರದೆಡೆಯೊಳಿರುವ ದಂಡವ ತೆಗೆಯ ।
ಲಾ ವನಜಮುಖಿಯು ಕಣ್ದೆರೆದು ॥ 299 ॥

ನೋಡಿ ಧರಣಿಪ ಸುತನ ಕೂಡೆ ನಗುತೆಂದಳೆಲೆ ।
ರೂಢಿಪಾತ್ಮಜನೆ ಸುಲಭದಲಿ ॥
ಮೂಢನ ರಹಸ್ಯ ಕೈಗೂಡಿತಂಜದಿರಿನ್ನು ।
ನೋಡಿ ತಿಳುಹುವೆನಂತರವನು ॥ 300 ॥

ದುರುಳನ ಶಿಖಾಮೂಲವರಿಯಲದರೊಳಗವನ ।
ಹರಣ ಮತ್ತಖಿಳ ಶಕ್ತಿಗಳು ॥
ಹರಿವುದಿದರೊಳವರಿತೆ ನೀನು ಸಮಯವ ಸಾಧಿ ।
ಸಿರುತ ಗೆಲು ಖಳನನೆಂದೆನಲು ॥ 301 ॥

ಭಳಿರೆ ಶಹಭಾಸು ಖಳನೊಳವೆನಿತು ಸುಲಭದಲಿ ।
ತಿಳಿದೆಯತಿಜಾಣೆಯಹುದೆನುತ ॥
ನಳಿನಮುಖಿಯೊಡನೆಂದ ಖಳನಿಂದು ಬರೆ ನಿಶಿಯೊ ।
ಳಳುಕದೆಸಗುವೆ ಯತ್ನವೆನುತ ॥ 302 ॥

ನೀರಜಾಂಬಕಿಯ ಮುನ್ನಿನ ತೆರದಿ ಮಲಗಿಸುತ ।
ಚಾರು ದಂಡವ ಶಿರಸಿನೆಡೆಗೆ ॥
ಸೇರಿಸುತಲಡಗೆ ರವಿ ಜಾರೆ ರಕ್ಕಸನು ಬಂ ।
ದೋರಂತೆ ನಿತ್ಯದಂದದಲಿ ॥ 303 ॥

॥ **ವಾರ್ಧಕ** ॥

ಎಚ್ಚರಿಸುತಬುಜಾಕ್ಷಿಯಂ ತಂದ ತಿನಿಸುಗಳ ।
ಬಿಚ್ಚಿ ಹಸಿವಡಗಿಸುತಲೊಂದೆಡೆಯ ಸೇರಿ ಮನ ।
ಸ್ವಚ್ಛದಿಂದೊರಗಿರಲ್ ಗಾಢನಿದ್ರೆಯ ಸಮಯವರಿತಾ ನೃಪಾತ್ಮಭವನು ॥
ಎಚ್ಚರಾಗದ ತೆರದೊಳೈತಂದು ಖಡ್ಗದಿಂ ।
ಕೆಚ್ಚೆದೆಯೊಳವನ ಶಿಖೆಯನ್ನರಿಯೆ ನಿಮಿಷದೊಳ ।
ಗೆಚ್ಚರಾಗುತಲೆದ್ದು ಖಳನು ತಡವರಿಸಿ ಶಿರವಂ ಮೋಸವೆಂದರಿಯುತ ॥304॥

॥ **ರಾಗ ಘಂಟಾರವ - ಅಷ್ಟತಾಳ** ॥

ಏನಿದೆನ್ನನು ವಂಚಿಸಿ ಗುಟ್ಟರಿ ।
ದೀ ನಿತಂಬಿನಿ ಇನಿತು ಮೋಸದಿ ।
ಹಾನಿಗೈದಳೆ ಭಾಪುರೆ ॥ 305 ॥

ಮೋಸದಿಂದರಿದೆನ್ನನುಪಾಯದಿ ।
ಘಾಸಿಮಾಡುತಲಡಗೆ ಬಿಡುವೆನೆ ।
ಭಾಸುರಾಂಗಿಯೆ ನಿನ್ನನು ॥ 306 ॥

ಎಂದು ಕೋಪದಿ ಪಿಡಿದೆಳೆಯಲು ಬಾಲೆ ।
ಯಂದು ಗೋಳಿಡೆ ತೇಜವರ್ಮನು ।
ಬಂದು ತಡೆದಿಂತೆಂದನು ॥ 307 ॥

|| **ರಾಗ ಮಾರವಿ – ಏಕತಾಳ** ||

ಎಲ ಎಲ ದುಷ್ಟ ಖಳಾಧಮ ಮೋಸದಿ ।
ಲಲನೆಯ ತಂದಿಲ್ಲಿ ॥
ಬಲಿಗೊಡುವಿಚ್ಛೆಯಲಿರ್ದವಗೀ ಪ್ರತಿ ।
ಫಲವಾಯಿತು ಕೇಳು || 308 ||

ಮೋಸದಿ ನಂಬಿಸಿದಾತನ ವಧಿಸಲು ।
ಮೋಸವೆ ಸರಿಯಿದಕೆ ॥
ದೋಷಗಳಿಲ್ಲವು ನಿನ್ನ ರಹಸ್ಯವು ।
ಕೈಸೇರಿಹುದೆನಗೆ || 309 ||

ನೋಡೆನುತಾತನ ಪಿಡಿದಪ್ಪಳಿಸಲು ।
ಖೋಡಿಯು ನಡುನಡುಗಿ ॥
ರೂಢಿಯೊಳುರುಳತಲೇಳುತ ಮಿಗೆ ಕೈ ।
ಜೋಡಿಸುತಿಂತೆಂದ || 310 ||

|| **ರಾಗ ಸಾವೇರಿ – ಅಷ್ಟತಾಳ** ||

ಬೇಡ ಕೊಲ್ಲದಿರೆನ್ನ ನೀನು । ದಯ ।
ಮಾಡಿ ಕೈಮುಗಿದು ಬೇಡುವೆನು ॥
ಮಾಡಿಕೊಂಡಿರ್ಪೆನೀ । ನಾಡಿದಂದದಿ ಸೇವೆ ।
ನೀಡೆನ್ನ ಜೀವದಾ । ನವನಡಿಗೆರಗುವೆ || 311 ||

|| **ರಾಗ ಕೇದಾರಗೌಳ – ಝಂಪೆತಾಳ** ||

ಘೋರಪಾತಕಿ ನಿನ್ನನು । ಬಿಡೆ ಮೋಸ ।
ಗಾರನೆಂದಿಗು ನಂಬೆನು ॥
ಈ ರೀತಿಯೊಳು ವಂಚಿಸಿ । ಎನ್ನ ನೀ ।
ಗಾರುಗೆಡಿಸುವೆ ನಂಬಿಸಿ || 312 ||

|| **ರಾಗ ಸಾವೇರಿ – ಅಷ್ಟತಾಳ** ||

ಬರಿದೇತಕೆನ್ನೊಳು ನೀನು । ಶಂಕಿ ।
ಸಿರುವೆ ಕೇಳೆನ್ನ ಸತ್ಯವನು ॥
ನೆರೆ ನೀನು ತೆಗೆದಿರ । ಲೆನ್ನೊಳೇನಾಗುವ ।
ದರಿತೆನ್ನ ಕೊಲದಿರು । ಶರಣೆಂಬೆ ದಮ್ಮಯ್ಯ ॥ 313 ||

॥ **ರಾಗ ಕೇದಾರಗೌಳ - ಝಂಪೆತಾಳ** ॥

ಇನಿತಿರಲ್ಕೆನಗೆ ನೀನು । ಸಹಕಾರ ।
ವನು ಮಾಳ್ಪುದೊಂದಿದರನು ॥
ಎನಗೆ ಕೈಗೂಡಿಸಿದರೆ । ಸೆರೆಬಿಡುವೆ ।
ಎನಲೆಂದ ಕೈಮುಗಿದುರೆ ॥ 314 ॥

॥ **ರಾಗ ಸಾವೇರಿ - ಅಷ್ಟತಾಳ** ॥

ಎನ್ನಿಂದಾಗುವ ಸಹಕಾರ । ಏನೆಂ ।
ದೆನ್ನೊಡನರುಹಯ್ಯ ಶೂರ ॥
ಅನ್ಯವೆಣಿಸದಿರು ಮಾಳ್ಪೆ ನೀನೆಂದುದ ।
ನಿನ್ನಾಣೆ ಸಟೆಯಲ್ಲವೆನಲೊಡನರುಹಿದ ॥ 315 ॥

॥ **ರಾಗ ಕೇದಾರಗೌಳ - ಝಂಪೆತಾಳ** ॥

ಕೇಳಾದಡೆನ್ನ ಪಿತನು । ಜೀವಿಸುವ ।
ಮೂಲವರಿತೆಸಗೊಂದನು ॥
ಖೂಳ ಮಂತ್ರಿಯ ಗೆಲುವರೆ । ಸೈನಿಕರ ।
ಮೇಳವಿಸು ನಿನಗಾದರೆ ॥ 316 ॥

॥ **ಭಾಮಿನಿ** ॥

ಎನಲು ಕೇಳುತ ಮಂತ್ರದಂಡವ ।
ನೆನಗೆ ಕೊಡು ನೀನೆಂದ ಕಾರ್ಯವ ।
ನನುಗೊಳಿಪೆನೆಂದೆನಲು ನಂಬದಿರಲ್ಕೆ ಮಗುಳೆಂದ ॥
ಇನಿತು ಎನ್ನಯ ಹರಣಶಕ್ತಿಯು ।
ನಿನಗಿರಲು ಬರೆ ದಂಡದಿಂದೇ ।
ನೆಣಿಸದಿರು ನಿನಗೋಸ್ಕರವೆ ಬೇಡಿದೆನು ಕೊಡಿಸೆನಲು ॥ 317 ॥

॥ **ಕಂದಪದ್ಯ** ॥

ಕೊಡಲಾ ದಂಡವ ಕೈಗೊಂ ।
ಡೊಡನಂ ಮಂತ್ರಿಸೆ ಭರಣಿಗಳೆರಡುದ್ಭವಿಸಲ್ ॥
ಪೊಡವಿಪನಣುಗನ ಕರೆದವ ।
ನೊಡನಿತ್ತರುಹಿದನದರೊಳಗಡಗಿಹ ಗುಣಮಂ ॥ 318 ॥

॥ **ರಾಗ ನವರೋಜು - ಏಕತಾಳ** ॥

ಧರಣೀಶಾತ್ಮಜ ಕೇಳು । ನಿನ ।
ಗೊರೆಯುವೆನೀ ಭರಣಿಗಳು ॥

ಇರುವವೆರಡರೊಳಗೊಂದರ ಬಿಳಿಹುಡಿ ।
ಎರಚಲು ನಿನ್ನಯ ಪಿತ ಜೀವಿಸುವನು ॥ 319 ॥

ಮತ್ತೊಂದೀ ಭರಣಿಯಲಿ । ಹುಡಿ ।
ಬಿತ್ತಲು ಈ ಧರಣಿಯಲಿ ॥
ಪತ್ತಿ ಹಯವು ಸೈನಿಕ ಸಹಿತೇಳ್ವರು ।
ಮತ್ತವರನು ಕೂಡುತ್ತ ಗೆಲುವೆ ದಿಟ ॥ 320 ॥

ಎಂದೆನುತಾ ಭರಣಿಗಳಾ । ನೃಪ ।
ನಂದನಗೀಯುತಲಿ ಖಳ ॥
ವಂದಿಸಿ ಮುಂದೆನಗಪ್ಪಣೆ ಕರುಣಿಸು ।
ದೆಂದೆನೆ ದುರುಳನೊಳೆಂದನು ನಗುತಲಿ ॥ 321 ॥

॥ **ವಾರ್ಧಕ** ॥
ಇಂದಿನಾರಭ್ಯ ನೀನೀ ಪ್ರಾಂತ್ಯಪರಿಧಿಯೊಳ ।
ಗೆಂದಾದರೂ ಬಾರದೈದೆನಲ್ ಕೈಮುಗಿವು ।
ತೆಂದ ನಿನ್ನಿಚ್ಛೆಯಂದದಿ ಗೈವೆ ಬಾರೆ ನಿನ್ನಿಂದಾದುದುಪಕೃತಿಯಲಿ ॥
ಮುಂದಿವಳ ನೀ ಕೂಡಿ ಸತಿಪತಿಗಳಾಗಿ ಸುಖ ।
ದಿಂದ ಬಾಳುವುದೆನುತಲಾಶೀರ್ವಚನ ಗೈದು ।
ಸಂದನುತ್ತರ ದೆಸೆಯ ಮಾರ್ಗವಿಡಿದಾ ಖಳಂ ಮುಂದೊರವೆ ನಡೆದಿರ್ಪುದ ॥ 322 ॥

॥ **ರಾಗ ಮಧುಮಾಧವಿ – ತ್ರಿವುಡೆತಾಳ** ॥
ಬಳಿಕಲಿತ್ತಲು ತೇಜವರ್ಮನು ।
ನಳಿನಗಂಧಿಯ ಜೊತೆಗೊಳುತ್ತಲೆ ।
ನಿಳಯಕೈತರಲಿತ್ತಲಾಶ್ರಮ ।
ದೊಳಗೆ ನಯನಾದೇವಿಯು ॥ 323 ॥

ಕಂದನಡವಿಗೆ ಪೋಗೆ ನಿತ್ಯವು ।
ಬಂದಪನು ರವಿಯಸ್ತಮಯದೊಳು ।
ನಿಂದಿದೇನಿರಬಹುದೆರಡುದಿನ ।
ಸಂದವಿನ್ನೇನಾದನೊ ॥ 324 ॥

ಎನುತ ಯೋಚಿಸುತಿರಲು ಭೂಮಿಪ ।
ನಣುಗ ಭೂಮಿಕೆಯೊಡನೆ ಬರಲಾ ।

ವನಿತೆಯಾನಂದಾಶ್ರು ತುಂಬಲು ।
ತನಯನನು ಬಿಗಿದಪ್ಪುತ ॥ 325 ॥
ಬಂದೆಯಾ ಸುಕ್ಷೇಮದಲಿ ವನ ।
ಕೆಂದು ತೆರಳಿದ ನಿನ್ನ ನೋಡದೆ ।
ಬೆಂದು ಮನದೊಳು ಬಳಲುತಿರಲ್ಕೆ ।
ತಂದೆ ಸಂತಸವಾದುದು ॥ 326 ॥

ಯಾರಿವಳು ನಿನಗೆಲ್ಲಿ ದೊರಕಿಹ ।
ಆರ ಸುತೆ ಪೆಸರೇನು ದೊರೆತ ವಿ ।
ಚಾರವರುಹೆನಲೆರಗುತತಿ ವಿ ।
ಸ್ತಾರದಿಂದೊಡನರುಹಿದ ॥ 327 ॥

॥ **ರಾಗ ಸುರುಟಿ – ಏಕತಾಳ** ॥
ಲಾಲಿಪುದೆಲೆ ಮಾತೆ । ಸುಗುಣವಿ ।
ಶಾಲೆ ಭಾಗ್ಯದಾತೆ ॥
ಬಾಲಕಿ ಇವಳಾ ಬ್ರಹ್ಮದೇಶವನು ।
ಪಾಲಿಪ ದೊರೆ ಬ್ರಹ್ಮವ್ರತನಣುಗೆಯು ॥ 328 ॥

ಖೂಳ ದನುಜನೋರ್ವ। ಇವಳನು ।
ಕಾಳಿಕೆಗರ್ಪಿಸುವ ॥
ಮೂಲೋದ್ದೇಶದೊಳೊಯ್ದು ಸೆರೆಯೊಳಿಡೆ ।
ಲೋಲಾಕ್ಷಿಯ ಪುಣ್ಯದೊಳಾನೈದೆನು ॥ 329 ॥

ದುರುಳನವನ ಜೈಸಿ । ಸಿಕ್ಕಿದ ।
ತರಳೆಯ ಸೆರೆಬಿಡಿಸಿ ॥
ಕರೆತಂದಿಹೆನೆನಲಚ್ಚರಿಗೊಳುತಲಿ ।
ತರಳನ ಸಾಹಸಕುರೆ ಮನಮೆಚ್ಚುತ ॥ 330 ॥

ನಿನ್ನಂದದ ಸುತನ । ಪಡೆದುರೆ ।
ಧನ್ಯತೆವಡೆದೆನು ನಾ ॥
ಎನ್ನಲು ಜನನಿಗೆ ನಮಿಸಿ ವಿಶೇಷಗ ।
ಳನ್ನೊಂದಿದೆ ಪಿತನನ್ನು ಜೀವಿಪೆನು ॥ 331 ॥

॥ **ಭಾಮಿನಿ** ॥

ಏನದೆನಲೆನ್ನವ್ವ ಕೇಳಾ ।
ದಾನವೇಂದ್ರನು ಮೆಚ್ಚಿ ಜನಕಗೆ ।
ಪ್ರಾಣ ಬರುವಂತೊಂದುಪಾಯವನರುಹಿ ಮಂತ್ರಿಯನು ॥
ಗೋಣರಿಯೆ ಸೈನಿಕವನೇ ನಿ ।
ರ್ಮಾಣ ಗೈವವುಪಾಯವರುಹಿದ ।
ಕಾಣಬಹುದಯ್ಯನನು ಜೀವಿಪೆನೆನಲು ಹರುಷದಲಿ ॥ 332 ॥

॥ **ಕಂದಪದ್ಯ** ॥

ಬಂದೆಲ್ಲರು ಒಂದಾಗುತ ।
ನಿಂದಿರಲಾ ಶಿವವರ್ಮನ ದೇಹದ ಬಳಿಗಂ ।
ನಂದನನಾ ಪುಡಿಯಂ ಮುದ ।
ದಿಂದೆರಚಲ್ ಕಣ್ದೆರೆದುಜ್ಜುತ ಕುಳಿತೆಂದಂ ॥ 333 ॥

॥ **ರಾಗ ಕಾಂಭೋದಿ – ಝಂಪೆತಾಳ** ॥

ಶಿವಶಿವೇನಾಶ್ಚರ್ಯವೆಂಥ ಸುಖ ನಿದ್ರೆ ಸಂ ।
ಭವಿಸಿತೆನಗೆಂದು ಮೈಮುರಿದು ॥
ತವಕದಿಂದತ್ತಿತ್ತ ನೋಡಲಾಶ್ಚರ್ಯದಿಂ ।
ಯುವತಿಯಾನಂದಕೇನೆನಲಿ ॥ 334 ॥

ಪತಿಯೆಡೆಗೆ ಬರಲು ಕಂಡತಿವಿಸ್ಮಯದೊಳೆಂದ ।
ಸತಿಯೊಡನಿದೇನು ತಾನೆಲ್ಲಿ ॥
ಸುತನೊಡನೆ ಬಂದುದೇಕಿಲ್ಲಿ ಸ್ಥಳವಾವುದಿದು ॥
ಅತಿವಿಚಿತ್ರಗಳೆನಲು ಪತಿಗೆ ॥ 335 ॥

ವಂದಿಸುತ ಮಂತ್ರಿಯಿಂ ಬಂದ ಬವಣೆಗಳೆಲ್ಲ ।
ಒಂದುಳಿಯದಂತೆ ತಿಳುಹಿಸುತ ॥
ಕಂದನಿವನಿಂದ ನಿಮಗಿಂದೀ ಪುನರ್ಜನ್ಮ ।
ಬಂದುದೆನೆ ಕೇಳಿ ನಾಚುತಲಿ ॥ 336 ॥

॥ **ರಾಗ ಕೇದಾರಗೌಳ – ಅಷ್ಟತಾಳ** ॥

ಮಡದೀಮಣಿಯೆ ನಿನ್ನ ನುಡಿ ಮೀರಿದುದಕಿಷ್ಟು ।
ಕಡುಬವಣೆಯಗೊಂಡೆನು ॥
ಕೆಡುಕ ಸಚಿವನಿಂಥಾ ನಡತೆಯುಳ್ಳವನೆಂದು ।
ನುಡಿದರು ನಂಬದಾದೆ ॥ 337 ॥

ನಿನ್ನ ಸೌಭಾಗ್ಯಮಂಗಲಯೋಗದಿಂ ಪುನ ।
ರ್ಜನ್ಮವೆನ್ನಣುಗನಿಂದ ॥
ಧನ್ಯವಡೆದೆನಿಂಥಾ ಸುತನ ಪಡೆದು ಪೂರ್ವ ।
ಪುಣ್ಯದೊಳೆನಲೆಂದಳು ॥ 338 ॥

ಅಡವಿಪಾಲಾದೆಮಗಾಶ್ರಯವಿತ್ತೆಮ್ಮ ।
ಹುಡುಗಗೆ ವಿದ್ಯೆಯನು ॥
ಕಡು ಮಮತೆಯೊಳಿತ್ತೀ ತನಕ ಪೊರೆದ ಮುನಿ ।
ಯಡಿಗೆ ವಂದಿಪುದೆಂದಳು ॥ 339 ॥

॥ **ಭಾಮಿನಿ** ॥

ಎಂದು ಪತಿಸುತ ಸಹಿತ ಮುನಿಯೆಡೆ ।
ಗಂದು ನಡೆತಂದೆರಗಲೆತ್ತುತ ।
ಬಂದ ಕಷ್ಟಗಳೆಲ್ಲ ಪರಿಹರವಾಯ್ತೆ ಹರಿದಯದಿ ॥
ಮುಂದೆ ನಿಮ್ಮಯ ರಾಜ್ಯವಶವಹು ।
ದಿಂದಣುಗ ತಂದೀ ಸತಿಯನಿವ ।
ಪೊಂದಿ ವೈವಾಹಿಕದಿ ಸುಖವಿರಲೆಂದು ಹರಸಿದನು ॥ 340 ॥

॥ **ರಾಗ ಸೌರಾಷ್ಟ್ರ – ತ್ರಿವುಡೆತಾಳ** ॥

ಮುನಿಪನನು ಬೀಳ್ಕೊಟ್ಟು ಜನಪನ ।
ತನಯನೊಡನಿಂತೆಂದ ಮಂತ್ರಿಯ ।
ನೆನಿತುಪಾಯದಿ ಜಯಿಸಬಹುದೆಂ ।
ದೆನಲುಸುರ್ದ ॥ 341 ॥

ಇದಕೆ ಚಿಂತೆಗಳೇಕೆ ಸೈನ್ಯವ ।
ನೊದಗಿಸುವೆ ಬಲಗೂಡುತಾತನ ।
ಮದಮುಖತ್ವವ ನಿಲಿಸಿ ದುಷ್ಟನ ।
ಸದೆದು ಬಳಿಕ ॥ 342 ॥

ಮಾಡಿದುಪಹತಿಗಾಗಿ ತೀರಿಸಿ ।
ಸೇಡನವನಿಯ ವಶಗೊಳಿಪೆ ಭಯ ।
ಬೇಡವೆನೆ ನಿಜಸುತನ ವಿಕ್ರಮ ।
ನೋಡಿ ನಲಿದು ॥ 343 ॥

ಮರುದಿವಸದುದಯದಲಿ ಸರ್ವರು ।
ವಿರಚಿಸುತ ನಿತ್ಯಾಹ್ನಿಕವ ಪೊರ ।
ಟುರುತರಾವೇಶದಲಿ ಧರಣಿಪ ।
ತರಳನಂದು ॥ 344 ॥

ರಕ್ಕಸನು ಕರುಣಿಸಿದ ಪುಡಿಯನು ।
ತಕ್ಕ ಜಾಗದೊಳಿಡುತೆ ಮಾರ್ಬಲ ।
ಉಕ್ಕುತೇಳಲು ಶರಧಿಘೋಷದಿ ।
ಸೊಕ್ಕಿ ನಲಿದು ॥ 345 ॥

॥ **ಭಾಮಿನಿ** ॥

ಯುದ್ಧ ಮಾರ್ಬಲ ನೋಡುತವನಿಪ ।
ನದ್ದಿ ಹರುಷಾಬ್ಧಿಯೊಳು ತನ್ನಯ ।
ಮುದ್ದುಕುವರನ ವಿಕ್ರಮಕೆ ಮನಮೆಚ್ಚಿ ಸೈನಿಕರ ॥
ಸಿದ್ಧಗೊಳಿಸುತ ಕೂಡಿ ಶಿವಪುರ ।
ಕೆದ್ದು ಧಾಳಿಯನಿಡಲು ಧರಣಿಪ ।
ನಿದ್ದ ಪರಿಯರಿತಾಗ ಚಾರನು ಸಚಿವಗರುಹಿದನು ॥ 346 ॥

॥ **ರಾಗ ಕಾಂಭೋದಿ – ಝಂಪೆತಾಳ** ॥

ಲಾಲಿಸೆನ್ನೊಡೆಯ ಶಿವವರ್ಮಭೂಪತಿ ಸೈನ್ಯ ।
ಜಾಲದೊಡಗೂಡಿ ಮುತ್ತಿಹನು ॥
ಪೇಳಲಳವಲ್ಲವನ ಸುತ ತೇಜವರ್ಮ ಸಹಿ ।
ತೇಳು ಧುರಕೆನಲು ಭ್ರಮೆಗೊಳುತ ॥ 347 ॥

ಎಂದಿಗಾದರು ಸಾಧ್ಯವಾಗದಿದು ನೃಪನಳಿದು ।
ಸಂದುಗೆಂಟಬ್ಧಿವೀತನಕ ॥
ಬಂದನೆಂಬುದ ನಂಬಲಾರೆನವನಣುಗನನು ।
ಅಂದೆ ಕೊಲದುಳಿದು ಕೆಡುಕಾಯ್ತು ॥ 348 ॥

ಎನುತವನ ನುಡಿಪುಸಿಯೊ ನೋಡಿ ತಿಳಿದಪೆನೆನುತ ।
ಘನಜನವದಿ ಬರಲು ಮುಂದರಿದು ॥
ಅನಿತರೊಳು ನೃಪನಣುಗನಾರ್ಭಟಿಸುತ್ತೈತಂದು ।
ಕೆಣಕುತೆಂದನು ಸಚಿವನೊಡನೆ ॥ 349 ॥

॥ ರಾಗ ಮಾರವಿ – ಏಕತಾಳ ॥

ಫಡಫಡ ಖೂಳ ನರಾಧಮ ಸಾಕಿದ ।
ಪೊಡವಿಪನನು ಕೊಂದು ॥
ಒಡನೇರಿದೆ ವಿಷ್ಟರವೆಂದುಮ್ಮಹ ।
ಗೊಡದಿರು ಬಿಡೆನಿಂದು ॥ 350 ॥

ಸಾಕೆಲೊ ತರಳನೆ ಬರಿದತಿವಾದವ ।
ನೇಕೆನ್ನೊಡನಿಡುವೆ ॥
ಕಾಕು ಮೃಗಾಧಿಪನೊಯ್ದಿರೆ ಧರೆಯ ವಿ ।
ವೇಕದಿ ನಾನಾಳ್ದೆ ॥ 351 ॥
ಬಲ್ಲೆನು ಜನಕನ ಕೊಲ್ಲುತ ಮಳಲೊಳು ।
ಮೆಲ್ಲನೆ ಹೂಳಿಡುತ ॥
ಸುಳ್ಳಪವಾದವ ಹೊರಿಸುತ ಮೆಚ್ಚಿಸು ।
ತೆಲ್ಲರ ವಂಚಿಸಿದೆ ॥ 352 ॥

ಬಿಡುವೆನೆ ಜನಕನ ಜೀವಿಸಿ ತಂದಿಹೆ ।
ದಡಿಗನೆ ನಿಲ್ಲೆನುತ ॥
ಕಡು ರೋಷದಿ ಪಿಡಿದೊಡನಪ್ಪಳಿಸಲು ।
ಗಡಗಡ ನಡುಗುತಲಿ ॥ 353 ॥

ಇಲ್ಲಿರಲೆನ್ನನು ಕೊಲ್ಲದುಳಿಯನೆಂ ।
ದಲ್ಲಿಯೆ ಜುಣುಗುತಲಿ ॥
ನಿಲ್ಲದೆ ಓಡಲು ಬೆನ್ನಟ್ಟಲು ಖಳ ।
ಮಲ್ಲನ ರೋಷದಲಿ ॥ 354 ॥

॥ **ಭಾಮಿನಿ** ॥

ಇಂತು ಸಚಿವನು ಬೆದರುತೋಡುತ ।
ಗೊಂತರಿಯದಂತಡಗಿ ಪೋಗಲು ।
ಸಂತಸವಗೊಳುತಾಗ ಪ್ರಜೆಗಳನಂತಘೋಷದಲಿ ॥
ತಂತಮಗೆ ಬಂದಿದಿರುಗೊಂಡ ।
ತ್ಯಂತ ತೋಷದಿ ತಮ್ಮೊಡೆಯ ಜೀ ।
ವಂತ ಬಂದನೆನುತ್ತ ವೈಭವದಿಂದ ಕರೆತಂದು ॥ 355 ॥

॥ **ಕಂದಪದ್ಯ** ॥

ರಾಜಾಸನವೇರಿಸುತಂ ।
ಮಾಜದೆ ಕಾಣಿಕೆಗಳನಿತ್ತಭಿನಂದಿಸಲಾ ॥
ಸಾಜದೊಳವರಂ ಮನ್ನಿಸಿ ।
ರಾಜಿಸಿದಂ ಪೀಠದೊಳವನಿಪಕುಲತಿಲಕಂ ॥ 356 ॥

॥ **ವಾರ್ಧಕ** ॥

ಬಳಿಕಾ ನೃಪಂ ಬ್ರಹ್ಮದೇಶಕಂ ಚಾರಕರ ।
ಕಳುಹಿ ಬ್ರಹ್ಮವ್ರತಗೆ ಬಾಲಕಿಯ ಕುಶಲಮಂ ।
ತಿಳುಹಿ ಕರೆಸುತ ಭೂಮಿಕೆಯ ತೇಜವರ್ಮನಿಗೆ ಶುಭತಾರೆ ಶುಭಲಗ್ನದಿ ॥
ನಲವಿನಿಂ ವೈವಾಹವೆಸಗಿ ಸಂತೋಷದಿಂ ।
ದಿಳೆಯಧಿಪ ಸಹಿತರಸಿ ಸೌಭಾಗ್ಯವತಿಯಾದ ।
ಲಲನೆ ನಯನಾವತಿಯನೊಡಗೂಡಿ ಸುಖದಿಂದಲವನಿಯಂ ಪಾಲಿಸಿದನು ॥ 357 ॥

॥ **ರಾಗ ಸೌರಾಷ್ಟ್ರ – ತ್ರಿವುಡೆತಾಳ** ॥

ಇಂತೆಸೆವ ಚರಿತೆಯನು ತಿಳಿದಿರು ।
ವಂತೆ ರಚಿಸಿದೆ ಯಕ್ಷಗಾನದಿ ।
ಕಂತುಹರನ ಕಟಾಕ್ಷದಿಂದರಿ ।
ವಂತೆ ಮುದದಿ ॥ 358 ॥

ಎನ್ನ ಕುವರ ಉಮೇಶನೀ ಕಥೆ ।
ಯನ್ನು ತಂದಿದು ಯಕ್ಷಗಾನಕೆ ।
ಚೆನ್ನವಹುದೆನಲೊಪ್ಪಿ ನಾ ಕೃತಿ ।
ಯನ್ನು ಬರೆದೆ ॥ 359 ॥

ಇದು ಪುರಾಣೋಕ್ತದ ಚರಿತೆಯ ।
ಲ್ಲದಡೆ ಬೋಧಪ್ರದವು ಜನಕೆಂ ।
ಬುದ ಬಗೆದು ರಚಿಸಿದೆನು ತಿಳಿದವ ।
ರಿದನು ದಯದಿ ॥ 360 ॥

ತಪ್ಪಿರಲು ಸರಿಪಡಿಸಿ ಮೆರೆಸಿದ ।
ರಿಷ್ಟ ಕವಿತೆಯು ಸಾರ್ಥವಹುದೆಂ ।
ದೊಪ್ಪಿಸಿದೆನು ಕಲಾಭಿಮಾನದೊ ।
ಳಿಪ್ಪವರಿಗೆ ॥ 361 ॥

ಶಿರಿಪುರದ ಭೂವಿಬುಧರೊಳು ಪೆಸ ।
ರಿರುವ ದೇವಪ್ಪಯ್ಯನಾತ್ಮಜ ।
ಬರೆದೆ ಫಣಿಯಪ್ಪಯ್ಯ ಯಲಗೇ ।
ಶ್ವರನ ದಯದಿ ॥ 362 ॥

ವಿಶ್ವನಾಯಕ ವಿಶ್ವವಂದಿತ ।
ವಿಶ್ವವ್ಯಾಪಕ ವಿಶ್ವತೋಮಯ ।
ವಿಶ್ವದೊಳು ಮೆರೆಸೆಂಬೆ ಶ್ರೀ ಸಾ
ಯೀಶ್ವರನೊಳು ॥ 363 ॥

॥ **ಮಂಗಲಪದ** ॥

॥ **ಮಧ್ಯಮಾವತಿ – ಝಂಪೆತಾಳ** ॥

ಮಂಗಲಂ ಗೌರೀಮನೋಹರಗೆ ಶುಭಕರಗೆ ।
ಮಂಗಲಂ ಭೂತೇಶ ಜಗದೀಶಗೆ ॥
ಮಂಗಲಂ ನಿರ್ಮಲ ಶುಭಾಂಗ ಮಹಲಿಂಗನಿಗೆ ।
ಮಂಗಲಂ ಹಿಮಗಿರೀಶಗೆ ಈಶಗೆ ॥
ಜಯಮಂಗಲಂ ಸದಾ ಶುಭಮಂಗಲಂ ॥ 364 ॥

ಕಾಲಕಂಧರಗೆ ಕೈಲಾಸವಾಸಗೆ ಶಿವಗೆ ।
ಮೂಲೋಕ ರಕ್ಷನಿಗೆ ತ್ರಿಯಕ್ಷಗೆ ॥
ಕಾಲಕಾಲಗೆ ರುಂಡಮಾಲ ಭಸ್ಮಾಂಗನಿಗೆ ।
ಪಾಲಿತಾಮರಗೆ ಮನ್ಮಥಭಂಗಗೆ ॥
ಜಯಮಂಗಲಂ ಸದಾ ಶುಭಮಂಗಲಂ ॥ 365 ॥

ದೋಷನಾಶನಿಗೆ ಸರ್ವೇಶ ಶಂಕರಗೆ ನಭ ।
ಕೇಶ ನಾಗೇಶಭೂಷಿತಗೀಶಗೆ ॥
ವಾಸವಾದ್ಯಮರಾರ್ಚಿತಾಂಘ್ರಿಯುಗ ಶಿರಿಪುರದ ।
ಧೀಶ ಯಲಗೇಶ ಗಿರಿಜೇಶ ಶಿವಗೆ ॥
ಜಯ ಮಂಗಲಂ ಸದಾ ಶುಭಮಂಗಲಂ ॥ 366 ॥

॥ ಶ್ರೀರಸ್ತು ॥

ಅನುಬಂಧ :

ಫಣಿಗಿರಿ ಪ್ರತಿಷ್ಠಾನ ಸಂರಕ್ಷಣೆಮಾಡಿ ಡಿಜಿಟಲೀಕರಣಗೊಳಿಸಿದ

ಶಿರೂರು ಫಣಿಯಪ್ಪಯ್ಯನವರ ಸಂಗ್ರಹದ ತಾಡವಾಲೆಗ್ರಂಥಗಳ ವಿವರ

1. ಉತ್ತರರಾಮಾಯಣ : ತಿರುಮಲೆ ವೈದ್ಯ ವಿರಚಿತ ಭಾಮಿನಿ ಷಟ್ಪದಿ ಕಾವ್ಯ
2. ಪ್ರಹ್ಲಾದ ಚರಿತ್ರೆ : ನರಹರಿ ಕವಿ ವಿರಚಿತ ಭಾಮಿನಿ ಷಟ್ಪದಿ ಕಾವ್ಯ
3. ತೊರವೆ ರಾಮಾಯಣ : ಕುಮಾರ ವಾಲ್ಮೀಕಿ ವಿರಚಿತ
4. ಧ್ರುವಚರಿತ್ರೆ : ಹಟ್ಟಿಯಂಗಡಿ ರಾಮಭಟ್ಟ ವಿರಚಿತ ಯಕ್ಷಗಾನ ಪ್ರಸಂಗ
5. ಕನ್ನಡ ಭಾಗವತ ದಶಮ ಸ್ಕಂದ : ಚಾಟು ವಿಠ್ಠಲನಾಥ ವಿರಚಿತ
6. ಜೈಮಿನಿ ಭಾರತ-1 : ಲಕ್ಷ್ಮೀಶ ಕವಿಯ ವಾರ್ಧಕ ಷಟ್ಪದಿ ಕಾವ್ಯ
7. ಜೈಮಿನಿ ಭಾರತ-2 : ಲಕ್ಷ್ಮೀಶ ಕವಿಯ ವಾರ್ಧಕ ಷಟ್ಪದಿ ಕಾವ್ಯ
8. ಕುಮಾರವ್ಯಾಸ ಭಾರತ :ಭಾಮಿನಿ ಷಟ್ಪದಿ ಕಾವ್ಯ
9. ಶುಕಸಪ್ತತಿ : ಶರಜನಾಗ ಮಂತ್ರೀಶ ವಿರಚಿತ ಭಾಮಿನಿ ಷಟ್ಪದಿ ಕಾವ್ಯ
10. ಆದಿತ್ಯ ಪುರಾಣ : ರಾಮಚಂದ್ರ ಗುರುಶಿಷ್ಯ ವಿರಚಿತ ಭಾಮಿನಿ ಷಟ್ಪದಿ ಕಾವ್ಯ
11. ಮನಚರಿತ್ರೆ : ಮೂಲಿಕೆ ವೆಂಕಣ್ಣಕವಿ ವಿರಚಿತ ಯಕ್ಷಗಾನ
12. ಪಂಚವಟಿ ವಾಲಿಸುಗ್ರೀವರ ಕಾಳಗ: ಪಾರ್ತಿಸುಬ್ಬ ಕವಿ ವಿರಚಿತ ಯಕ್ಷಗಾನ
13. ರುಕ್ಮಿಣೀ ಕಲ್ಯಾಣ : ಕೆಳದಿಸುಬ್ಬ ವಿರಚಿತ ಯಕ್ಷಗಾನ

14. ಐರಾವತ : ಪಾರ್ತಿಸುಬ್ಬ ಕವಿ ವಿರಚಿತ ಯಕ್ಷಗಾನ

15. ಬಾಣಾಸುರ ಕಾಳಗ : ವಿಷ್ಣುವಾರಂಬಳ್ಳಿ ವಿರಚಿತ ಯಕ್ಷಗಾನ

16. ಪಾರಿಜಾತ : ಅಜಪುರ ಸುಬ್ಬ ವಿರಚಿತ ಯಕ್ಷಗಾನ ಪ್ರಸಂಗ

17. ರಾಮಾಯಣದ ಸುಂದರಕಾಂಡ: ತಿಗಳಾರಿ ಲಿಪಿಯಲ್ಲಿ

18. ಜ್ಯೋತಿಷ್ಯಶಾಸ್ತ್ರ ಗ್ರಂಥ : ತಿಗಳಾರಿ ಲಿಪಿಯಲ್ಲಿ

ವಿ.ಸೂ: ಈ ಎಲ್ಲಾ ಗ್ರಂಥಗಳು ಡಿಜಿಟಲ್ ರೂಪದಲ್ಲಿ (ಪಿಡಿಎಫ್) ಲಭ್ಯವಿದ್ದು ಆಸಕ್ತರು ಉಮೇಶ ಶಿರೂರು ಇವರನ್ನು ದೂರವಾಣಿಯಲ್ಲಿ (9448353910) ಸಂಪರ್ಕಿಸಿ. ಇ.ಮೇಲ್ ಮೂಲಕ ಉಚಿತವಾಗಿ ಪಡೆದುಕೊಳ್ಳಬಹುದು. ಫಣಿಗಿರಿ ಪ್ರತಿಷ್ಠಾನದ ಸಂಗ್ರಹದಲ್ಲಿರುವ ಹಲವು ಯಕ್ಷಗಾನ ಹಸ್ತಪ್ರತಿ ಮತ್ತು ಹಳೆಯ ಪ್ರಸಂಗಗಳ ಮುದ್ರಿತ ಪ್ರತಿಗಳು ಕೂಡ ಪಿಡಿಎಫ್ ರೂಪದಲ್ಲಿ ಉಚಿತವಾಗಿ ಸಿಗುತ್ತವೆ. ತಮ್ಮ ಬಳಿ ತಾಳೆಗರಿ ಗ್ರಂಥಗಳಿದ್ದರೆ ಅವುಗಳ ಸಂರಕ್ಷಣೆ ಮತ್ತು ಡಿಜಿಟಲೀಕರಣಗೊಳಿಸುವ ಕಾರ್ಯದಲ್ಲಿ ನಿಮಗೆ ಸಹಾಯ ಬೇಕಿದ್ದಲ್ಲಿ ಕೂಡ ಸಂಪರ್ಕಿಸಿ.

ಶಿರೂರು ಫಣಿಯಪ್ಪಯ್ಯನವರು ಕನ್ನಡವಾಙ್ಮಯ ಸದಾ
ನೆನಪಿನಲ್ಲಿಟ್ಟುಕೊಳ್ಳಬೇಕಾದ ಹಿರಿಯರು.ಡಾಶಿವರಾಮಕಾರಂತರ
ಯಕ್ಷಗಾನ ಬಯಲಾಟ ಕೃತಿಯಲ್ಲಿ ಫಣಿಯಪ್ಪಯ್ಯನವರಿಂದ ತಮಗಾದ
ಅನುಕೂಲವನ್ನು ಹಲವುಬಾರಿ ದಾಖಲಿಸಿದ್ದಾರೆ.ಯಕ್ಷಗಾನಕ್ಕೆ ಸಂಬಂಧಿಸಿ
ಸ್ವಯಮಾಸಕ್ತಿಯಿಂದ ,ಬಾಲ್ಯದಿಂದಲೇ ಸಂಗ್ರಹ,ಬರಹ,ಶೋಧನೆಗಳಲ್ಲಿ
ತೊಡಗಿಸಿಕೊಂಡವರು.ಕಲಾವಿದರಾಗಿಯೂ ಕಾಣಿಸಿಕೊಂಡವರು.ಯಕ್ಷಗಾನ
ಮಾತ್ರವಲ್ಲದೆ ಇತರ ಹಲವು ಕ್ಷೇತ್ರಗಳಲ್ಲಿ ಅವಿರತವಾಗಿ ಶ್ರಮಿಸಿ
ಜನಾನುರಾಗಿಗಳಾಗಿದ್ದವರು.ಅವರು ಬರೆದಿಟ್ಟುಕೊಂಡ ಹಸ್ತಪ್ರತಿಗಳು
ಇಂದು ಸಂಶೋಧಕರಿಗೆ ತುಂಬಾ ಮಹತ್ವವಾಗಿರುವುದು,ಅವರಲ್ಲಿದ್ದ
ತಾಡವಾಲೆ ಗ್ರಂಥಗಳು ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯಾಗುತ್ತಿರುವುದು
ಸ್ಮರಣೀಯ.ಅವರ ಪೂರ್ವಜರು ಶತಮಾನಗಳ ಹಿಂದೆ ನಮ್ಮೂರ
ಸಮೀಪದವರು ಎಂದುಕೇಳಿ ತುಂಬಾ ಸಂತೋಷಪಟ್ಟಿದ್ದೆ.
ಅತ್ಯುತ್ತಮ ಯಕ್ಷಕವಿಯಾದ ಫಣಿಯಪ್ಪಯ್ಯನವರು ಯಕ್ಷಗಾನಕ್ಕೆ
ಅತ್ಯಪಯುಕ್ತವಾದ ಕೃತಿಗಳನ್ನು ನೀಡಿದ್ದಾರೆ.ಈ ಸಂಕಲನದಲ್ಲಿರುವ
ಪ್ರಸಂಗಗಳು ಬರೀ ಪ್ರಸಂಗಗಳಾಗಿರದೆ ಹಲವು ಬಗೆಯ ಸುಂದರ
ಛಂದೋಬಂಧಗಳಿಂದ ಕಂಗೊಳಿಸುವ ಕಾವ್ಯಗಳು ಎಂದೇ ನಾನು
ಭಾವಿಸುತ್ತೇನೆ.ಇಂತಹ ಕೃತಿ ಸಂಪದಗಳನ್ನು ಪ್ರಖ್ಯಾತ ವಿದ್ವಾಂಸರಾದ
ಡಾ.ಕಬ್ಬಿನಾಲೆ ವಸಂತ ಭಾರಧ್ವಾಜರ ಸಂಪಾದಕತ್ವದಲ್ಲಿ
ಸಿದ್ಧಪಡಿಸಿ,ಕಲಾಲೋಕಕ್ಕೂ ಯಕ್ಷಲೋಕಕ್ಕೂ ಮಹತ್ವದ ಕೃತಿಗಳನ್ನು
ನೀಡುತ್ತಿರುವ ಫಣಿಯಪ್ಪಯ್ಯನವರ ಸುಪುತ್ರ ಶ್ರೀ ಉಮೇಶ ಶಿರೂರು
ಅವರನ್ನು ಹೃತ್ಪೂರ್ವಕ ಅಭಿನಂದಿಸುತ್ತೇನೆ.ಅವರು ರಚಿಸಿದ ಇತರ
ಕೃತಿಗಳು ,ಹೀಗೇ ಬೆಳಕು ಕಾಣುವಂತಾಗಲಿ ,ಅನುಪಲಬ್ಧ ಕೃತಿಗಳು
ಉಪಲಬ್ಧವಾಗಲಿ.ಶಿರೂರು ಫಣಿಯಪ್ಪಯ್ಯನವರ ಬಹುಮುಖೀ ವ್ಯಕ್ತಿತ್ವ
ಸಾರಸ್ವತ ಲೋಕಕ್ಕೆ ಪರಿಚಿತವಾಗಲಿ.

- ಶ್ರೀಧರ.ಡಿ.ಎಸ್ ಕಿನ್ನಿಗೋಳಿ
ಯಕ್ಷಗಾನ ವಿದ್ವಾಂಸರು

ಫಣಿಗಿರಿ ಪ್ರತಿಷ್ಠಾನ
ಶಿರೂರು